ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಕನ್ನಡ ವಾರಪತ್ರಿಕೆ




Blog : janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 46
ನವೆಂಬರ್ 13, 2011

ಪುಟ 16 ರೂ. 5/-



ವ್ಯಾಪಾರೀಕರಣ ಕೋಮುವಾದೀಕರಣದ ಅಡಕತ್ತರಿಯಲ್ಲಿ ಶಿಕ್ಷಣ




ರಾಜ್ಯ ಸಮ್ಮೇಳನಕ್ಕೆ ಚಾಲನೆ





ಬಡ ಜನರ ಶಿಕ್ಷಣದ ಹಕ್ಕು ಕಸಿಯುವ ಹುನ್ನಾರ

- ಉದ್ಘಾಟನೆಯಲ್ಲಿ ನಾಡೋಜ ಚಂಪಾ ಟೀಕೆ



ಭಿನ್ನಮತ ಹೆಚ್ಚಿಸಿದ ಯಾತ್ರೆ

ಅಮೆರಿಕಾ - ನ್ಯಾಟೋ ಮಸಲತ್ತುಗಳು

ಅರಬ್ ಜನ ಸಮೂಹಗಳಿಗೆ ಅಪಹಾಸ್ಯ



ಚಳುವಳಿಗೆ ಸ್ಫೂರ್ತಿಯಾಯ್ತು

ಹಮಾಲಿ ಕಾರ್ಮಿಕರ ಸಮಾವೇಶ

ಜನಶಕ್ತಿ
ಕನ್ನಡ ವಾರಪತ್ರಿಕೆ

ಆಶಾ ಕಾರ್ಯಕರ್ತೆಯರ ಬದುಕು ನಿರಾಶೆಯಲ್ಲಿ ಕಮರಿ ಹೋಗಬೇಕೇ?

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಹಾಗೂ ಆಶಾ ಕಾರ್ಯಕರ್ತೆಯರ ಅಭದ್ರ ಉದ್ಯೋಗ ಪರಿಸ್ಥಿತಿ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ

ಭಾರತ ಬಡವರಿಂದ ಕೂಡಿದ ಶ್ರೀಮಂತ ರಾಷ್ಟ್ರ ಎಂಬ ಹೇಳಿಕೆಯು ಕಣ್ಣಿಗೆ ಕಾಣುವ ಸತ್ಯವಾಗಿದೆ. 'ಜನ ಸಮುದಾಯದ **ಅಭಿವೃದ್ಧಿಯೇ ಸರ್ಕಾರಗಳ ಮೂಲ ಮಂತ್ರ'** ಎಂದು ಹೇಳಿಕೊಳ್ಳಲಾಗಿರುವ ವ್ಯವಸ್ಥೆಯಲ್ಲಿ ನಾವಿದ್ದೇವೆ. ಭಾರತದ ಬೆಳವಣಿಗೆ ದರ ವಾರ್ಷಿಕ ಶೇ. 9 ರಷ್ಟು ಏರುತ್ತಿದೆ ಎಂದು ಕೇಂದ್ರ ಸರ್ಕಾರ ಆಗಾಗ ಅಂಕಿ-ಸಂಖ್ಯೆ ಬಿಡುಗಡೆ ಮಾಡುತ್ತಲೇ ಇದೆ. ಬಡತನದ ಸಾಗರದ ಮಧ್ಯೆ ಶ್ರೀಮಂತ ದ್ವೀಪದ ಸೃಷ್ಟಿಗೆ ನಮ್ಮ ಸರ್ಕಾರಗಳ ಆರ್ಥಿಕ ನೀತಿಗಳು ಮುಂದಾಗಿವೆ. ಹಾಗಾಗಿ ಅನಕ್ಷರತೆ, ಬಡತನ, ಹಸಿವು, ನಿರುದ್ಯೋಗ, ಕೂಲಿ-ಸಂಬಳ ರಹಿತ ದುಡಿಮೆಯಿಂದಾಗಿ ದೈಹಿಕ, ಮಾನಸಿಕ ಅನಾರೋಗ್ಯದಿಂದ ಬಳಲುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆದರೆ, ಭಾರತದ ಈ ಮೂಲ ಸಮಸ್ಯೆಗಳನ್ನು ಅರ್ಥೈಸಿಕೊಳ್ಳಲಾರದ ಆರ್ಥಿಕ ತಜ್ಞರುಗಳು ರೂಪಿಸಿದ ತಾತ್ಕಾಲಿಕ ಸ್ವರೂಪದ ಯೋಜನೆಯೆಂಬಂತೆ **ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ** (ಎನ್.ಆರ್.ಎಚ್.ಎಂ.) ಪ್ರಾರಂಭವಾಯಿತು.

ಎಲ್ಲರಿಗೂ ಆರೋಗ್ಯ ನೀಡುವುದು ಸರ್ಕಾರಗಳ ಆದ್ಯ ಕರ್ತವ್ಯ. ವೈಜ್ಞಾನಿಕ ಸಲಹೆಗಳಂತೆ ಆರೋಗ್ಯಕ್ಕಾಗಿ ಜಿ.ಡಿ.ಪಿ.ಯ ಕನಿಷ್ಟ ಶೇ. 5 ಮೀಸಲಿಡಬೇಕು. ಆದರೆ, ಪ್ರಸಕ್ತ ಸರ್ಕಾರಗಳು ತಮ್ಮ ಬಜೆಟ್ಟಿನ ಕೇವಲ ಶೇ.1 ಮಾತ್ರವೇ ಮೀಸಲಿಟಿದೆ.

ಕಲ್ಯಾಣ ಕಾರ್ಯಕ್ರಮಗಳಾದ ಶಿಕ್ಷಣ-ಆಹಾರ-ಆರೋಗ್ಯಕ್ಕೆ ಖರ್ಚು ಮಾಡುತ್ತಿರುವ ಪ್ರಮಾಣ ಹಾಗೂ ಅದರ ಅಸಮರ್ಪಕ ನಿರ್ವಹಣೆಯಿಂದಾಗಿ ಜನ ರೋಸಿ ಹೋಗುವಂತಹ ವಾತಾವರಣ ಸೃಷ್ಟಿಮಾಡಿ ಈ ಸೇವಾಕ್ಷೇತ್ರಗಳೂ ಕೂಡ ಖಾಸಗಿ ಹೂಡಿಕೆಗೆ ತೆರೆದುಕೊಳ್ಳುವಂತೆ ಮಾಡಲಾಗುತ್ತಿದೆ. ಸರ್ಕಾರವು ಕೊಡುವ ಅನುದಾನವನ್ನು ಕಡಿತಗೊಳಿಸಿ, ಆರೋಗ್ಯ ಕ್ಷೇತ್ರವನ್ನು ಸಂಪೂರ್ಣ ಜಾಳು ಜಾಳಾಗಿಸಿ, ದುರ್ಬಲತೆಯತ್ತ ನೂಕಿದೆ. ಅಂತಾರಾಷ್ಟ್ರೀಯ ಹಣಕಾಸು ಒಡಂಬಡಿಕೆಯ ಭಾಗವಾಗಿ ಈ ಕ್ಷೇತ್ರದಲ್ಲಿಯೂ ಸಾರ್ವಜನಿಕ ಖಾಸಗಿ ಸಹಭಾಗಿತ್ವವನ್ನು (ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್) ಅಂದರೆ ಪಿಪಿಪಿ ಯನ್ನು ಜನತೆಗೆ ಗೊತ್ತಿಲ್ಲದಂತೆ ಜಾರಿಮಾಡಲಾಯಿತು. ಇದರ ವಿರುದ್ಧ ಜನ ಚಳುವಳಿಗಳು ವ್ಯಾಪಕವಾಗಿ ನಡೆದ ಬಳಿಕ ಆರೋಗ್ಯವನ್ನು ಮನೆಮನೆಗೆ ತಲುಪಿಸುತ್ತೇವೆ ಎಂಬ ಘೋಷಣೆಯೊಂದಿಗೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಎಚ್.ಎಂ) ನ್ನು 2005ರಿಂದ ಜಾರಿಗೆ ತರಲಾಯಿತು. ಜನತೆಯ ಅಕಾಲಿಕ ಮರಣವನ್ನು ತಡೆಗಟ್ಟಿ, ಆರೋಗ್ಯ ದಯಪಾಲಿಸುವ ಈ ಯೋಜನೆಯ ಆಯುಷ್ಯ ಕೇವಲ 2012 ರವರೆಗೆ ಮಾತ್ರ ! ಹೇಗಿದೆ ಪರಿಸ್ಥಿತಿಯ ವ್ಯಂಗ್ಯ. ಅಷ್ಟರೊಳಗೆ ಎಲ್ಲರಿಗೂ ಆರೋಗ್ಯ ಕೊಡುತ್ತೇವೆಂಬುದು ಕೇಂದ್ರ ಸರ್ಕಾರದ ಘೋಷಣೆ ಹಾಗೂ ಘೋಷಿತ ಗುರಿ.

ಆದರೆ, ಈ ಎನ್.ಆರ್.ಎಚ್.ಎಂ. ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಸರ್ಕಾರ ಯಾವ ನಿರ್ಧಾರ ಕೈಗೊಂಡಿತು? ತನ್ನ ಯಂತ್ರವಾಗಿ ಯಾರನ್ನು ಬಳಸಿಕೊಳ್ಳಲು ಮುಂದಾಯಿತು? ಅಂಥವರ ಸ್ಥಿತಿ ಇಂದು ಹೇಗಿದೆ? ಹೀಗೆ ಪ್ರಶ್ನಿಸಿಕೊಂಡು ಮೂಲಕ್ಕೆ ಹೋದರೆ ಕೂಲಿರಹಿತವಾಗಿ ದುಡಿಯುವ ಮಹಿಳೆಯರ ಒಂದು ದೊಡ್ಡ ಗೋಳಿನ ಕಥೆ ತೆರೆದುಕೊಳ್ಳುತ್ತದೆ.



ವಿಚಾರಸಂಕಿರಣವನ್ನು ಬೆಂಗಳೂರು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕರಾದ ಡಾ. ಮಂಜುನಾಥ್ ಉದ್ಘಾಟಿಸಿ ಮಾತನಾಡಿದರು.

ಎನ್.ಆರ್.ಎಚ್.ಎಂ. ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರು

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಪ್ರಾರಂಭವಾದಾಗ ಗುರಿನಿಗದಿತ ಕಾರ್ಯಕ್ರಮವಾಗಿ 2005 ರಿಂದ 2012 ರ ತನಕ 'ಎಲ್ಲರಿಗೂ ಆರೋಗ್ಯ' ಎಂಬ ಘೋಷಣೆಯಡಿ ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತರ (ಎಕ್ರೆಡಿಟೆಡ್ ಸೋಷಿಯಲ್ ಹೆಲ್ತ್ ಆಕ್ಟಿವಿಸ್ಟ್) ಪಡೆಯನ್ನು ಕೇಂದ್ರ ಸರ್ಕಾರವು ಸನ್ನದ್ಧಗೊಳಿಸಲು ಆದೇಶಿಸಿತು. ಅಂದು ಕೇಂದ್ರದಲ್ಲಿ ಯುಪಿಎ ಸರ್ಕಾರ ಆಡಳಿತ ನಡೆಸುತ್ತಿತ್ತು. ಸಾಮಾಜಿಕ ಕಾಳಜಿಯೊಂದಿಗೆ ದುಡಿಯುವ ಜನರ ಪರವಾಗಿ ಹೋರಾಡುವ ಎಡ ಪಕ್ಷಗಳು ಯುಪಿಎ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿದ್ದವು. ಎಲ್ಲರಿಗೂ ಆಹಾರ, ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಆರೋಗ್ಯ ನೀಡುವಂತಾಗಲು ಆಯಾ ಇಲಾಖೆಯ ಅಡಿಯಲ್ಲಿ ಖಾಯಂ ನೌಕರರನ್ನು ನೇಮಿಸಿ, ಮೂಲ ಸೌಕರ್ಯ ಒದಗಿಸಬೇಕೆಂದು ಎಡಪಕ್ಷಗಳ ಒತ್ತಾಯವಾಗಿತ್ತು. ಅಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಈ ಅಂಶಗಳನ್ನು ಸೇರಿಸಲು ಸಾಮೂಹಿಕ ಚಳುವಳಿಯೂ ನಡೆದಿತ್ತು. ಕೇಂದ್ರ ಸರ್ಕಾರವು ಪ್ರಾರಂಭದಲ್ಲಿ ಈ ಬೇಡಿಕೆಗಳಿಗೆ ಮಣಿದಂತೆ ತೋರಿದರೂ ನಂತರ ವಿಶ್ವ ಬ್ಯಾಂಕ್, ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಷರತ್ತುಗಳಿಗೆ ಮಣಿದು ಖಾಯಂ ಉದ್ಯೋಗದ ಬದಲು ಪುಕ್ಕಟೆ ದುಡಿಸಿಕೊಳ್ಳುವ 'ಪ್ರೋತ್ಸಾಹ ಧನ'ದ ಕಾರ್ಯಕರ್ತರನ್ನು ಅಂದರೆ ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತರನ್ನು ನೇಮಿಸಿಕೊಳ್ಳಲು ಆದೇಶಿಸಿದ್ದು ಕೇಂದ್ರ ಸರ್ಕಾರದ ಜವಾಬ್ದಾರಿರಹಿತ ವರ್ತನೆ ಮಾತ್ರವಲ್ಲ, ಜನಾರೋಗ್ಯದ ಕುರಿತು ನಿಷ್ಕಾಳಜಿ ತೋರಿಸುತ್ತದೆ.

ಜನಾರೋಗ್ಯದ ಘೋಷಿತ ಸಾಧಿಸಲು ಗ್ರಾಮೀಣ ಆರೋಗ್ಯ ಮತ್ತು ಸ್ವಚ್ಛತಾ ಸಮಿತಿ (ಪಂಚಾಯಿತಿ ಪ್ರತಿನಿಧಿಗಳು, ಕಿರಿಯ ಆರೋಗ್ಯ ಸಹಾಯಕಿಯರು, ವಿವಿಧೋದ್ದೇಶ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಉಪಾಧ್ಯಾಯರು ಮತ್ತು ಆರೋಗ್ಯ ಕಾರ್ಯಕರ್ತರನ್ನು ಒಳಗೊಂಡು) ರಚಿಸಲಾಯಿತು. ಪ್ರಾರಂಭದಲ್ಲಿ ದುರ್ಬಲ ಆರೋಗ್ಯ ವ್ಯವಸ್ಥೆಯ 18 ರಾಜ್ಯಗಳಲ್ಲಿ ನಂತರ ರಾಷ್ಟ್ರಾದ್ಯಂತ ಕನಿಷ್ಟ ಖರ್ಚಿನಲ್ಲಿ ಜಾರಿಗೊಳಿಸಲು ಸರ್ಕಾರ ಮುಂದಾಯಿತು.

ಗಂಭೀರವಾದ ಪ್ರಶ್ನೆ ಇರುವುದು ಇಲ್ಲೇ. ಸರ್ಕಾರ ಘೋಷಿಸಿದ ಈ ದೊಡ್ಡ ಗುರಿಗಳನ್ನು ಸಾಧಿಸಲು ಪರಿಣಾಮಕಾರಿ ಆರೋಗ್ಯ ಸೇವೆಯನ್ನು ರೂಪಿಸಲು 7 ವರ್ಷಗಳಲ್ಲಿ ಸಾಧ್ಯವೇ? ಆಮೇಲೆ ಜನರ ಆರೋಗ್ಯದ ಪ್ರಶ್ನೆ ಏನು ? ಎಲ್ಲಾ ದುಡಿಯುವ ಜನರಿಗೆ ದಿನದಲ್ಲಿ 2,700 ಕ್ಯಾಲೊರಿ ಆಹಾರ ತಿನ್ನಲು (ಸರ್ಕಾರವೇ ನಿರ್ಧರಿಸಿದಷ್ಟೇ ಆದರೂ) ತಿಂಗಳಿಗೆ ಕನಿಷ್ಟ 7,500 ರೂ ಆದಾಯ ಬೇಕು. ದುಡಿಮೆಗೆ ತಕ್ಕ ಕೂಲಿ_ಆದಾಯ ಕೊಟ್ಟರೆ ಮಾತ್ರವೇ ಜನರಿಗೆ ಆರೋಗ್ಯ ಕಾಪಾಡಿಕೊಳ್ಳುವ ಶಕ್ತಿ ಗಳಿಸಿಕೊಳ್ಳಲು ಸಾಧ್ಯ. ಹಾಗಾಗಿ ಕೂಲಿ-ಕೂಳಿಗೆ ಆದ್ಯತೆ ನೀಡದೇ ಮೇಲ್ನೋಟದ ತೋರಿಕೆಯ ಕಾರ್ಯಕ್ರಮಗಳಿಂದ, 'ಸಮಯಾಧಾರಿತ-ಗುರಿನಿಗದಿತ' ಕಾರ್ಯಕ್ರಮ ಯಶಸ್ಸು ಕಾಣದು.

ಸರ್ಕಾರವೇ ನೇಮಿಸಿದ ಅರ್ಜುನ ಸೇನ್ ಗುಪ್ತಾ ವರದಿ ಹೇಳುವಂತೆ ದೇಶದಲ್ಲಿ 77% ಜನರ ಒಂದು ದಿನದ ಆದಾಯ 20 ರೂ.ಕ್ಕಿಂತ ಕಡಿಮೆ. 'ಆಶಾ' ಳಿಗೆ ದಿನಕ್ಕೆ ಇಷ್ಟು ಇಲ್ಲ. ಕೇವಲ ಪ್ರೋತ್ಸಾಹ ಧನ. ಸಿಕ್ಕಿದರೆ ಸಿಕ್ಕಿತು. ಎಲ್ಲವೂ ಮೇಲಾಧಿಕಾರಿಗಳ ಮರ್ಜಿಗೆ ತಕ್ಕಂತೆ.

ಆಶಾ ಕಾರ್ಯಕರ್ತೆಯರ ಕೆಲಸದ ಅಗಾಧ ಹೊರೆ

ಸರ್ಕಾರಗಳು ಹೇಳುವಂತೆ, ಸಮುದಾಯದ ಆರೋಗ್ಯಕ್ಕಾಗಿ 'ಆಶಾ' ಕೆಲಸ ಮಾಡಬೇಕು. ಆದರೆ ಕನಿಷ್ಟ ವೇತನದ ಆಧಾರವೇ ಇಲ್ಲದ ಆಶಾ ಕಾರ್ಯಕರ್ತೆಯು ಉಪವಾಸವಿದ್ದು ಎಷ್ಟು ದಿನ ಈ ಕೆಲಸ-ಕಾರ್ಯ ಮಾಡಬಹುದೆಂಬುದನ್ನು ಚಿಂತಿಸುವಲ್ಲಿ ಸರ್ಕಾರ 'ಜಾಣ ಮೌನ' ವಹಿಸಿದೆ.

'ಆಶಾ'ದವರ ಕೆಲಸವೇನೆಂದು ಮಾರ್ಗದರ್ಶಿ ಪುಸ್ತಕ ಓದಿದರೆ ತಲೆ ಸುತ್ತಿ ಬರುತ್ತದೆ. 25 ವಿಧದ ಕೆಲಸ ಕಾರ್ಯಕ್ರಮ ಮಾಡಬೇಕು!! ಮುಖ್ಯವಾಗಿ ಗರ್ಭಿಣಿ ಸ್ತ್ರೀಯರನ್ನು ಗುರುತಿಸುವುದು, ದಾಖಲಿಸುವುದು, ಕಬ್ಬಿಣಾಂಶ ಮಾತ್ರೆ ನೀಡುವುದು, ಟಿಟಿ ಲಸಿಕೆ ಹಾಕುವುದು, ನವಜಾತ ಶಿಶುವಿನ ಆರೈಕೆ, ತಿಂಗಳ ಕಾಲ ಮೇಲ್ವಿಚಾರಣೆ ಮಾಡುವುದು, ಹೆಪಟೈಟಿಸ್ ಬಿ, ಬಿಸಿಜಿ, ಡಿಪಿಟಿ, ಪೋಲಿಯೋ ಮುಂತಾದ ಲಸಿಕೆ ಹಾಕುವುದು, ಚುಚ್ಚು ಮದ್ದು ವ್ಯತಿರಿಕ್ತ ಪರಿಣಾಮ ಬೀರಿದಲ್ಲಿ ಚಿಕಿತ್ಸೆ ನೀಡುವುದು. 2,000 ಗ್ರಾಂ.ಕ್ಕಿಂತ ಕಡಿಮೆ ತೂಕ ಹೊಂದಿದ ನವಜಾತ ಶಿಶುವಿನ ಆರೈಕೆ, ಹೆಂಗೆ ಆದ ಎರಡು ತಿಂಗಳೊಳಗೆ ಶಿಶುವಿನ ತೂಕ ದಾಖಲಿಸುವುದು, ಹೆರಿಗೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, 2 ದಿನ ಅಲ್ಲಿಯೇ ಇದ್ದು ಅವರ ಸೇವೆ ಮಾಡುವುದು, ಗರ್ಭಿಣಿ ತಾಯಿಯ ಅಥವಾ ಶಿಶುವಿನ ಮರಣ ಸಂಭವಿಸಿದರೆ ಸ್ಥಳಕ್ಕೆ ಭೇಟಿ ನೀಡಿ ದಾಖಲಿಸುವುದು, ಸೋಂಕಿನ ಪ್ರಕರಣ, ಲಸಿಕಾ ಕಾರ್ಯಕ್ರಮಕ್ಕೆ ಪ್ರಚಾರ ಮಾಡಿ ಸ್ಥಳಕ್ಕೆ ಮಕ್ಕಳನ್ನು ಕರೆತರುವುದು, ಜ್ವರ ಪ್ರಕರಣ ಪತ್ತೆ ಹಚ್ಚುವುದು, ಕುಷ್ಠರೋಗ ದಾಖಲು, ಕುಷ್ಠರೋಗ ಗುಣಪಡಿಸುವುದು, ಸಾಂಕ್ರಾಮಿಕ ರೋಗ ನಿಯಂತ್ರಣ, ಗ್ರಾಮ ನೈರ್ಮಲ್ಯ ಕೆಲಸ, ಪುರುಷ ಅಥವಾ ಮಹಿಳೆಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಲು ಕರೆದೊಯ್ಯುವುದು, ಕ್ಷಯ, ಮಲೇರಿಯಾ ನಿವಾರಣೆ ಕಾರ್ಯಕ್ರಮ ಮತ್ತು ಮೂರ್ಛೆ ಮತ್ತು ಮಾನಸಿಕ ರೋಗ ದಾಖಲಿಸಿ ಚಿಕಿತ್ಸೆ ನೀಡುವುದು. ಹೀಗೆ ಪಟ್ಟಿ ಬೆಳೆಯುತ್ತದೆ. ಈ ಕೆಲಸಗಳಿಗೆಲ್ಲ ಕನಿಷ್ಠ 5 ರೂ.ನಿಂದ ಗರಿಷ್ಠ 400 ರ ವರೆಗೆ ಬಿಲ್ ಪಾವತಿಸಿಕೊಂಡು, ಪ್ರೋತ್ಸಾಹ ಧನದ ರೂಪದಲ್ಲಿ ಪಡೆಯಬಹುದು. ಆದರೆ ಇದಕ್ಕೆಲ್ಲ ಮೇಲಾಧಿಕಾರಿಗಳ ಋಜು ಅಗತ್ಯ.

ಮುಂದುವರಿಯುವುದು

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಶಿಕ್ಷಣ ವಂಚಿಸುವ ನಿರ್ಧಾರ

ಮಕ್ಕಳ ಹಾಜರಾತಿ ಕಡಿಮೆಯಿದೆಯೆಂದು 3174 ಸರ್ಕಾರಿ ಶಾಲೆಗಳನ್ನು ಮುಚ್ಚುವ ರಾಜ್ಯ ಸರ್ಕಾರದ ನಿರ್ಧಾರ ಶಿಕ್ಷಣ ದ್ರೋಹವೇ ಆಗಿದೆ. ಎಲ್ಲೆಡೆ ಎದ್ದು ಬಂದ ಪ್ರತಿಭಟನೆ, ಸಾರ್ವಜನಿಕ ಒತ್ತಡದಿಂದಾಗಿ ಅಂತಹ ನಿರ್ಧಾರವನ್ನು ಕೈ ಬಿಟ್ಟಿರುವುದಾಗಿ ಮುಖ್ಯಮಂತ್ರಿ ಸದಾನಂದಗೌಡರು ರಾಜ್ಯೋತ್ಸವದ ಸಂದರ್ಭದಲ್ಲಿ ಹೇಳಿರುವುದು ಕೇವಲ ನುಣಿಚಿಕೊಳ್ಳುವ ಯತ್ನವೆಂಬುದು ಅವರೇ ಮುಂದೆ ಆಡಿದ ಮಾತಿನಿಂದ ಸ್ಪಷ್ಟವಾಗುತ್ತದೆ. ಶಾಲೆಗಳನ್ನು ಮುಚ್ಚುವ/ವಿಲೀನಗೊಳಿಸುವ ಬಗ್ಗೆ ಆಯಾ ಜಿಲ್ಲಾ, ತಾಲ್ಲೂಕು ಪಂಚಾಯತ್ ನಿರ್ಧಾರ ಕೈಗೊಳ್ಳುತ್ತವೆಯೆಂದರೆ ಸರ್ಕಾರದ ಆದೇಶ ಇನ್ನೂ ಅಸ್ತಿತ್ವದಲ್ಲಿದೆಯೆಂದೇ ಅರ್ಥವಲ್ಲವೇ?. ಇಂತಹ ಬೂಟಾಟಿಕೆ ಮಾತುಗಳಲ್ಲೇ ಕಾಲ ಕಳೆಯುವ ಮುಖ್ಯಮಂತ್ರಿಗಳ ವರಸೆ ಬೇಜಬ್ದಾರಿ ಮಾತ್ರವಲ್ಲ ಆಸ್ಥಾನಕ್ಕೆ ತಕ್ಕದೂ ಅಲ್ಲ ಇಂತಹುದೇ ಮಾತುಗಳನ್ನು ಸಚಿವ ಕಾಗೇರಿ ಆಡುತ್ತಿದ್ದಾರೆ.

ರಾಜ್ಯದ ಬಿಜೆಪಿ ಸರ್ಕಾರವೂ ಉದಾರಿಕರಣ, ಜಾಗತಿಕರಣದ ಆರ್ಥಿಕ ನೀತಿಗಳನ್ನು ಒಪ್ಪಿ ಮನಃಪೂರ್ವಕ ಜಾರಿಗೊಳಿಸುತ್ತಿದೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣ ನೀಡುವ ಹೊಣೆಯಿಂದ ನುಣುಚಿಕೊಳ್ಳುತ್ತಿವೆ. ಶಿಕ್ಷಣದ ಮೂಲಭೂತ ಹಕ್ಕಿನ ಬಗ್ಗೆ ಮಾತನಾಡುವ ಇವರೇ ಶಿಕ್ಷಣ ನೀಡುವುದು ತಮ್ಮ ಹೊಣೆಯಲ್ಲವೆಂದೂ, ಶಿಕ್ಷಣವನ್ನು ಖಾಸಗೀಕರಣಗೊಳಿಸುತ್ತಾ ಮಾರಾಟದ ಸರಕನ್ನಾಗಿಸಿರುವುದನ್ನು ಸಮರ್ಥಿಸುತ್ತವೆ. ಪ್ರತಿ ಬಜೆಟ್ಟಿನಲ್ಲಿಯೂ ಶಿಕ್ಷಣಕ್ಕೆ ನೀಡುವ ಹಣ ಅಗತ್ಯಕ್ಕಿಂತ ಕಡಿಮೆಯಾಗಿದೆ. ಎಲ್ಲರಿಗೂ ಸಾರ್ವತ್ರಿಕ ಶಿಕ್ಷಣ ನೀಡುವುದನ್ನು ಮಾತು–ಕೃತಿಗಳಲ್ಲಿ ನಿರಾಕರಿಸಿವೆ. ಈಗಲೂ ಶಿಕ್ಷಣ ಪಡೆದವರ ಪ್ರಮಾಣ ಶೇ. 60 ನ್ನು ದಾಟಿಲ್ಲ. ಕಿತ್ತು ತಿನ್ನುವ ಬಡತನ, ಸಾಮಾಜಿಕ– ಸಾಂಸ್ಕೃತಿಕ ಹಿಂದುಳಿದಿರುವಿಕೆ ಪ್ರಾಥಮಿಕ ಹಂತದಲ್ಲಿಯೇ ಶಾಲೆ ಬಿಡುವ ಸ್ಥಿತಿಯನ್ನು ನಿರ್ಮಿಸಿರುವುದು ಇದರಲ್ಲಿ ದಲಿತ, ಬಡ–ಹಿಂದುಳಿದ, ಅಲ್ಪ ಸಂಖ್ಯಾತ ಮಕ್ಕಳು ಕಲಿಕೆಯಿಂದ ಬಿಡಿಸುವ , ಶಾಲೆ ಬಿಡುವಲ್ಲಿ ಹೆಚ್ಚು ಎಂಬುದು ಅಧ್ಯಯನಗಳು ಹೇಳುತ್ತವೆ.

ಹೀಗಿರುವಾಗ ಈ ಸ್ಥಿತಿಯನ್ನು ಸುಧಾರಿಸಲು ಕ್ರಮ ಕೈಗೊಳ್ಳುವ ಬದಲು ಅವಕಾಶದ ಬುಡವನ್ನೇ ಹಾರಿಸಲಾಗುತ್ತಿದೆ. ಕರ್ನಾಟಕದ ಈ ಶಾಲೆಗಳಲ್ಲಿ ಯಾಕೆ 15–20 ಮಕ್ಕಳು ಮಾತ್ರವೇ ಶಾಲೆಗೆ ಬರುತ್ತಿದ್ದಾರೆ. ಹಾಜರಾತಿ ಯಾಕೆ ಕಡಿಮೆಯಾಯಿತು ಎಂಬ ಬಗ್ಗೆ ಕೂಲಂಕುಶವಾಗಿ ಪರಿಶೀಲನೆ ನಡೆಸಿ ಪೂರ್ಣ ಹಾಜರಾತಿ ಬರುವಂತೆ ಕ್ರಮ ವಹಿಸಬೇಕಿತ್ತು. ಈಗಲೂ ರಾಜ್ಯದ 38 ಸಾವಿರ ಶಿಕ್ಷಕರ ಹುದ್ದೆಗಳ ಖಾಲಿ ಇವೆ. ನೇಮಕಾತಿ ನಿರ್ಬಂಧವಿದೆ, ಕನಿಷ್ಠ ಪಿಠೋಪಕರಣ, ಅಧ್ಯಯನ ಸೌಲಭ್ಯಗಳು ಇಲ್ಲವಾಗಿವೆ. ಸ್ವಂತ ಕಟ್ಟಡಗಳಿಲ್ಲ, ಇದ್ದಾಗ್ಯೂ ಜೀರ್ಣಾವಸ್ಥೆಯಲ್ಲಿವೆ. ಶಿಕ್ಷಕರ ಬೌದ್ಧಿಕ ಹಾಗೂ ಜೀವನ ಮಟ್ಟ ವಿಸ್ತರಿಸಲು ಕ್ರಮಗಳಿಲ್ಲದೇ ಅಲ್ಲೇ ಹೊರೆ ಹೊರಿಸಲಾಗಿದೆ. ಸರ್ಕಾರಿ ಶಾಲೆಗಳ ಈ ದುಸ್ಥಿತಿ, ಬದಲಾದ ಕಾಲಕ್ಕೆ ತಕ್ಕಂತೆ ಸುಸಜ್ಜಿತ ಗೊಳ್ಳದಿರುವುದು, ಜಾಗತೀಕರಣದ ಪ್ರಭಾವ, ಆಂಗ್ಲ ಭಾಷೆ ಮಾಧ್ಯಮ ವ್ಯಾಮೋಹ ಶಾಲೆಗೆ ಸೇರದಿರಲು ಮತ್ತೊಂದು ಕಾರಣ. ಇಂತಹ ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಳ್ಳಲು ಖಾಸಗೀ ಶಾಲೆಗಳಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಹೆಸರಿಗಷ್ಟೇ ಕನ್ನಡ ಮಾಧ್ಯಮ ಪರವಾನಗಿ ಇಂಗ್ಲೀಷ್ ಮಾಧ್ಯಮದಲ್ಲಿ ಭೋಧಿಸುವ ಇವುಗಳು ಒಂದು ಹಂತದಲ್ಲಿ ಕನ್ನಡ ಮಾತೃ ಭಾಷೆಗೆ ಕುತ್ತಾಗುವುದರಲ್ಲಿ ಅನುಮಾನವೂ ಇಲ್ಲ.

ಶಿಕ್ಷಣ ಕ್ಷೇತ್ರದ ಈ ಗಂಭೀರ ಪ್ರಶ್ನೆಗಳ ಬಗ್ಗೆ ತಲೆಕೆಡಿಸಿಕೊಳ್ಳದೇ ಸರ್ಕಾರಿ ಶಾಲೆಗಳನ್ನು ಮುಚ್ಚಿಸುವ ನಿರ್ಧಾರವು ಹಲವು ಅನುಮಾನಗಳಿಗೆ ಎಡೆ ಮಾಡಿದೆ. 3–4 ಮಕ್ಕಳು ಕಲಿಯುವ ಸಂಸ್ಕೃತ ಶಾಲೆಗಳಿಗೆ ಇರುವ ಮಾನ ದಂಡ ಕನ್ನಡದ ಶಾಲೆಗಳಿಗೇಕಿಲ್ಲ? ಹೀಗೆ ಖಾಲೀ ಮಾಡಿದ ಶಾಲೆಗಳನ್ನು ಬಾಲವಾಡಿ, ಅಂಗನವಾಡಿಗಳನ್ನು ದತ್ತು ಪಡೆದಿರುವ ಸಂಘಪರಿವಾರಕ್ಕೆ ವರ್ಗಾಯಿಸುವ ಹುನ್ನಾರವಿದೆ ಎಂದು ಹಲವಾರು ಚಿಂತಕರು ಹೇಳುತ್ತಿರುವುದು ಗಂಭೀರ ಸಂಗತಿ. ಇವೆಲ್ಲವುಗಳ ಮೂಲಕ ಪ್ರಾಥಮಿಕ ಹಂತದಿಂದಲೇ ಶಿಕ್ಷಣವನ್ನು ಖಾಸಗೀಕರಣದ ವ್ಯಾಪಾರಕ್ಕೆ ಒಪ್ಪಿಸುವುದೇ ಹಿಂದಿರುವ ಹುನ್ನಾರವಾಗಿದೆ.

ಆದ್ದರಿಂದ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಈ ಕೂಡಲೇ ಕೈಬಿಡಬೇಕು. ಶಾಲೆಗಳನ್ನು ಅಭಿವೃದ್ಧಿಗೊಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಕ್ರಮ ವಹಿಸಬೇಕು. ಈ ಹಿನ್ನೆಲೆಯಲ್ಲಿ ನಿರ್ಧಾರ ಬದಲಾಯಿಸುವವರೆಗೂ ಹೋರಾಟ ನಡೆಯಲಿ, ನೀತಿ ಬದಲಾಗಲಿ.

ಭಿನ್ನಮತ ಹೆಚ್ಚಿಸಿದ ಯಾತ್ರೆ

ಕರ್ನಾಟಕದ ಯಾತ್ರೆ ತಮಗೆ ಸಂತೋಷ ತಂದಿದೆ ಎಂದೇನೋ ಅದ್ವಾನಿಯವರು ಹೇಳಿ ನೆರೆಯ ಗೋವಾದತ್ತ ಪಾದ ಬೆಳೆಸಿದ್ದಾರೆ, ತನ್ನದೇ ಪಕ್ಷದ ಸರಕಾರದ ಭ್ರಷ್ಟಾಚಾರದ, ನೂರಾರು ಹಗರಣಗಳು ಪುಂಖಾನು ಪುಂಖವಾಗಿ ಹೊರ ಬರುತ್ತಿರುವಾಗ ಭ್ರಷ್ಟಾಚಾರದ ವಿರುದ್ಧದ ಅವರ ಯಾತ್ರೆ ಅದೆಂತಹ ಸಂತೊಷವನ್ನು ತಂದಿರಬಹುದು?. ಅಕ್ರಮಗಳ ಸರದಾರ ಅವರ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ನ್ಯಾಯಾಂಗ ಬಂಧನದಲ್ಲಿ 'ದುಃಖ ತಪ್ತ'ನಾಗಿರುವಾಗ ತುರ್ತುಪರಿಸ್ಥಿತಿಯಲ್ಲಿ “ದೇಶ”ಕ್ಕಾಗಿ ಬೆಂಗಳೂರಿನಲ್ಲಿ ಜೇಲುವಾಸಿ ಯಾದದ್ದನ್ನು ಅದ್ವಾನಿ ಪ್ರಸ್ತಾಪಿಸಿದ್ದು ಒಂದೇ ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆಯಲು ಹೆಸರಾದ ಅವರು ಚುಚ್ಚು ಮಾತಿನಲ್ಲಿ ಸಂತಸವನ್ನು ಕಾಣಬಹುದೇನೋ!

ಒಂದು ಗುಂಪಿನ ನಾಯಕ

ಈ ಯಾತ್ರೆ ಜನರಲ್ಲಿರಲಿ ,ಅವರದೇ ಕಾರ್ಯಕರ್ತರಲ್ಲಿ ಭ್ರಷ್ಟತೆಯ ವಿರುದ್ಧ ದನಿ ಎತ್ತುವ ಕಿಂಚಿತ್ ಸ್ಫೂರ್ತಿ ಅಥವಾ ಛಲವನ್ನಾದರೂ ಹುಟ್ಟಿಸಲಿಲ್ಲ. ಪಕ್ಷದೊಳಗೆ ಭ್ರಷ್ಟಾಚಾರದ ವಿರುದ್ಧ ಹೋರಾಡಲು ಒಗ್ಗಟ್ಟನ್ನಾದರೂ ತರಲಿಲ್ಲ. ಬದಲಾಗಿ ಗುಂಪುಗಾರಿಕೆ, ಭಿನ್ನಮತವನ್ನು ಇನ್ನಷ್ಟೂ ಹೆಚ್ಚಿಸಿ ಎರಡು ಹೋಳಾಗಿ ಎದ್ದು ಕಾಣುವಂತಾಗಿಸಿತು.. ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಮೈದಾನದ ಪ್ರದರ್ಶನದಲ್ಲಿ ಪ್ರಮುಖ ರನ್ನೊಳಗೊಂಡ 11 ಸಚಿವರು, ಹಲವಾರು ಶಾಸಕರು ಕಣ್ಮರೆಯಾದದ್ದು ಗಂಭೀರ ವಿದ್ಯಾಮಾನ. ಯಾತ್ರೆಗೆ ಬಹಿಷ್ಕಾರ ಹಾಕಿದ್ದ ಅವರೆಲ್ಲಾ ಯಡ್ಯೂರಪ್ಪನವರ ಬಣದವರು. ಇದು ಅದ್ವಾನಿಯವರಿಗೆ ಸಂತಸ ತಂದಿತೇ ?. ಸ್ವತಃ ಆದ್ವಾನಿ ಅನಂತ್ ಕುಮಾರ ಬಣದೊಂದಿಗೆ ಗುರುತಿಸಿಕೊಂಡ ರಾಷ್ಟ್ರನಾಯಕರು ಅಲ್ಲವೇ..

ಲೂಟಿಯ ಅವಕಾಶಕ್ಕಾಗಿ

ಇಲ್ಲಿ ಪ್ರಮುಖವಾಗಿ ಸಂತೋಷದಿಂದ ಓಡಾಡಿಕೊಂಡಿದ್ದವರೆಂದರೆ ಅನಂತಕುಮಾರ, ಈಶ್ವರಪ್ಪನವರ ಬಣ. ಅದ್ವಾನಿ ಪಕ್ಕದಲ್ಲಿ ಕುಳಿತ ಜಗದೀಶ್ ಶೆಟ್ಟರ್ ಕಾಣುತ್ತಿದ್ದ ಕನಸಿನ ಖದರೇ ಮತ್ತೊಂದು ಬಗೆ! ಅಡಿಯಿಂದ ಮುಡಿವರೆಗೆ ಬ್ರಹ್ಮಾಂಡ ಭ್ರಷ್ಟಾಚಾರದ ಹೊಲಸು ಮೆತ್ತಿಕೊಂಡಿದ್ದರೂ ನಾಚಿಕೆ,ಮುಜಗರ ಅವರ್‍ಯಾರಲ್ಲಿ ಇರಲೇ ಇಲ್ಲ. ಇದ್ದದ್ದು ತಮ್ಮ ವಿರೋದಿ ಬಣವನ್ನು ಹಣಿಯುವ ಹವಣಿಕೆಯೇ. ಇನ್ನಷ್ಟು ಲೂಟಿ ಹೊಡೆಯುವ ಅವಕಾಶಕ್ಕಾಗಿ ಹಪಾಹಪಿಯೇ.

ಹಿಡನ್ ಅಜೆಂಡಾಗಳು

ಅದ್ವಾನಿಯವರ ಯಾತ್ರೆ ಯಾರ ವಿರುದ್ಧ ಎಂಬ ಪ್ರಶ್ನೆಯನ್ನು ನಾವು ಕಳೆದ ವಾರ ಕೇಳಿದ್ದೆವು. ಅವರು ಬೆಂಗಳೂರಿನಲ್ಲಿ ಕೇವಲ ಕೇಂದ್ರದ ವಿರುದ್ಧ ಮಾತನಾಡಿದರು. ಔಪಚಾರಿಕವಾಗಿ ಬಿಜೆಪಿ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ ಎಂದು ಮನಸಿಲ್ಲದೆ ಹೇಳಿದರು. ಆದರೆ ರಾಜ್ಯದಲ್ಲಿ ನಡೆದಿರುವ ಜೈಲು ಯಾತ್ರೆ ವಿದ್ಯಾಮಾನಗಳ ಬಗ್ಗೆ, ಕಾರಣವಾದ ಭೂ–ಗಣಿ ಮಾಫಿಯಾಗಳ ಬಗ್ಗೆ ಚಕಾರ ಎತ್ತಲಿಲ್ಲ. ಆರೆಸ್ಸೆಸ್‌ನ ಭೂ ನುಂಗುಪಕೆ ನೆನಪಾಗಲಿಲ್ಲ! ಮೂಲಕ್ಕೆ ಹೋಗದ ಅವರ ಮಾತು ವ್ಯರ್ಥಾಲಾಪವಾಗಿತ್ತು. ಕಪ್ಪು ಹಣ, 2ಜಿ ಹಗರಣ, ಓಟಿಗಾಗಿ ನೋಟು ಪ್ರಸ್ತಾಪಿಸಿದರಾದರೂ ಅದರಲ್ಲಿ ತಮ್ಮ ಪಾಲೇನೆಂಬುದನ್ನು ಹೇಳಲಿಲ್ಲ. ಮಂಗಳೂರಿನಲ್ಲಿಯೂ ಭ್ರಷ್ಟಾಚಾರದ ಬಗೆಗಿಂತ ತಾವೊಬ್ಬ ಲೋಹ ಪುರುಷನೆಂದೇ ಬಿಂಬಿಸಿಕೊಳ್ಳುತ್ತಿರುವ ಅವರು ಸರ್ದಾರ್ ಪಟೇಲರ ಗುಣಗಾನ, ಕಾಶ್ಮೀರ ವಿವಾದಗಳನ್ನೆ ಕೇಂದ್ರವಾಗಿಸಿಕೊಂಡದ್ದು ಕೋಮುಗ್ರಸ್ತ ಕರಾವಳಿಯಲ್ಲಿ ಪ್ರಜ್ಞಾಪೂರಕವೇ. ಈ ಯಾತ್ರೆಯ ಇನ್ನೊಂದು ನಿಜ ಉದ್ದೇಶ ಕೋಮುವಾದದತ್ತ ತಿರುಗಿಸುವ ಹಿಡನ್ ಅಜೆಂಡಾ ಹೊರಗೆಡಹಿದ್ದು. ಹಾಗೇ ಸಂಸ್ಕೃತ ಸಮರ್ಥಕ ಕುಮುಟಾದಲ್ಲಿ ರಾಜ್ಯೋತ್ಸವ ದಿನದಂದು ಹುಸಿ ಕನ್ನಡ ಪ್ರೇಮ ತೋರಿಸಿದ್ದು.

ವಿಪಲತೆ

ಹಾಗೆ ನೋಡಿದರೆ ಬೆಂಗಳೂರು, ಮಂಗಳೂರು ಒಳಗೊಂಡು ಬಹಿರಂಗ ಸಭೆಗಳಿಗೆ ಜನಗಳನ್ನು ಸೇರಿಸುವು ದರಲ್ಲಿ ಯಾತ್ರೆ ವಿಫಲವಾಯಿತು. ಕರೆದು ತಂದವರನ್ನು(ಅವರೂ ಹೆಚ್ಚುಹೊತ್ತು ಇರಲಿಲ್ಲ) ಬಿಟ್ಟರೆ ಉಳಿದಂತೆ ಮಾಧ್ಯಮಗಳದ್ದೇ ಬೆಂಬಲ.


ಹಗರಣಗಳ ಭಾರದಿಂದಾಗಿ ಕಾಂಗ್ರೆಸ್ ವಿರುದ್ಧದ ಜನರ ಅತೃಪ್ತಿಯನ್ನೂ ಬಳಸುವ ಯತ್ನದಲ್ಲಿ ಸಫಲತೆ ಅಷ್ಟಕ್ಕಷ್ಟೇ.

ಸದಾಸೂಚನೆ

ಆದರೆ ಒಳ ಕಿತ್ತಾಟ, ಬಣಗಳ ನಡುವಿನ ಅಂತರ

ಪುಟ 6 ಕ್ಕೆ

ಕಾರ್ಟೂನ್ ಕಾರ್ನರ್



ಉತ್ತರ ಕನ್ನಡ: ಹೆಂಚು ಉದ್ಯಮ ಯಾವ ದಿಕ್ಕಿನತ್ತ ? ಕೈಗಾರಿಕೆ ಮತ್ತು ಕಾರ್ಮಿಕರ ಪರಿಸ್ಥಿತಿ

ಒಂದು ವಿಶ್ಲೇಷಣೆ

ಸುಭಾಶ್ ಕೊಪ್ಪಿಕರ
ಶಿರಾಲಿ, ಭಟ್ಕಳ

ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಂಚು ಕಾರ್ಮಿಕರ ಬೆಳೆದು ಬಂದ ದಾರಿಯೇನು ಚಳುವಳಿಯ ಮುಂದಿನ ಪ್ರಶ್ನೆಗಳೇನು?

ಆಧುನಿಕ ನಗರ, ಪಟ್ಟಣಗಳನ್ನು "ಕಾಂಕ್ರೀಟ್ ಕಾಡು" ಎಂದು ಪರಿಗಣಿಸಿ ಜನ ಚರ್ಚಿತವಾಗಿ ಸಂದರ್ಭಕ್ಕೂ ಮೊದಲು, ಹುಲ್ಲು ಹಾಸಿನ ಮನೆ ಎನ್ನುವ ಆದಿಕಾಲದ ಮಾನವ ಮನೆ ನಿರ್ಮಾಣದ ಮಧ್ಯೆ, ತಂಪು, ಆರೋಗ್ಯದ ದೃಷ್ಟಿಯಿಂದ ಉತ್ತಮವಾದ ಕಡಿಮೆದರದಲ್ಲಿ ನಮ್ಮ ನಡುವೆ ದೊರಕುವ ಕಚ್ಚಾ ಸಾಮಾಗ್ರಿ ಬಳಸಿ ಒಂದು ದೊಡ್ಡ ಉದ್ಯಮವಾಗಿ ಪ್ರಾರಂಭಗೊಂಡಿದ್ದು " ಹಂಚು ಉದ್ಯಮ".



ಅದರ ಜನಪ್ರಿಯತೆ "ಮಂಗಳೂರಿನಿಂದ ಅಂಕೋಲಾ ತನಕ ಸುಮಾರು 50 ಕಾರ್ಖಾನೆಗಳು ಹಂತ ಹಂತವಾಗಿ ತಲೆ ಎತ್ತಿದ್ದವು. ಅದರ ಜನಪ್ರಿಯತೆ "ಮಂಗಳೂರು ಹಂಚು" ಎಂದು ಮನೆಮಾತಾಗಿ ಹುಲ್ಲು ಮನೆಯನ್ನು ಗಣನೀಯವಾಗಿ ಕಡಿಮೆಗೊಳಿಸಿ ಎಲ್ಲ ಕಡೆ ಹಂಚಿನ ಮನೆ ನಿರ್ಮಾಣಗೊಂಡು ಸಮಾಜದ ಅವಿಭಾಜ್ಯ ಅಂಗವಾಗಿ ಅದು ಜನ ಜೀವನದಲ್ಲಿ ಹಾಸು ಹೊಕ್ಕಾಯಿತು.

ಹಳ್ಳಿಗಾಡಿನಲ್ಲಿ ಇದು ತಮಾಷೆ ಮಾತಾದರೂ ದುಡಿಯುವ ಜನಜೀವನ ವ್ಯವಸ್ಥೆಯನ್ನು ತೆರೆದಿಡುವಂತಹದ್ದು ಈ ಮಾತು. ಅದು ಯಾವುದೆಂದರೆ " ಹಂಚು ಉತ್ಪಾದಿಸುವ ಹಂಚು ಕಾರ್ಮಿಕನ ಮನೆ ಹಂಚಿನದಲ್ಲಾ".

ಮಂಗಳೂರು ಹಂಚು ಕಾರ್ಮಿಕರ ಹೋರಾಟ ಇತಿಹಾಸ ದಾಖಲಾರ್ಹವಾಗಿದೆ. ಆ ಪ್ರದೇಶದ ಎಡ ಪ್ರಜಾಸತ್ತಾತ್ಮಕ ಚಳುವಳಿ ವಿಶೇಶವಾಗಿ ರೈತ ಚಳುವಳಿಗೂ ಸಹ ಕಾರಣೀಭೂತವಾಯಿತು. ಹಂಚು ಉದ್ಯಮ "ಚಿನ್ನದ ಕೋಳಿ ಮೊಟ್ಟೆ" ಉದ್ಯಮ. ಒಳ್ಳೇ ಲಾಭ ಎಂದು ಉದ್ಯಮದ ಮಾಲಕರು ಬಹಿರಂಗವಾಗಿ ಘೋಷಿಸಿಕೊಂಡಿದ್ದರು (ಆರ್.ಎಸ್. ಭಾಗ್ವತ, ಮಾಲಕರ ಸಂಘದ ಅಧ್ಯಕ್ಷರು).

ಹಿಂದೆ ಹಂಚು ಉದ್ಯಮದಲ್ಲಿ ಯಂತ್ರದಂತೆ ದುಡಿಯುವ ಕಾರ್ಮಿಕರ ಶ್ರಮಭಾರ " ಟಾಸ್ಕ್" ಒಂದಕ್ಕೆ 8 ಘಂಟೆ ಕೆಲಸಕ್ಕೆ ಸಮಾನವೆಂದು ಧೀರ್ಘಕಾಲದ ಚರ್ಚೆ-ಸಂವಾದ ನಡೆದು, ವಾಸ್ತವವಾಗಿ ಶ್ರಮಭಾರ ನಿಗದಿ ಮಾಡಿದ್ದು ಇದ್ದು ಬೆಂಕಿ ಆವೆಯಲ್ಲಿ ಕೆಲಸ ಮಾಡುವ ಆ ಕಾರ್ಮಿಕರ ನಿಜ ಬವಣೆ ಅಲ್ಲಿ ಸತತ ಕಾರ್ಯ ನಿರ್ವಹಿಸುವ ಕಾರ್ಮಿಕನಿಗೆ ಮಾತ್ರ ಅನುಭವವಾಗುತ್ತದೆ. ನಡೆದು ಮಾಡುವ ಕೆಲಸ (ಶ್ರಮ) ಓಡಿಕೊಂಡು ಮಾಡಿ ಮುಗಿಸುವ ಕುಶಲತೆಯನ್ನು ಹಂಚು ಉದ್ಯಮದಲ್ಲಿ ಕಾಣಲು ಸಾಧ್ಯ. ಇದು ನಿಜಕ್ಕೂ ಒಂದು ರೀತಿಯ ವಿಶಿಷ್ಟತೆ. ವಿಶಿಷ್ಟ ರೀತಿ ಅಂಟು, ಮಣ್ಣು ಹದ ಮಾಡಿ ಅದನ್ನು ಅಚ್ಚು ಮಾಡಿ ಯಂತ್ರಕ್ಕೆ ನೀಡಿ ಹಸಿ ಹಂಚು ಬಂದಾಗ ಯಂತ್ರದ ಸರಿಪಳಿ ಮೂಲಕ ಹೋಗಿ (ಪ್ರಾರಂಭದಲ್ಲಿ ತಲೆ ಮತ್ತು ಕೈ ಮೇಲೆ ಹೋಗುತಿತ್ತು) ಅಲ್ಲಿಂದ ಬೆಂಕಿಯಲ್ಲಿ ಬೆಂದುಅದು ಖಡಕ್ ಹಂಚಾಗಿ ಹೊರ ಬರಲಾಗಿ ಅದನ್ನು ವಿಂಗಡಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ. ದರ್ಜೆ ಎಂದು ಪರಿಗಣಿಸಿ ಆಯಾ ಗುಣಮಟ್ಟಕ್ಕೆ ನಿಗದಿತ ಬೆಲೆಗೆ ಮಾರಾಟ ಮಾಡಲಾಗುತ್ತದೆ.


ಕಾರ್ಮಿಕರು ಸಂಘಟಿತರಾಗಿ ಶ್ರಮ, ಕೂಲಿ ಕುರಿತು ಅರಿವು ಮೂಡಿಸಿಕೊಳ್ಳುವ ಮೊದಲು ಅತ್ಯಂತ ಕೂಲಿ ಹೆಚ್ಚು ಶ್ರಮಭಾರ ನಿಗದಿ ಮಾಡಿ ತೀವ್ರ ಶೋಷಣೆ ನಡೆಸಲಾಗುತ್ತಿತ್ತು. ಮಂಗಳೂರು, ಕುಂದಾಪುರ ಪ್ರದೇಶ ಕಾರ್ಮಿಕ ಚಳುವಳಿಯಿಂದ ಪ್ರಭಾವಿತರಾದ ಮತ್ತು ಅಲ್ಲಿಯ ಸಿ ಐ ಟಿ.ಯು ಮುಖಂಡರ ಸಹಕಾರದಿಂದ ಭಟ್ಕಲದ ವೆಂಕ್ಟಾಪುರ, ಹೊನ್ನಾವರ, ಮಾವಿನಕುರ್ವೆ ಹೀಗೆ ಒಂದೊಂದಾಗಿ ಕಾರ್ಖಾನೆಯಲ್ಲಿ ಕಾರ್ಮಿಕರ ಸಂಘ ರಚನೆಗೊಂಡು 1994ರಲ್ಲಿ ಉತ್ತರ ಕನ್ನಡ ಡಿಸ್ಟ್ರಿಕ್ಟ್ ಟೈಲ್ ವರ್ಕ್ಸ್ ಯುನಿಯನ್ ಪ್ರಾರಂಭಗೊಂಡಿತು.

ಈ ಸಂದರ್ಭದಲ್ಲಿ ಈ ಚಳುವಳಿಗೆ ಮಾರ್ಗದರ್ಶನ ನೀಡಿದ ಕಾಮ್ರೇಡ್ ಬಿ. ಮಾಧವ, ಕಾಂ॥ ಅಬ್ರಹಾಂ, ಕಾಂ॥ ಸಿ.ನಾರಾಯಣ ಕಾಂ॥ ಕೆ. ಶಂಕರರವರನ್ನು ನೆನಪಿಸಿಕೊಳ್ಳಲೇಬೇಕು. ಹತ್ತು ಹಲವಾರು ಹೋರಾಟ ನಡೆಸಿದ ಇತಿಹಾಸ ಉ.ಕ. ಜಿಲ್ಲಾ ಹಂಚು ಕಾರ್ಮಿಕ ಚಳುಚಳಿಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲೂ ಈ ಚಳುವಳಿಗೆ ಸ್ವತಃ ಹಂಚು ಕಾರ್ಮಿಕನಾಗಿ ಕಾರ್ಯ ನಿರ್ವಹಿಸಿದ ತಿಲಕಗೌಡ , ಕೈಗಾರಿಕಾ ಕಾರ್ಮಿಕನಾಗಿ ಅನುಭವ ಹೊಂದಿದ ಟಿ.ಎಸ್. ನಾಯ್ಡು, ವಿದ್ಯಾರ್ಥಿ ಚಳುವಳಿಯಿಂದ ಕಾರ್ಮಿಕ ಚಳುವಳಿಗೆ ಬಂದ ಸುಭಾಷ ಕೊಪ್ಪಿಕರ್ ಅದೇ ರೀತಿ ಕಾಖಾನೆ ಕಾರ್ಮಿಕರಾಗಿ ಇರುವ ರಾಮಾಶಿವಯ್ಯ ಗೌಡ, ಶಂಕರ ದೇವಾಡಿಗ, ತಿಮ್ಮಪ್ಪಗೌಡ, ಮಂಜುನಾಥ ಗೌಡ, ಗಣಪತಿ ವಂದೂರು, ಕೃಷ್ಣ ಪ್ಯಾರಾಗೌಡ, ಸುರೇಶ್ ನಾಯ್ಕ, ಮುರ್ಕುಂಡಿ ನಾಯ್ಕ, ದಾಮೋದರ ನಾಯ್ಕ, ಜನಾರ್ಧನ ನಾಯ್ಕ, ಬೀರಾಗೌಡ, ಮಾಸ್ತಿ ನಾಯ್ಕ, ಹೀಗೆ ಉದ್ದನೆಯ ಪಟ್ಟಿ ಬೆಳೆಯುತ್ತದೆ.

ಪ್ರಸಕ್ತ ಕೈಗಾರಿಕೆ ಪರಿಸರ – ಕಚ್ಚಾವಸ್ತು ಅಲಭ್ಯತೆ, ಮಾರುಕಟ್ಟೆಯಲ್ಲಿನ ಅನಾರೋಗ್ಯಕರ ಪೈಪೋಟಿ, ತಾಂತ್ರೀಕೀಕರಣ, ಎಸ್‌ಬೆಸ್ಟೋ ಶೀಟ್ ಹಾವಳಿ, ಕಟ್ಟಿಗೆ ತುಟ್ಟಿ, ಯಂತ್ರೀಕರಣವಾಗದೇ ಇರುವುದು, ಡೆಕೋರೇಟೆಡ್ ಟೈಲ್ಸ್‌ಗೆ ಹೆಚ್ಚಿನ ಬೇಡಿಕೆ, ನಗರ ಪ್ರದೇಶದಲ್ಲಿ ಭೂಮಿಗೆ ಬಂದ ಬೆಲೆ, ಹೀಗೆ ಈ ಕೈಗಾರಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಬಿಕ್ಕಟ್ಟು ಬರಲು ಕಾರಣ, ಆದರೆ, ಮಾಲಕರ ವಾದ ಪೂರ್ತಿ ಸತ್ಯವಲ್ಲ, ಅವರು ಹಂಚು ಬೆಲೆ ಏರಿಸಿ ತಮ್ಮ ಲಾಭದ ಬಗ್ಗೆ ಯೋಚಿಸುತ್ತಾರೆಯೇ ಹೊರತು ಬಡ ಕಾರ್ಮಿಕರ ಕೂಲಿ ಪ್ರಶ್ನೆ ಬಂದಾಗ ತೀವ್ರ ವಿರೋಧಿ ಭಾವನೆ ತೋರುತ್ತಾರೆ.

ಕಾರ್ಮಿಕರ ಮೇಲೆ ಮತ್ತಷ್ಟು ಶ್ರಮಭಾರ



ಹೆಚ್ಚಿಸುವುದರ ಕುರಿತು ಸದಾ ಕುತಂತ್ರವಾದ ಯೋಜನೆ ಮಾಡುತ್ತಾ ಇರುತ್ತಾರೆ. ಕಡಿಮೆ ಕೂಲಿಯಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳುವ ಅನಿಷ್ಟ ಪದ್ಧತಿ ಜಾರಿಯಲ್ಲಿತ್ತು. ವಾಸ್ತವದಲ್ಲಿ ಮೈ ಮುರಿದು ಬೆವರು ಸುರಿಸಿದ ಶ್ರಮಕ್ಕೆ ತಕ್ಕ ಕೂಲಿ ಇಂದಿಗೂ ಹಂಚು ಕಾರ್ಮಿಕರಿಗೆ ದೊರಕದಿದ್ದದ್ದು ವಿಪರ್ಯಾಸ.

ಉತ್ತರ ಕನ್ನಡಕ್ಕೆ ಹೋಲಿಸಿದ್ದಲ್ಲಿ ತಮ್ಮ ಹೋರಾಟದ ಪ್ರತಿಫಲವಾಗಿ ಒಂದಿಷ್ಟು ಹೆಚ್ಚು ಸಂಬಳ, ಸವಲತ್ತುಗಳನ್ನು ಉಡುಪಿ/ಜಿಲ್ಲಾ ಕಾರ್ಮಿಕರು ಪಡೆಯುತ್ತಿದ್ದಾರೆ. ಉ.ಕ. ಜಿಲ್ಲೆಯಲ್ಲೂ ಈ ಹಿನ್ನಲೆಯಲ್ಲಿ ಕಾರ್ಮಿಕ ಚಳುವಳಿ ಸರಿಯಾಗಿ ಚರ್ಚಿಸಿ ಒಂದು ನಿರ್ಧಾರ ಕೈಗೊಂಡು ಬದ್ಧ ಹೋರಾಟ ನಡೆಸಬೇಕಾಗಿದೆ. ಸರ್ಕಾರವು ಸಹ ಈ ಉದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡುವ ನಿರ್ಧಿಷ್ಟ ಕೈಗಾರಿಕಾ ನೀತಿ ಅನುಸರಿಸಬೇಕು. ಈ ನಿಟ್ಟಿನಲ್ಲಿ ಸಾರ್ವಜನಿಕ ಚರ್ಚೆ ನಡೆದು ಪುರಾತನ ಹಾಗೂ ವಿಶಿಷ್ಟವಾದ ಹಂಚು ಉದ್ಯಮವನ್ನು ಉಳಿಸಿ ಅದನ್ನು ಬೆಳೆಸಬೇಕಾಗಿದೆ. ಜನಪ್ರಿಯ ಭಾಷೆಯಲ್ಲಿ ಸಿಮೆಂಟ್ ಶೀಟ್ ಅಥವಾ ಕಲ್ನಾರು ಎಂದು ಕರೆಯಲಾಗುವ ಕ್ಯಾನ್ಸರ್ ರೋಗ ಹರಡುವ ಎಸ್‌ಬೆಸ್‌ಟೋ ಶೀಟ್ ಮನೆಗಿಂತ ಹಂಚು ಮನೆ ನಿರ್ಮಾಣ ಉತ್ತಮ ಎನ್ನುವುದು ಜನ ಸಾಮಾನ್ಯರ ಅನುಭವದ ಅಭಿಪ್ರಾಯ.

ಆಳುವ ವರ್ಗಗಳು ಮಹತ್ವಾಕಾಂಕ್ಷೆ ಯೋಜನೆ ಆಶ್ರಯ ಯೋಜನೆಗೆ ಬಡ ಕೃಷಿಕೂಲಿಕಾರರಿಗೆ ಕೈಗೆಟಕುವ ಬೆಲೆಯ ಹಂಚು ಮನೆ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿ ಪ್ರಚಾರಗೊಳ್ಳಿಸುವ "ರಾಜಕೀಯ ಇಚ್ಛಾಶಕ್ತಿ" ತೋರಿಸಬೇಕಾಗಿದೆ.

ವಿಶಿಷ್ಟ ಮತ್ತು ವಿಶೇಷ ಈ ಹಂಚು ಉದ್ಯಮದ ಕೈಗಾರಿಕೆ ಮತ್ತು ಕಾರ್ಮಿಕರ ಬಗ್ಗೆ ಸರ್ಕಾರ, ಮಾಲಕರು, ಕಾರ್ಮಿಕ ಸಂಘ ಒಟ್ಟು ದೀರ್ಘ ಸಮಾಲೋಚನೆ ನಡೆಸಿ ನಿರ್ದಿಷ್ಟವಾಗಿ ನೀತಿ ರೂಪಿಸಿ ಈ ಅಳಿವಿನ ಅಂಚಿಗೆ ತಲುಪಿದ ಈ ಉದ್ಯಮ ಉಳಿಸಿ. ಅಲ್ಲಿ ಕಾರ್ಯ ನಿರ್ವಹಿಸುವ ಸಾವಿರಾರು ಕಾರ್ಮಿಕರ ಮತ್ತು ಅವರ ಅವಲಂಬಿತ ಕುಟುಂಬ ಮತ್ತು ಗ್ರಾಮೀಣ ಭಾಗದಲ್ಲಿ ಇರುವ ಸಣ್ಣ ಕೈಗಾರಿಕೆ ಎನ್ನುವ ಅಂಶವನ್ನು ಪರಿಗಣಿಸಿ ಅದನ್ನು ರಕ್ಷಿಸುವ ಮಹತ್ವದ ಹೊಣೆ. ನಿಭಾಯಿಸಬೇಕಾಗಿದೆ.

ಸಹಕಾರಿ ಸಂಘ ಕಾರ್ಖಾನೆಗಳು ಪುರಾತನವಾಗಿದ್ದು, ಅವು ಎಲ್ಲಾಕಡೆ ಮುಚ್ಚುತ್ತಿದ್ದು ಇವುಗಳಿಗೆ ಪ್ರೋತ್ಸಾಹಧನ ನೀಡಿ ಪುನರಾರಂಭಿಸುವ ಯೋಜನೆಯನ್ನು ಸರ್ಕಾರ ನಿರ್ವಹಿಸಬೇಕಾಗಿದೆ.

ಉಪಸಂಹಾರ: ಹಂಚು ಉದ್ಯಮ, ಕರ್ನಾಟಕ ಕರಾವಳಿ ಭಾಗದ ಜನಜೀವನದಲ್ಲಿ ಹಾಸು ಹೊಕ್ಕಾಗಿದ್ದು, ಅಲ್ಲಿ ಕೈಗಾರಿಕೆ ಉಳಿದರೆ ಕಾರ್ಮಿಕರು ಉಳಿದು ಅವರ ಉದ್ಯೋಗ ಭದ್ರತೆ, ಜೀವನ ನಿರ್ವಹಣೆಗೆ ಸರಿಯಾದ ಕೂಲಿ, ಬೋನಸ್ ನೀಡಿಕೆ, ಹಂಚು ತಯಾರಿಕೆ ಒಂದು ವಿಶಿಷ್ಟ ಕಲೆ ಎನ್ನುವುದು ಮನಗಂಡು ಈ ಕೈಗಾರಿಕೆಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎನ್ನುವುದು ಒಟ್ಟಾರೆ ಜನತೆಯ ಅಭಿಪ್ರಾಯವಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

**ಭೂಮಿಯಿಂದ ಕೃಷಿಕರನ್ನು ಹೊರದೂಡುವ
ಭೂ ಸುಧಾರಣೆಯ ಮೂಲ ಸತ್ವವನ್ನು ನಾಶಪಡಿಸುವ
ಕೃಷಿಯನ್ನು ಕಂಪನೀಕರಣಗೊಳಿಸುವ
ಗುಜರಾತ್ ಮಾದರಿ ಅಭಿವೃದ್ಧಿಯ
ಕರ್ನಾಟಕ ಅವತರಣಿಕೆಯ ವಿರುದ್ಧ
ಕರ್ನಾಟಕ ರೈತರ, ಕೂಲಿಕಾರರ, ಗ್ರಾಮೀಣ ಕುಶಲ ಕರ್ಮಿಗಳ
ಸಾಮಾಜಿಕ ವಿಜ್ಞಾನಿಗಳ, ಸಾಹಿತಿ, ಕಲಾವಿದರ ಘೋಷಣೆ**

ಕರ್ನಾಟಕ ಬಿಜೆಪಿ ವಿನಾಶಕಾರಿ ಗುಜರಾತ್ ಮಾದರಿ!

ಜಿ.ಎನ್. ನಾಗರಾಜ್


ಮುಂದುವರಿದ ಭಾಗ

ಈ ಕೃಷಿ ಬಂಡವಾಳ ಹೂಡಿಕೆ ಸಮಾವೇಶಕ್ಕೆ ಬರಲಿರುವ ಬಂಡವಾಳಶಾಹಿಗಳ ಶರತ್ತು ಕೂಡ ಅದೇ. ಭೂಸುಧಾರಣಾ ಕಾನೂನಿನ ತಿದ್ದುಪಡಿ ರಾಜ್ಯದಲ್ಲಿ ಎಲ್ಲಿಯಾದರೂ, ಯಾರಾದರೂ ಫಲವತ್ತಾದ, ನೀರಾವರಿ ಕೃಷಿ ಭೂಮಿಯನ್ನು ಕೂಡ ಯಾರ ಅಂಕೆಯಿಲ್ಲದೆ ಕೊಳ್ಳಲು ಅವಕಾಶ ನೀಡುತ್ತದೆ. ಈ ಅವಕಾಶವನ್ನು ಬಳಸಿಕೊಳ್ಳಲು ಬಹುರಾಷ್ಟ್ರೀಯ ಕಂಪನಿಗಳು ಭಾರತದ ಬೃಹತ್ ಕಂಪನಿಗಳು, ಸಾಫ್ಟ್‌ವೇರ್ ಕಂಪನಿಗಳು ತುದಿಗಾಲಲ್ಲಿ ನಿಂತಿವೆ. ಖೇಣಿ, ನಿರಾಣಿ, ಕಟ್ಟಾ ಮೊದಲಾದ ಅನೇಕರು ಕೂಡ ಎಲ್ಲಿ ಅಭಿವೃದ್ಧಿಯಾಗಲಿದೆಯೋ ಅದರ ಅಕ್ಕಪಕ್ಕದ ಭೂಮಿಯನ್ನೇ ಬಾಚಿಕೊಳ್ಳಲು ಕಾದಿದ್ದಾರೆ. ಈಗಾಗಲೇ ಬೇನಾಮಿಯಾಗಿ, ಅಕ್ರಮವಾಗಿ ಕೊಂಡಿರುವ ಕೃಷಿಭೂಮಿಯ ವ್ಯವಹಾರಗಳನ್ನು ಸಕ್ರಮಗೊಳಿಸಿಕೊಳ್ಳಲು ಕರ್ನಾಟಕದ ಎಲ್ಲ ನಗರ ಪಟ್ಟಣಗಳ ಭೂಮಾಫಿಯಾ ಕಾದು ನಿಂತಿದೆ. ಇದರ ಜೊತೆಗೆ ಇವರಲ್ಲನೇಕರು ಮತ್ತು ಇಲ್ಲಿವರೆಗೆ ಈ ಕಾನೂನು ತೊಡಕಿನಿಂದಾಗಿ ಭೂವ್ಯವಹಾರಗಳಲ್ಲಿ ಪ್ರವೇಶಿಸಲು ಹಿಂಜರಿಯುತ್ತಿದ್ದ ಕಪ್ಪುಹಣದ ಖದೀಮರು, ರೈತರಿಗೆ ವಂಚಿಸಿ ಕಡಿಮೆ ಬೆಲೆಯಲ್ಲಿ ಭೂಮಿ ಪಡೆದು ಬಹುರಾಷ್ಟ್ರೀಯ ಕಂಪನಿಗಳಿಗೆ, ಭಾರತದ ಬೃಹತ್ ಕಂಪನಿಗಳಿಗೆ ಹೆಚ್ಚಿನ ಬೆಲೆಯಲ್ಲಿ ಮಾರಿಕೊಳ್ಳುವ ದಲಾಲರಾಗಲು ಕಾದಿದ್ದಾರೆ.

ಇದು ಒಂದು ಕಡೆಯಾದರೆ ರಸಗೊಬ್ಬರ, ಔಷಧಿ, ಬೀಜ ಬೆಲೆಯಿಂದ, ಸಾಲದ ಬಡ್ಡಿಯ ಹೊರೆಯಿಂದ, ಫಸಲಿನ ಬೆಲೆ ಕುಸಿತದಿಂದ ನಷ್ಟಕ್ಕೊಳಗಾಗುತ್ತಿರುವ ಅನೇಕ ರೈತರು ಕೂಡ ತಮ್ಮ ಕೃಷಿ ಭೂಮಿಯನ್ನು ಮಾರುವ ಬಗ್ಗೆ ಚಿಂತಿಸುತ್ತಿದ್ದಾರೆ. ಯಾವುದೇ ಭೂಸ್ವಾಧೀನ ಪ್ರಕರಣದಲ್ಲಿ ಕಂಡು ಬರುತ್ತಿರುವ ಸಾಮಾನ್ಯ ದೃಶ್ಯವಿದು: ಏನೇ ಆದರೂ ಭೂಮಿ ಕೊಡುವುದಿಲ್ಲ ಎಂದು ಹೊರಟ ರೈತರು ಕೊಳ್ಳುವವರು ಭೂಮಿಯ ಬೆಲೆಯನ್ನು ತುಸುತುಸುವೇ ಏರಿಸುತ್ತಿದ್ದಂತೆ ಸಡಿಲಾಗುತ್ತಿದ್ದಾರೆ. ಮಾರುವ ಆತುರ ತೋರುತ್ತಿದ್ದಾರೆ. ಇದು ತಾತ್ಕಾಲಿಕವಾಗಿ ರೈತರ ಕೈಗೆ ಹಣ ತಂದರೂ ರೈತಾಪಿ ಜನತೆ, ಹಳ್ಳಿಗಳು ತೀವ್ರ ತೊಂದರೆಗೆ ಒಳಗಾಗುತ್ತವೆ.

ಕೃಷಿಗೆ, ಆಹಾರ ಉತ್ಪಾದನೆಗೆ ಧಕ್ಕೆ:

ಇದರಿಂದ ರಾಜ್ಯದಲ್ಲಿ ಕೃಷಿಗೆ ಅದರಲ್ಲಿಯೂ ಆಹಾರ ಉತ್ಪಾದನೆಗೆ ತೀವ್ರ ಧಕ್ಕೆ ಒದಗಲಿವೆ. ಕೃಷಿ ಭೂಮಿ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ, ಶಿಕ್ಷಣ, ಆರೋಗ್ಯ ಸಂಸ್ಥೆಗಳಿಗೆ, ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಪರಿವರ್ತನೆಯಾಗುವುದು ಒಂದು ಅಪಾಯವಾದರೆ ಮತ್ತೊಂದು ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದಿಂದ ಆಹಾರ ಬೆಳೆಯುವ ಭೂಮಿಯನ್ನು ರಫ್ತು ಆಧಾರಿತ ಹೂವು, ಹಣ್ಣು, ತರಕಾರಿ, ಸುಗಂಧ ದ್ರವ್ಯ ಮೊದಲಾದವುಗಳ ಬೆಳೆಗೆ ಬದಲಾಯಿಸುವುದು. ಇದು ಗುಜರಾತ್ ಮಾದರಿ ಕೃಷಿ.



ಈ ಎರಡರಿಂದಲೂ ಆಹಾರ ಬೆಳೆಗಳಿಗೆ ತೀವ್ರ ಧಕ್ಕೆಯಾಗಲಿದೆ. ಈಗಾಗಲೇ ಕರ್ನಾಟಕ ಆಹಾರದ ಕೊರತೆ ಇರುವ ರಾಜ್ಯ. ಕೃಷಿ ಭೂಮಿ ಆಹಾರ ಬೆಳೆಯುತ್ತಿರುವ ಭೂಮಿಯ ಪ್ರಮಾಣ ಕುಗ್ಗಿದರೆ ಆಹಾರ ಬೆಳೆಯ ಪ್ರಮಾಣ ಕುಗ್ಗುತ್ತದೆ. ಇದರಿಂದ ಆಹಾರದ ಬೆಲೆಯೇರಿಕೆ ತೀವ್ರವಾಗಿ ಹೆಚ್ಚಾಗುತ್ತದೆ. ಹೆಚ್ಚು ಹೆಚ್ಚು ಆಹಾರದ ಆಮದಿನ ಮೇಲೆ ಅವಲಂಬಿಸಬೇಕಾಗುತ್ತದೆ. ಆಹಾರದ ಆಮದು ನಮ್ಮ ದೇಶದ ನೀತಿಯ ಮೇಲೆ ಮಾತ್ರವಲ್ಲ ವಿದೇಶಗಳ ರಫ್ತು ನೀತಿಯ ಮೇಲೆ, ಅಲ್ಲಿನ ಉತ್ಪಾದನೆಯ ಪ್ರಮಾಣ, ಉತ್ಪಾದನಾ ವೆಚ್ಚದ ಮೇಲೆ ಅವಲಂಬಿತವಾಗಿದೆ.

ಇದಕ್ಕಿಂತ ಹೆಚ್ಚಾಗಿ ಇಡೀ ಜಗತ್ತಿನ ಆಹಾರ ಧಾನ್ಯಗಳ ವ್ಯವಹಾರ, ಕೃಷಿ ಫಸಲುಗಳ ವ್ಯವಹಾರ ಕಾರ್ಗಿಲ್ ಕಂಪನಿಯಂತಹ ಬೃಹತ್ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬಿತವಾಗಿವೆ. ಈ ಕಂಪನಿಗಳು ಜಗತ್ತಿನ ಬೆಲೆಗಳನ್ನೇ ಏರುಪೇರು ಮಾಡುತ್ತವೆ. ಈ ಸಟ್ಟಾ ವ್ಯವಹಾರದಲ್ಲಿಯೇ ಲಕ್ಷಾಂತರ ಕೋಟಿ ಹಣ ಹೂಡಿ ಲಾಭಗಳಿಸುತ್ತವೆ. ಇಂದು ಭಾರತದಲ್ಲಿ ಕೃಷಿ ಫಸಲುಗಳ ಮುಂಗಡ ಅಥವಾ ಭವಿಷ್ಯ ವ್ಯಾಪಾರದ ಮೂಲಕ ಇಂತಹ ಜೂಜಾಟಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇದು ಕೇವಲ ಕೃಷಿಗೆ, ಕೃಷಿಕರಿಗೆ ಮಾತ್ರವಲ್ಲ ದೇಶದ ಎಲ್ಲಾ ದುಡಿಯುವ ಜನತೆಗೆ ಅದರಲ್ಲಿಯೂ ಬಡಜನತೆಗೆ ಅಪಾಯಕಾರಿಯಾಗಿದೆ. ಒಟ್ಟಿನಲ್ಲಿ ದೇಶಕ್ಕೆ, ಸಾರ್ವಭೌಮತೆ, ಸ್ವಾತಂತ್ರ್ಯಕ್ಕೆ ಅಪಾಯವನ್ನೊಡ್ಡಬಹುದಾಗಿದೆ.

ಭೂಸ್ವಾಧೀನ: ಬಡರೈತರು Vs ಭೂಮಾಲೀಕರು:

ಹೀಗೆ ಭೂಮಿಯನ್ನು ಕಳೆದುಕೊಳ್ಳುವವರಲ್ಲಿ ಮೊದಲಿಗರು ಸಣ್ಣರೈತರು ಅತಿಸಣ್ಣ ರೈತರು - ಕೃಷಿಯ ಏರುಪೇರು, ಸಾಲದ ಬಾಧೆಗೊಳಗಾಗಿ ಭೂಮಿಯನ್ನು ಮಾರುವ, ಊರುಬಿಡುವ ಸ್ಥಿತಿಗೆ ಮೊದಲು ತಳ್ಳಲ್ಪಡುವವರು ಅವರೇ. ಜೊತೆಗೆ ಕರ್ನಾಟಕದ ಯಾವುದೇ ಪ್ರದೇಶವನ್ನು ಆರಿಸಿದರೂ ಅದರಲ್ಲಿ ಹೆಚ್ಚಿನ ಪಾಲು ಕೃಷಿಕರು ಸಣ್ಣ ರೈತರೇ ಆಗಿದ್ದಾರೆ. ಜೊತೆಗೆ ಭೂಮಾಲೀಕರು ಹಾಗೂ ಶ್ರೀಮಂತ ರೈತರು ಸರ್ಕಾರದ ಮೇಲೆ, ಆಡಳಿತ ಯಂತ್ರದ ಮೇಲೆ ತಮಗಿರುವ ಪ್ರಭಾವವನ್ನು ಬಳಸಿ ತಮ್ಮ ಜಮೀನುಗಳು ಭೂಸ್ವಾಧೀನಕ್ಕೊಳಗಾಗ 'ದಿರುವಂತೆ ಶತಪ್ರಯತ್ನ ಮಾಡುತ್ತಾರೆ. ಹೀಗೆ ಭೂಮಿ ಸ್ವಾಧೀನಕ್ಕೆ ನೋಟೀಸ್ ನೀಡುವ ಮೊದಲೇ ಅವರ ಭೂಮಿಗಳು ಡಿನೋಟಿಫೈ ಆಗುತ್ತವೆ. ಭೂಸ್ವಾಧೀನದ ನೋಟೀಸ್ ಕೊಡಲ್ಪಟ್ಟ ಮೇಲೆ ಡಿನೋಟಿಫೈ ಆದರೆ ಭೂಸ್ವಾಧೀನದಿಂದ ವಿನಾಯಿತಿ ಆಗುತ್ತಲೇ ಇರುತ್ತವೆ. ನಂತರ ಸಂಬಂಧಪಟ್ಟ ಯೋಜನೆ ಕಾರ್ಯರೂಪಕ್ಕೆ ಬಂದ ಮೇಲೆ ಆಗುವ ಬೆಲೆಯ ವಿಪರೀತ ಹೆಚ್ಚಳದ ಪ್ರಯೋಜನವನ್ನು ಅವರು ಪಡೆಯುತ್ತಾರೆ. ಉಳಿಸಿಕೊಂಡ ಜಮೀನುಗಳಲ್ಲಿ ಹೋಟೆಲ್, ರೆಸಾರ್ಟ್, ವಸತಿ ನಿವೇಶನ, ಮಾರಾಟ ಮಳಿಗೆಗಳ ಸಮುಚ್ಚಯ, ಪೆಟ್ರೋಲ್ ಬಂಕ್ ಇತ್ಯಾದಿಗಳನ್ನು ಮಾಡಿಕೊಂಡು ದೊಡ್ಡ ಮಟ್ಟದ ಲಾಭ ಪಡೆಯುತ್ತಾರೆ. ಒಂದು ಪ್ರದೇಶದಲ್ಲಿ ಸಾವಿರಾರು ಎಕರೆ ಭೂಮಿ ಸ್ವಾಧೀನದ ಪ್ರಶ್ನೆಯಲ್ಲಿ ಸಣ್ಣ ರೈತರ ಜೊತೆಗೆ ಮಧ್ಯಮ ರೈತರು ಸಿಕ್ಕಿಕೊಳ್ಳುತ್ತಾರೆ.

ಆದರೆ ಒಟ್ಟ ಮೊದಲು ಭೂಮಿ ಕಳೆದುಕೊಳ್ಳುವ ಬಡರೈತರು ಹೆಚ್ಚಾಗಿ ದಲಿತ, ಹಾಗೂ ಹಿಂದುಳಿದ ಜಾತಿಗೆ ಸೇರಿದವರಾಗುತ್ತಾರೆ. ಕೆಲಮಟ್ಟಿಗೆ ದುರ್ಬಲ ವರ್ಗಗಳಿಗೆ ಮೊದಲ ಪೆಟ್ಟು ಬೀಳುತ್ತದೆ ಹಾಗೂ ಅತಂತ್ರರಾಗುತ್ತಾರೆ.

ಕೂಲಿಕಾರರು, ಕುಶಲಕರ್ಮಿಗಳು:

ಭೂಮಿಯ ಸ್ವಾಧೀನಕ್ಕೆ ಸಂಬಂಧಿಸಿ ಮಾತುಕತೆ, ಒಲಿಸಿಕೊಳ್ಳುವುದು, ಒತ್ತಡ ಹಾಕುವುದು, ಬೆಲೆ, ಪರಿಹಾರ ಇದೆಲ್ಲವೂ ಭೂಮಿ ಒಡೆಯರಾದ ರೈತರ ಸುತ್ತಲೇ ಸುತ್ತುತ್ತದೆ. ರೈತರು ಅವರ ಭೂಮಿಗನುಗುಣವಾಗಿ ನಿರ್ಧಾರಿತ ಬೆಲೆಯನ್ನು ಪಡೆಯುತ್ತಾರೆ. ಆದರೆ ಇದೇ ಭೂಮಿಯನ್ನು ಸಾಗು ಮಾಡುವುದರಲ್ಲಿ ಬಾಗಾಯ್ತಿನಿಂದ ಜೀವನ ಸಾಗಿಸುತ್ತಾ ಬಂದಿರುವ ಕೂಲಿಕಾರರನ್ನು ಕೇಳುವವರೇ ಇಲ್ಲ. ಅವರು ಊರುಬಿಟ್ಟು ವಲಸೆ ಹೋಗಬೇಕು. ಅಲ್ಲಿರುವ ಇತರ ಕೃಷಿಕೂಲಿಕಾರರು ಅಥವಾ ಕಟ್ಟಡ ಕಾರ್ಮಿಕರೇ ಮೊದಲಾದ ಅಸಂಘಟಿತ ಕಾರ್ಮಿಕರೊಡನೆ ಸ್ಪರ್ಧೆ ಮಾಡಬೇಕು. ಇದರಿಂದ ಘರ್ಷಣೆಗಳು, ಕಡಿಮೆ ಕೂಲಿಗೆ ದುಡಿಯುವ ಒತ್ತಡಗಳಿಗೆ ಸಿಕಿಹಾಕಿಕೊಳ್ಳುತ್ತಾರೆ. ಇತರೆ ಕೂಲಿಕಾರರು ತಮ್ಮ ಹೊಟ್ಟೆಗೆ ಕಲ್ಲುಹಾಕಲು ಬಂದ, ತಮ್ಮ ಊಟ ಕಸಿಯಲು ಬಂದವರೆಂದೇ ಇವರ ಬಗ್ಗೆ ಭಾವಿಸುತ್ತಾರೆ. ಹೀಗೆ ಅತಿ ಸಂಕಷ್ಟಕ್ಕೊಳ್ಳಗಾಗುತ್ತಾರೆ. ಬಡತನದ, ಹಸಿವಿನ ದವಡೆಗೆ ನೂಕಲ್ಪಡುತ್ತಾರೆ. ಅವರ ಆರೋಗ್ಯ ಮಕ್ಕಳ ಶಿಕ್ಷಣ, ಆಹಾರದ ಪರಿಸ್ಥಿತಿ ಅಧೋಗತಿಯಾಗುತ್ತದೆ.

ಈ ಕೂಲಿಕಾರರಿಗೆ ಎಲ್ಲಿ ಹೋದರೂ ಆಧುನಿಕ, ವಾಣಿಜ್ಯ ಆಧಾರಿತ ಕೃಷಿಯಲ್ಲಿಯೇ ಆಗಲಿ, ಕಟ್ಟಡ ಮೊದಲಾದ ಅಸಂಘಟಿತ ವಲಯದಲ್ಲಿಯೇ ಆಗಲಿ ಬಹುರಾಷ್ಟ್ರೀಯ ಕಂಪನಿಗಳು ಅಥವಾ ದೊಡ್ಡ ರಾಷ್ಟ್ರೀಯ ಕಂಪನಿಗಳೆಂದರೆ ಅತ್ಯಾಧುನಿಕ ಯಂತ್ರಗಳೂ ಕೂಲಿಕಾರರನ್ನು ಹೊರಹಾಕುವ ಯಂತ್ರಗಳೇ ಆಗಿವೆ. ಬಿಜೆಪಿ ರಾಜ್ಯ ಸರ್ಕಾರವು ಅನುದಿನ ರೈತರ ಜಪಮಾಡುವಂತೆ ತೋರಿದರೂ, ತನ್ನ ಯಾವುದೇ ಬಜೆಟ್‌ಗಳಲ್ಲಿ ಕೃಷಿ ಕೂಲಿಕಾರರ ಪ್ರಸ್ತಾಪವನ್ನು ಕೂಡ ಮಾಡಿಲ್ಲ. ಅವರಿಗಾಗಿ ಯಾವುದೇ ಯೋಜನೆ ರೂಪಿಸಿಲ್ಲ. ಕೇಂದ್ರ ಸರ್ಕಾರದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೂ ಸಹ ಇಂದು ಕಂಟ್ರಾಕ್ಟುದಾರರ ಮೂಲಕ ಜೆಸಿಬಿ ಮೊದಲಾದ ಯಂತ್ರಗಳನ್ನಾಧರಿಸಿ ನಡೆಯುತ್ತಿದೆ. ದೊಡ್ಡ ಪ್ರಮಾಣದ ಭ್ರಷ್ಟಾಚಾರಕ್ಕೆ ತುತ್ತಾಗಿದೆ. ಭೂಮಿಯ ಮೇಲೆ, ಕೃಷಿಯ ಮೇಲೆ ನೇರ ಅವಲಂಬಿತರಾದ ರೈತಾಪಿ ಜನತೆ, ಕೃಷಿ ಕೂಲಿಕಾರರಂತೆಯೇ ಅಪ್ರತ್ಯಕ್ಷವಾಗಿ ಅವಲಂಬಿತರಾದ ಗ್ರಾಮೀಣ ಕುಶಲಕರ್ಮಿಗಳು ಕೂಡ ಭೂಮಿ ಸ್ವಾಧೀನದಿಂದ ಬಾಧಿತರಾಗುತ್ತಾರೆ. ತಮ್ಮ ಬದುಕಿನ ಆಸರೆಯನ್ನು ಕಳೆದುಕೊಂಡು ಕೂಲಿಕಾರರಾಗುತ್ತಾರೆ. ಅವರ ಜೊತೆಗೆ ಸಣ್ಣ ಪುಟ್ಟ ವ್ಯಾಪಾರಿಗಳು, ಜಾನಪದ ಕಲಾವಿದರು ಕೂಡ ತನ್ನ ಕಲೆಯನ್ನೂ ಕಳೆದುಕೊಳ್ಳುವುದು ಮತ್ತಷ್ಟು ತೀವ್ರವಾಗುತ್ತದೆ. ಹೀಗೆ ಕೂಲಿಕಾರರ ಆದಾಯ ಕುಗ್ಗುತ್ತಿರುವ ಸಮಯದಲ್ಲಿಯೇ ಆಹಾರದ ಬೆಲೆಗಳು, ಅದರಲ್ಲಿಯೂ ತರಕಾರಿ ಬೇಳೆ, ಕಾಳು, ಹಾಲು ಮೊದಲಾದ ಪೋಷಕಾಂಶಯುಕ್ತ ಆಹಾರದ ಬೆಲೆಗಳು.

ಪುಟ 12 ಕ್ಕೆ

ಅಡ್ವಾಣಿ ಯಾತ್ರೆ ವಿರುದ್ಧ ಮಂಗಳೂರಿನಲ್ಲಿ ಸಿಪಿಎಂ ಪ್ರತಿಭಟನೆ

ಭ್ರಷ್ಟಾಚಾರದಲ್ಲಿ ಮುಳುಗಿರುವ ಬಿಜೆಪಿ ಆಡಳಿತವಿರುವ ಕರ್ನಾಟಕಕ್ಕೆ ಅಕ್ಟೋಬರ 30 ರಂದು ಬಂದು ಭ್ರಷ್ಟಾಚಾರ ವಿರೋಧಿ ಜನಚೇತನ ಯಾತ್ರೆಯನ್ನು ನಡೆಸಲಿದ್ದ ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿಯವರ ರಥಯಾತ್ರೆಯ ಕಪಟತನವನ್ನು ವಿರೋಧಿಸಿ ಸಿಪಿಎಂ ದ.ಕ. ಜಿಲ್ಲಾ ಸಮಿತಿ ಜಿಲ್ಲಾಧಿಕಾರಿಕಚೇರಿ ಎದುರು ಅಕ್ಟೋಬರ 29 ರಂದು ಪ್ರತಿಭಟನೆ ನಡೆಸಿದರು.

ಬಿಜೆಪಿ ಎಂದರೆ ಭ್ರಷ್ಟಾಚಾರದ ಪಕ್ಷ ಎಂಬುದು ಕರ್ನಾಟಕದಲ್ಲಿ ಎಲ್ಲರಿಗೂ ತಿಳಿದಿದೆ.



ಹಾಗಾಗಿ ಬಿಜೆಪಿ ಹಿರಿಯ ನಾಯಕರಿಗೆ ಪ್ರತಿಭಟನೆ ನಡೆಸುವ ನೈತಿಕ ಹಕ್ಕಿಲ್ಲ. ಮಾಜಿ ಮುಖ್ಯಮಂತ್ರಿ ಸಹಿತ ಅನೇಕ ಬಿ.ಜೆ.ಪಿ. ಮಂತ್ರಿ ಶಾಸಕರು ಜೈಲು ಸೇರುತ್ತಿದ್ದಾರೆ. ಕರ್ನಾಟಕದಲ್ಲಿ ಭ್ರಷ್ಟ ಬಿ.ಜೆ.ಪಿ. ಮಂತ್ರಿಮಂಡಲದ ರಾಜೀನಾಮೆ ಪಡೆದು ರಥ ಯಾತ್ರೆ ನಡೆಸಲಿ ಎಂಬುದಾಗಿ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಿಪಿಎಂ ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ. ಮಾಧವ ಮಾತನಾಡಿ 'ಅಡ್ವಾಣಿ ಗೋ ಬ್ಯಾಕ್' ಎಂದು ಆಗ್ರಹಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಪಕ್ಷದ ರಾಜ್ಯ ಸಮಿತಿ ಸದಸ್ಯ ಜೆ. ಬಾಲಕೃಷ್ಣ ಶೆಟ್ಟಿ, ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಮಾತನಾಡಿದರು. ಜಿಲ್ಲಾ ಸಮಿತಿ ಮುಖಂಡರಾದ ಕೆ.ಆರ್. ಶ್ರೀಯಾನ್, ಯು.ಬಿ. ಲೋಕಯ್ಯ, ಕೃಷ್ಣಪ್ಪ ಸಾಲ್ಯಾನ್, ಸುಕುಮಾರ್, ಸಂಜೀವ ಬಂಗೇರ, ವಾಸು ಗಟ್ಟಿ, ರಮಣಿ ಮೂಡಬಿದರೆ, ಪದ್ಮಾವತಿ ಶೆಟ್ಟಿ, ಸದಾಶಿವ ದಾಸ್ ಮತ್ತಿತರರು ಉಪಸ್ಥಿತರಿದ್ದರು. ಮರುದಿನ ಮಂಗಳೂರಿಗೆ ಅಡ್ವಾಣಿ ಭೇಟಿ ಇದ್ದ ಹಿನ್ನಲೆಯಲ್ಲಿ ಪೋಲಿಸರಿಂದ ಮೈಕ್ ಅನುಮತಿ ಇಲ್ಲದಿದ್ದರೂ ಪ್ರತಿಭಟನಾ ಪ್ರದರ್ಶನ ವಿರುದ್ದನಿಯಲ್ಲಿ ವ್ಯಕ್ತವಾಯಿತು.

★

ನಿವೇಶನ ನೀಡದ ಮಹಾನಗರ ಪಾಲಿಕೆ : ಮಾಜಿ ಮೇಯರ್ ಪ್ರತಿಕೃತಿ ದಹನ

ಡಿವೈಎಫ್ಐ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಎರಡು ಸಾವಿರಕ್ಕೂ ಮೀರಿ ನಿವೇಶನ ರಹಿತರು ಅಕ್ಟೋಬರ 24 ರಂದು ಮಂಗಳೂರು ನಗರ ಪಾಲಿಕೆಗೆ ಮೆರವಣಿಗೆ ನಡೆಸಿ ನಿವೇಶನ ನೀಡದೆ ಇರುವುದನ್ನು ಪ್ರತಿಭಟಿಸಿ ಪ್ರದರ್ಶನ ನಡೆಸಿದರು. ಅಕ್ಟೋಬರ 26 ರಂದು ನಡೆದ ನಗರಪಾಲಿಕೆಯ ಮಾಸಿಕ ಸಭೆಯಲ್ಲಿ ಈ ಪ್ರದರ್ಶನದ ಬಗ್ಗೆ ಉಲ್ಲೇಖಿಸಿದ ಬಿಜೆಪಿ ಪಕ್ಷದ ಮಾಜಿ ಮೇಯರ್ ಶಂಕರ್ ಭಟ್ ಅವರು ಈ ಪ್ರತಿಭಟನೆಗಾಗಿ ಪ್ರತಿಯೊಬ್ಬ ನಿವೇಶನ ರಹಿತರಿಂದ 500 ರೂಪಾಯಿ ಸಂಗ್ರಹಿಸಲಾಗಿದೆ ಎಂದುಆರೋಪಿಸಿ ಮಾತನಾಡಿದ್ದನ್ನು ಅಕ್ಟೋಬರ 27ರ ದಿನಪತ್ರಿಕೆಗಳು ವರದಿ ಮಾಡಿದ್ದರಿಂದ ಡಿವೈಎಫ್ಐ ಕಾರ್ಯಕರ್ತರು ನಿವೇಶನ ರಹಿತರೂ ಆಕ್ರೋಶಿತರಾಗಿ ಅದೇ ದಿನ ಸಾಯಂಕಾಲ ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ದಿಡೀರನೆ ಪ್ರತಿಭಟನಾ ಪ್ರದರ್ಶನ ನಡೆಸಿ, ಶಂಕರಭಟ್ಟರ ಪ್ರತಿಕೃತಿ ದಹಿಸಿದರು.



ಮಾಜಿ ಮೇಯರ್‌ರವರ ಆರೋಪ ಸುಳ್ಳು ಮತ್ತು ಹಾದಿ ತಪ್ಪಿಸುವಂಥದ್ದು. ನಿವೇಶನರಹಿತರ ಬಗ್ಗೆ ಏನೊಂದೂ ಮಾಡದೆ, ಯಾವುದೇ ಕಾಳಜಿ ಇಲ್ಲದ ಬಿ.ಜೆ.ಪಿ. ಜನಪ್ರತಿನಿಧಿಗಳ ಧೋರಣೆ ಬಯಲಾಗುವುದನ್ನು ಮುಚ್ಚಿ ಹಾಕಲು ಇಂಥ ಸುಳ್ಳು ಆರೋಪ ಹೊರಿಸಲಾಗುತ್ತಿದೆ. ಇಂಥ ಸುಳ್ಳುಗಳು ಪಾಲಿಕೆಯ ಸಭೆಗೆ ಅಗೌರವ. ಶಂಕರಭಟ್ಟರು ಈ ಬಗ್ಗೆ ಕ್ಷಮೆ ಕೋರಬೇಕು. ಇಲ್ಲವಾದರೆ ಅವರ ಪ್ರತಿನಿಧಿಸುವ ವಾರ್ಡಿನಲ್ಲಿ ಅಲ್ಲಲ್ಲಿ ಪ್ರತಿಭಟನಾ ಪ್ರದರ್ಶನ ಮಾಡಲಾಗುವುದು ಎಂಬುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.



ಧ್ವನಿ ವರ್ಧಕಕ್ಕೆ ಅನುಮತಿ ಸಿಗದೆ ಈ ಡಿಢೀರ್ ಪ್ರದರ್ಶನ ನಡೆದಿದ್ದರೂ ಬುರ್ಖಾಧಾರಿ ಮಹಿಳೆಯರೂ ಸೇರಿ ಇನ್ನೂರಕ್ಕೂ ಹೆಚ್ಚುಮಂದಿ ಭಾಗವಹಿಸಿದ್ದರು. ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಕಾರ್ಯದರ್ಶಿ ದಯಾನಂದ ಶೆಟ್ಟಿ, ಸಿ.ಪಿ.ಎಂ ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಸಿಪಿಎಂ ಮುಖಂಡರಾದ ವಸಂತ ಆಚಾರಿ ಡಿವೈಎಫ್ಐ ಉಳ್ಳಾಲ ವಲಯ ಅಧ್ಯಕ್ಷ ಮಹಾಬಲ ದೆಪ್ಪೆಲಿಮಾರ್ ಉಪಸ್ಥಿತರಿದ್ದರು. ಡಿವೈಎಫ್ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ನಗರ ಸಮಿತಿ ಸದಸ್ಯರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



★

ಸಣ್ಣ ವ್ಯಾಪಾರಿಗಳ ಹಿತ ರಕ್ಷಣೆಗಾಗಿ ಪ್ರತಿಭಟನಾ ಪ್ರದರ್ಶನ

ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಯನ್ನು ತಡೆಯಬೇಕು. ಸಣ್ಣ ಅಂಗಡಿದಾರರ ಮತ್ತು ವರ್ತಕರ ಹಿತಾಸಕ್ತಿಗಳಿಗೆ ರಕ್ಷಣೆ ನೀಡಬೇಕು ಮೊದಲಾದ ಬೇಡಿಕೆಗಳನ್ನು ಒತ್ತಾಯಿಸಿ ನವಂಬರ 2 ರಂದು ದ.ಕ. ಜಿಲ್ಲಾಧಿಕಾರಿ ಕಛೇರಿ ಮುಂದೆ ಸಿಪಿಎಂ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ಕೇಂದ್ರ ಸರಕಾರವು ಇತ್ತೀಚೆಗೆ ಚಿಲ್ಲರೆ ವ್ಯಾಪಾರದಲ್ಲಿ ಶೇ 51 ರಷ್ಟು ವಿದೇಶಿ ನೇರ ಹೂಡಿಕೆಗೆ ಅವಕಾಶ ಮಾಡಿ ಕೊಡಲು ತೀರ್ಮಾನಿಸಿದೆ. ವಾಲ್ ಮಾರ್ಟ್, ಮೋನ್ಸೆಂಟೋದಂತಹ ದೈತ್ಯ ಬಹುರಾಷ್ಟ್ರೀಯ ಸಂಸ್ಥೆಗಳು ಭಾರತದ ಚಿಲ್ಲರೆ ವ್ಯಾಪಾರ ಕ್ಷೇತ್ರವನ್ನು ಆಕ್ರಮಿಸುವ ಸಿದ್ಧತೆ ನಡೆಯುತ್ತಿದೆ. ಇದರಿಂದಾಗಿ ರಖಂ ವ್ಯಾಪಾರಿಗಳನ್ನು ಹೊರತುಪಡಿಸಿದರೆ, ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಬೀದಿ ಬದಿ ವ್ಯಾಪಾರಿಗಳು, ಗೂಡಂಗಡಿ,ಜೀನಸು ಅಂಗಡಿಗಳಿಂದ ಪ್ರಾರಂಭವಾಗಿ ಎಲ್ಲಾ ವಿಧದ ವ್ಯಾಪಾರಗಳಲ್ಲಿ ನಿರತರಾಗಿರುವ 5 ಕೋಟಿಗಿಂತಲೂ ಹೆಚ್ಚು ಜನರು ತಮ್ಮ ಜೀವನೋಪಾಯವನ್ನು ಕಳೆದುಕೊಂಡು ಬೀದಿ ಪಾಲಾಗುವ ಸನ್ನಿವೇಶ ಸಮೀಪಿಸುತ್ತಿದೆ ಎಂಬುದಾಗಿ ಪ್ರದರ್ಶನವನ್ನು ಉದ್ದೇಶಿಸಿ ಮಾತನಾಡಿದ ಪಕ್ಷದ ಜಿಲ್ಲಾ ಸಮಿತಿಕಾರ್ಯದರ್ಶಿ ಬಿ ಮಾಧವ ಹೇಳಿದರು.

ಸಿಪಿಎಂ ಪಕ್ಷವು ನವಂಬರ 1 ರಿಂದ 7 ರವರೆಗೆ ರಾಷ್ಟ್ರಾದ್ಯಂತ ನಡೆಸುತ್ತಿರುವ ಪ್ರಚಾರಾಂದೋಳನದ ಭಾಗವಾಗಿ ಈ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್. ಶ್ರೀಯಾನ್ ಮಾತನಾಡಿ ರಸಗೊಬ್ಬರದ ಬೆಲೆ ವಿಪರೀತ ಹೆಚ್ಚಳವಾಗಿದೆ. ಕಾಳಸಂತೆಯಲ್ಲಿ ಮಾರಾಟವಾಗುವುದನ್ನು ತಡೆಯಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಪಕ್ಷದ ಜಿಲ್ಲಾ ಸಮಿತಿ ಮುಖಂಡರಾದ ಜೆ. ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಕೆ. ಯಾದವ ಶೆಟ್ಟಿ, ಯು.ಬಿ. ಲೋಕಯ್ಯ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಈ ವಾರ

ಪುಟ 3 ರಿಂದ

ಹೆಚ್ಚಾಗಿರುವಾಗಲೇ ,ಯಡ್ಡಿ ಬಣದಲ್ಲಿ ಗುರುತಿಸಿಕೊಂಡಿದ್ದ ಮು.ಮಂ. ಸದಾನಂದ ಗೌಡರು ಅಲ್ಲಿಂದ ಸರಿಯುತ್ತಿರುವ ಸೂಚನೆಗಳನ್ನು ನೀಡಿದರು. ತಾನೊಬ್ಬ ಭಿನ್ನ ಮು.ಮಂ.ಯೆಂದೂ, ಭ್ರಷ್ಟಾಚಾರ ಇನ್ನು ಸಹಿಸದೇ ಸ್ವಚ್ಛ ಆಡಳಿತ ನೀಡುವುದಾಗಿ ಹೇಳಿದ್ದು ವಾಡಿಕೆಯ ಮಾತಿಗಿಂತ ಯಡ್ಡಿಯ ಆಡಳಿತದ ಪರೋಕ್ಷ ಟೀಕೆಯಾಗಿತ್ತು. ತಮಗನುಕೂಲಕರವಾಗಿ ವರ್ತಿಸುತ್ತಿಲ್ಲ ಎಂಬ ಯಡ್ಡಿ ಬಣದ ಬೇಸರದಲ್ಲಿ ಇದು ವ್ಯಕ್ತವಾಗುತ್ತಲೇ ಇತ್ತು. ಯಡ್ಡೀ ಆಡಳಿತದಲ್ಲಿ ಕಂಠಪೂರ್ತಿ ತಿಂದುಂಡು ತೇಗಿದ ಬಿಜೆಪಿ-ಆರೆಸ್ಸಸ್ ನಾಯಕರು ಮುಖೇಡಿಗಳಾಗಿರುವ ಅವರನ್ನು ನಿಧಾನಕ್ಕೆ ಕೈಬಿಟ್ಟು ಸದಾ ಸವಾರಿಯನ್ನು ಹುಡುಕುತ್ತಿದ್ದಾರೆ. ಹಾಗಾಗಿ ಲಿಂಗಾಯತರ ಓಟು ತಪ್ಪಿಸಿಕೊಳ್ಳಬಾರದೆಂದು ಶೆಟ್ಟರ್ ಫೋಟೋ ತೋರಿಸುತ್ತಿದ್ದಾರೆ. ಇವೆಲ್ಲವುಗಳ ಹಿಂದಿರುವುದು ಅನಂತ್ ಹಾಗೂ ಸಂಘವೇ ಎಂಬುದು ಗುಟ್ಟಿನ ವಿಷಯವೇನಲ್ಲ.

ಹಳೆಗೆಳೆಯರ ಹೊಸ ವರಸೆ

ಇವೆಲ್ಲವುಗಳನ್ನು ಗಮನಿಸಿಯೇ ಜೆಡಿ ಎಸ್ ನಾಯಕರು ಹಳೇ ಸೂತ್ರದ ಹೊಸ ವರಸೆಗೆ ಅಡಿಯಿಟ್ಟಿದ್ದಾರೆ. ಲಿಂಗಾಯತ-ಒಕ್ಕಲಿಗ ಒಗ್ಗೂಡು ವಿಕೆಯ ಲಾಭ-ನಷ್ಟದ ಜಾತಿ ಲೆಕ್ಕಾಚಾರದಲ್ಲಿ ಒಂದು ಗಾಳದೆಳೆ ಹರಿಯಬಿಟ್ಟಿದ್ದಾರೆ. "ಹೋದರೆ ದಾರ, ಸಿಕ್ಕರೆ ಅಧಿಕಾರ". ಅದಕ್ಕೆ ಅವರೀಗ ಅಂತರ್ ಮುಖಿ ತತ್ವ ಜ್ಞಾನಿಗಳು! ಅಣ್ಣಾನಂತೆ ಮೌನದಾರಿಗಳು!.

ಇದೇ ಹೊತ್ತಿನಲ್ಲಿ ಯಾತ್ರೆ ವಿರೋಧಿಸಿ ಕಾಂಗ್ರೆಸ್ ನಡೆಸಿದ ಪ್ರತಿಭಟನಾ ಪ್ರಹಸನ ಹಾಸ್ಯಾಸ್ಪದವಾಗಿತ್ತು. ಒಟ್ಟಾರೆ ಅದ್ವಾನಿ ಯಾತ್ರೆ ರಾಜ್ಯದಲ್ಲಿನ ಭ್ರಷ್ಟಾಚಾರವನ್ನು ತಡೆಯುವುದಂತೂ ಅಸಾಧ್ಯದ ಮಾತು, ಆದರೆ ಬಿಜೆಪಿಯೊಳಗಿನ ಕಿತ್ತಾಟ ,ಗುಂಪುಗಾರಿಕೆಯನ್ನು ಉಲ್ಬಣಗೊಳ್ಳುವಂತೆ ಮಾಡಿದೆ. ಈಗ ಒಂದು ಪ್ರಕರಣದಲ್ಲಿ ಜಾಮೀನು ಸಿಕ್ಕಿರುವ ಯಡ್ಡಿ ಹೊರ ಬಂದ ಮೇಲೆ ಹೊಸ ಅಂಕ ಶುರುವಾಗಬಹುದು. ಅಂದರೆ ಹೊಸ ಬೆಳವಣಿಗೆಗಳ ಸಾಧ್ಯತೆಗಳು ಅನಿರೀಕ್ಷಿತವಲ್ಲ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಲಿಬ್ಯಾದಲ್ಲಿ ಅಮೆರಿಕಾ–ನಾಟೋ ಸಾಹಸ ಅರಬ್ ಜನತೆಯ ಬಂಡಾಯದ ದಿಕ್ಕು ತಪ್ಪಿಸಲಿಕ್ಕಾಗಿ ಮಾಡಿರುವ ತಂತ್ರ, ಟ್ಯುನೀಸಿಯ ಮತ್ತು ಇಜಿಪ್ತಿನ ಜನತಾ ಬಂಡಾಯಗಳು ಅಲ್ಲಿನ ನಿರಂಕುಶ ಸರಕಾರಗಳನ್ನು ಕಿತ್ತೆಸೆದ ನಂತರ, ಇಸ್ರೇಲಿಗೆ ತಾನು ಏಕಾಂಗಿಯಾಗುತ್ತಿದ್ದೇನೆ ಎಂದು ಅನಿಸಲಾರಂಭಿಸಿತ್ತು. ಎರಡನೇ ಘಟ್ಟದಲ್ಲಿ ಅಮೆರಿಕಾ ಮತ್ತು ಅದರ ಮಿತ್ರರು ಪ್ರಜಾಪ್ರಭುತ್ವ ಮತ್ತು ಜನತಾ ಬಂಡಾಯಗಳನ್ನು ಬೆಂಬಲಿಸುವ ಹೆಸರಿನಲ್ಲಿ ಲಿಬ್ಯಾದಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿದ್ದಾರೆ. ಸಿರಿಯಾ ಅವರ ಮುಂದಿನ ಗುರಿ, ಅಂತಿಮ ಗುರಿ ಇರಾನ್. ನಾವೀಗ ಕಾಣುತ್ತಿರುವುದು ಸಾಮ್ರಾಜ್ಯಶಾಹಿಯ ಹೆಚ್ಚುತ್ತಿರುವ ಆಕ್ರಮಣಕೋರತೆಯನ್ನು ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹತೋಟಿಯ ಅದರ ಮಸಲತ್ತುಗಳನ್ನು.

ಪಶ್ಚಿಮ ಏಶ್ಯಾದಲ್ಲಿ ಅಮೆರಿಕಾ–ನಾಟೋ ಮಸಲತ್ತುಗಳು

ಅರಬ್ ಜನಸಮೂಹಗಳಿಗೆ ಸಿನಿಕ ಅಪಹಾಸ್ಯ

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ನವೆಂಬರ್ 3, 2011 ರ ಸಂಚಿಕೆಯ ಸಂಪಾದಕೀಯ ಆಧರಿಸಿ

ಪಶ್ಚಿಮ ಏಶ್ಯಾದಲ್ಲಿ ಅಮೆರಿಕಾ–ನಾಟೊ ಹಸ್ತಕ್ಷೇಪ ಒಂದು ಮಹತ್ವಪೂರ್ಣ ಘಟ್ಟವನ್ನು ತಲುಪಿದೆ. ಗಡ್ಡಾಫಿ ಆಡಳಿತವನ್ನು ಉರುಳಿಸಿ ಆತನ ಅಮಾನುಷ ಹತ್ಯೆಯೊಂದಿಗೆ ಲಿಬ್ಯಾ 'ವಿಮೋಚನೆ'ಗೊಂಡಿದೆ. ಈಗ ಲಿಬ್ಯಾ ನಾಟೋ ಆಶ್ರಿತ ದೇಶವಾಗಿದೆ. ನಾಟೋ ಹಸ್ತಕ್ಷೇಪವನ್ನು ಮರೆಮಾಚುವ ತೆಳ್ಳಗಿನ ಮುಸುಕು ಬಯಲಾಗಿದೆ. ವಿಪರೀತ ಬಾಂಬುದಾಳಿಗಳಲ್ಲದೆ ಬ್ರಿಟಿಶ್ ಮತ್ತು ಇತರ ನಾಟೋ ದೇಶಗಳ ವಿಶೇಷ ಪಡೆಗಳು ಬಂಡುಕೋರರಿಗೆ ನೆರವಾಗಿವೆ. ಅಮೆರಿಕಾದ ವಿಧೇಯ ಮಿತ್ರ ಖತಾರ್‌ನ ಪಡೆಗಳು ಬಂಡುಕೋರ ಪಡೆಗಳ ಜತೆಗೆ ಲಿಬ್ಯಾದಲ್ಲಿದ್ದವು. ಗಡ್ಡಾಫಿ ಆಡಳಿತ ಪತನಗೊಂಡ ನಂತರವೂ 'ಲಿಬ್ಯಾ ಸಂಕ್ರಮಣಕಾಲೀನ ಮಂಡಳಿ' ನಾಟೋ ಪಡೆಗಳನ್ನು ಡಿಸೆಂಬರ್ ಅಂತ್ಯದ ವರೆಗೂ ಇದ್ದು ವಿಮಾನ ಗಸ್ತು ನಡೆಸಬೇಕು ಎಂದು ಕೇಳಿದೆ.

ಲಿಬ್ಯಾವನ್ನು ನಾಟೊ (ಅಂದರೆ 'ಉತ್ತರ ಅಂಟ್ಲಾಂಟಿಕ್ ಸಂಧಿ ಸಂಘಟನೆ') ಪ್ರಭಾವದೊಳಗೆ ತಂದಿರುವುದು ಬಹುದೊಡ್ಡ ಪರಿಣಾಮಗಳನ್ನು ಉಂಟುಮಾಡಲಿದೆ. ಅಮೆರಿಕಾದ 'ಆಫ್ರಿಕನ್ ಮಿಲಿಟರಿ ಕಮಾಂಡ್'(ಆಫ್ರಿಕಾಂ)ಗೆ ಈಗ ಒಂದು ನೆಲೆ ಸಿಕ್ಕಿದೆ. ಹೇಳಿದಂತೆ ಕೇಳುವ ಲಿಬ್ಯಾ ದೊರೆತಿರುವಾಗ, ಭೂಮಧ್ಯಸಾಗರ (ಮೆಡಿಟರೇನಿಯನ್)ವನ್ನು ಈಗ ನಾಟೊ ಸರೋವರವಾಗಿ ಪರಿವರ್ತಿಸಬಹುದು. ಲಿಬ್ಯಾದ ಮೇಲೆ ದಾಳಿಯಲ್ಲಿ ನೇತೃತ್ವ ವಹಿಸಿದ್ದ ಫ್ರೆಂಚರಿಗೆ ಈಗ ನಿರಾಳ, ಆಫ್ರಿಕಾದಲ್ಲಿ ಅವರ ಪಾರಂಪರಿಕ ಪ್ರಭಾವಕ್ಕೆ ಸವಾಲು ಹಾಕಿದ್ದ ಗಡ್ಡಾಫಿಯನ್ನು ಮುಗಿಸಿ ಬಿಡಲಾಗಿದೆ. ನಾಟೋ ಈಗ ಸಾಮ್ರಾಜ್ಯಶಾಹಿಯ ಜಾಗತಿಕ ಮಿಲಿಟರಿ ಅಂಗ, ಆಫ್ರಿಕಾ, ಏಶ್ಯಾ ಮತ್ತು ಜಗತ್ತಿನ ಎಲ್ಲ ಭಾಗಗಳಿಗೂ ಕೈಚಾಚಬಲ್ಲಂತದ್ದು.



ಸಿರಿಯಾ ಮುಂದಿನ ಗುರಿ

ಈಗ ಅಮೆರಿಕಾ ಮತ್ತು ನಾಟೊ ಸಿರಿಯಾದ ಮೇಲೆ ತಮ್ಮ ಪೂರ್ಣ ಗಮನವನ್ನು ನೆಡಬಹುದು. ಅಮೆರಿಕಾದ ಪ್ರಭಾವ ವಲಯದೊಳಕ್ಕೆ ಬರುವುದಿಲ್ಲ ಎಂದು ಹಠತೊಟ್ಟು ನಿರಾಕರಿಸುತ್ತಿರುವ ಅರಬ್ ಪ್ರಭುತ್ವ ಉಳಿದಿರುವುದು ಅದೊಂದೇ. ಸಿರಿಯಾದ ಮೇಲೆ ನಿರ್ಬಂಧಗಳನ್ನು ಹೇರಲು ಕರೆ ನೀಡುವ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯವನ್ನು ರಷ್ಯಾ ಮತ್ತು ಚೀನಾದ ವಿಟೋ ಚಲಾವಣೆಯಿಂದಾಗಿ ಪಾಸು ಮಾಡಿಸಿಕೊಳ್ಳುವಲ್ಲಿ, ಆ ಮೂಲಕ ಹಸ್ತಕ್ಷೇಪಕ್ಕೆ ದಾರಿ ತೆರೆಸುವಲ್ಲಿ ವಿಫಲವಾದ ಮೇಲೆ ಅಮೆರಿಕಾ ಸಂಯುಕ್ತ ಸಂಸ್ಥಾನ ಅಲ್ಲಿ ಆಡಳಿತ ಬದಲಾವಣೆ ತರಲು ದಾರಿಗಳನ್ನು ಶೋಧಿಸುತ್ತಿದೆ. ಟರ್ಕಿ ದೇಶ ನಾಟೊ ಕೂಟದ ಒಂದು ಸದಸ್ಯ ದೇಶ, ಆದರೆ ಸಿರಿಯಾದೊಂದಿಗೆ ಉತ್ತಮ ಸಂಬಂಧಗಳ ಪರಂಪರೆ ಇರುವ ದೇಶ. ಅದೀಗ ಸಿರಿಯಾ–ವಿರೋಧಿ ಶಕ್ತಿಗಳ ಕೇಂದ್ರವಾಗ ತೊಡಗಿದೆ. 'ಮುಕ್ತ ಸಿರಿಯಾ ಸೇನೆ' ಟರ್ಕಿಯಿಂದ ಕಾರ್ಯ ನಿರ್ವಹಿಸುತ್ತಿದೆ ಎಂದು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಮೊತ್ತ ಮೊದಲ ಬಾರಿಗೆ ವರದಿ ಮಾಡಿದೆ. ಇದಕ್ಕೆ ಮೊದಲು ಟರ್ಕಿಯ ಇಸ್ತಾಂಬುಲ್‌ನಲ್ಲಿ ವಿಭಿನ್ನ ವಿರೋಧಿ ಗುಂಪುಗಳು ಸೇರಿಕೊಂಡಿರುವ 'ಸಿರಿಯಾ ರಾಷ್ಟ್ರೀಯ ಮಂಡಳಿ' ರಚಿಸಲಾಗಿತ್ತು. ಅಮೆರಿಕಾದ ಅತ್ಯಂತ ನಿಕಟ ಮಿತ್ರ ಸೌದಿ ಅರೇಬಿಯ ಸಿರಿಯಾದ ಸರಕಾರವನ್ನು ದೂಷಿಸುತ್ತ ಸಿರಿಯಾದ ರಾಜಧಾನಿ ಡಮಾಸ್ಕಸ್‌ನಿಂದ ತನ್ನ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿತ್ತು. ನಂತರ ಕುವೈತ್ ಮತ್ತು ಬಹ್ರೇನ್ ಕೂಡ ಅದನ್ನನುಸರಿಸಿದವು.

ಸಿರಿಯಾದಲ್ಲಿ ಹಿಂಸಾಚಾರಕ್ಕೆ ಎರಡೂ ಕಡೆಗಳವರು ಬಲಿಯಾಗುತ್ತಿದ್ದಾರೆ. ಸಶಸ್ತ್ರ ಪ್ರತಿಭಟನಾಕಾರರು ಮತ್ತು ಸಿರಿಯಾದ ಪೋಲೀಸ್ ಮತ್ತು ಸೈನಿಕ ಪಡೆಗಳವರ ಹತ್ಯೆಗಳಾಗುತ್ತಿವೆ. ಅಮೆರಿಕಾ ಮತ್ತು ಇಸ್ರೇಲಿಗೆ ಅಸ್ಸಾದ್ ಸರಕಾರವನ್ನು ಅಸ್ಥಿರಗೊಳಿಸುವುದು ಪಶ್ಚಿಮ ಏಶ್ಯಾದಲ್ಲಿ ಸಾಮ್ರಾಜ್ಯಶಾಹೀ ಕುತಂತ್ರಗಳನ್ನು ಎದುರಿಸಿ ನಿಲ್ಲುವ ಎಲ್ಲ ಸರಕಾರಗಳನ್ನು ನಿರ್ಮೂಲಗೊಳಿಸುವ ರಣತಂತ್ರದ ಭಾಗವೇ ಆಗಿದೆ. ಅಲ್ಲದೆ ಸಿರಿಯಾ ಇರಾನಿನೊಂದಿಗೆ, ಅಂದರೆ ಅಮೆರಿಕಾದ ಅತಿ ದೊಡ್ಡ ಶತ್ರುವಿನೊಂದಿಗೆ ನಿಕಟ ಸಂಬಂಧ ಹೊಂದಿದೆ.

ಹಲ್ಲು ಮಸೆಯುತ್ತಿರುವ 'ಶಾಂತಿದೂತ'!

ನೋಬೆಲ್ ಶಾಂತಿ ಪ್ರಶಸ್ತಿ ವಿಜೇತ ಅಧ್ಯಕ್ಷ ಒಬಾಮ ಗಡ್ಡಾಫಿ ಸಾವಿನಿಂದ ಹಿಗ್ಗುತ್ತಿದ್ದಾರೆ ಮತ್ತು ಸಿರಿಯಾವನ್ನು ಅಸ್ಥಿರಗೊಳಿಸುವಲ್ಲಿ ತೊಡಗಿದ್ದಾರೆ ಹಾಗೂ ಇರಾನಿನಲ್ಲಿ ಬಿಗುವಿನ ವಾತಾವರಣ ಸೃಷ್ಟಿಸಲು ಹಲ್ಲು ಮಸೆಯುತ್ತಿದ್ದಾರೆ. ಇತ್ತೀಚೆಗೆ, ಅಮೆರಿಕನ್ ಆಡಳಿತ ತಮ್ಮ ದೇಶದಲ್ಲಿನ ಸೌದಿ ಅರೇಬಿಯಾದ ರಾಯಭಾರಿಯ ಹತ್ಯೆಗೆ 'ಇರಾನೀ ಕ್ರಾಂತಿಕಾರಿ ರಕ್ಷಕರು' ನಡೆಸಿದ್ದ ಒಂದು ಪಿತೂರಿಯನ್ನು ಅನಾವರಣಗೊಳಿಸಿರುವದಾಗಿ ಪ್ರಕಟಿಸಿತು. ಈ 'ಪಿತೂರಿ'ಯ, ಅದರಲ್ಲಿ ಭಾಗವಹಿಸಿದ್ದರೆನ್ನಲಾದ ವ್ಯಕ್ತಿಗಳ ವಿವರಗಳು ಎಷ್ಟೊಂದು ಅಸಮಂಜಸ ಮತ್ತು ವಿಲಕ್ಷಣವಾಗಿತ್ತೆಂದರೆ ಅಮೆರಿಕಾದಲ್ಲಿನ ಭದ್ರತಾ ಮತ್ತು ಬೇಹುಗಾರಿಕೆ ತಜ್ಞರು ಕೂಡ ಅದನ್ನು ಅನುಮಾನದಿಂದಲೇ ಕಂಡರು. ಇದನ್ನನುಸರಿಸಿ, ಪರ್ಷಿಯನ್ ಕೊಲ್ಲಿಯಲ್ಲಿ ಅಮೆರಿಕನ್ ನೌಕಾ ಪಡೆಗಳನ್ನು ಹೆಚ್ಚಿಸಲಾಗುತ್ತಿದೆ, ಕುವೈತ್‌ನಂತಹ ಕಡೆಗಳಲ್ಲಿ ಮಿಲಿಟರಿಯನ್ನು ನೆಲೆಗೊಳಿಸಲಾಗುತ್ತಿದೆ ಎಂಬ ವರದಿಗಳು ಕಾಣ ಬಂದಿವೆ. ಈ ವರ್ಷಾಂತ್ಯದಲ್ಲಿ ಇರಾಕಿನಿಂದ ಅಮೆರಿಕನ್ ಪಡೆಗಳನ್ನು ಹಿಂದ ಕರೆಸಿಕೊಂಡ ನಂತರ ಪರ್ಷಿಯನ್ ಕೊಲ್ಲಿಯಲ್ಲಿ ಮಿಲಿಟರಿ ಉಪಸ್ಥಿತಿಯನ್ನು ಒಬಾಮ ಬಲಗೊಳಿಸುತ್ತಿದ್ದಾರೆ. ಅದಕ್ಕಾಗಿ ಇರಾನಿನಿಂದ ಬೆದರಿಕೆಗಳು ಹೆಚ್ಚಿವೆ ಎಂಬ ಸಮಜಾಯಿಷಿ ಕೊಡುತ್ತಿದ್ದಾರೆ.

ಅಧ್ಯಕ್ಷ ಬುಶ್ ಇರಾಕಿನಲ್ಲಿ ಕೊನೆಗೂ ಯುದ್ಧಕ್ಕಿಳಿಯುವ ಮೊದಲು ಸದ್ದಾಂ ಹುಸೇನ್‌ರಿಂದ ಬೆದರಿಕೆಗಳಿವೆ ಎಂದು ಹೇಳುತ್ತಾ ಬಂದಂತೆ, ಶಾಂತಿಸ್ಥಾಪಕ ಒಬಾಮ ಇರಾನಿನೊಡನೆ ಯುದ್ಧಕ್ಕೆ ಆಧಾರ ಸಿದ್ಧಪಡಿಸುವ ಅಪಾಯಕಾರಿ ಹಾದಿಯಲ್ಲಿ ಈಗ ಸಾಗಿದ್ದಾರೆ! ಸಿರಿಯಾವನ್ನು ಅಸ್ಥಿರಗೊಳಿಸುವುದು ಇರಾನನ್ನು ಏಕಾಂಗಿಯಾಗಿಯಂತೆ ಮಾಡುವ ಪ್ರಯತ್ನದ ಭಾಗ. ಇರಾನಿನೊಂದಿಗೆ ಯುದ್ಧ ಅಮೆರಿಕಾಕ್ಕೆ ಒಂದು ಕಷ್ಟದ ಕೆಲಸವಾದರೂ ರಾಜಕೀಯ ಲೆಕ್ಕಾಚಾರ ಮಾಡಿಕೊಂಡು ಒಬಾಮ ಇಂತಹ ಆಕ್ರಮಣಕಾರಿ ತಂತ್ರಗಳಿಗೆ ಕೈಹಾಕಿದ್ದಾರೆ.

ಕ್ರೂರ ಅಣಕ

ಒಬಾಮ ಅವರ ಜನಪ್ರಿಯತೆ ಕುಗ್ಗುತ್ತಿದ್ದು, ಮುಂದಿನ ವರ್ಷವೇ ಅಧ್ಯಕ್ಷ ಚುನಾವಣೆಯನ್ನು ಎದುರಿಸಬೇಕಾಗಿರುವುದರಿಂದ ಇರಾನ್ ವಿರುದ್ಧ ವೈಷಮ್ಯತೆಯನ್ನು ಹೆಚ್ಚಿಸುವ ಕಸರತ್ತುಗಳನ್ನು ನಡೆಸಿ ಇಸ್ರೇಲ್–ಪರ ಲಾಬ್ಬಿಗಳ ಬೆಂಬಲ ಗಿಟ್ಟಿಸುವ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ.

ಲಿಬ್ಯಾದ ಸಾಹಸ ಅರಬ್ ಜನತೆಯ ಬಂಡಾಯದ ದಿಕ್ಕು ತಪ್ಪಿಸಲಿಕ್ಕಾಗಿ ಮಾಡಿರುವ ತಂತ್ರ, ಟ್ಯುನೀಸಿಯ ಮತ್ತು ಇಜಿಪ್ತಿನ ಜನತಾ ಬಂಡಾಯಗಳು ಅಲ್ಲಿನ ನಿರಂಕುಶ ಸರಕಾರಗಳನ್ನು ಕಿತ್ತೆಸೆದ ನಂತರ, ಇಸ್ರೇಲಿಗೆ ತಾನು ಏಕಾಂಗಿಯಾಗುತ್ತಿದ್ದೇನೆ ಎಂದು ಹೆಚ್ಚೆಚ್ಚಾಗಿ ಅನಿಸಲಾರಂಭಿಸಿತ್ತು. ಎರಡನೇ ಘಟ್ಟದಲ್ಲಿ ಅಮೆರಿಕಾ ಮತ್ತು ಅದರ ಮಿತ್ರರು ಪ್ರಜಾಪ್ರಭುತ್ವ ಮತ್ತು ಜನತಾ ಬಂಡಾಯಗಳನ್ನು ಬೆಂಬಲಿಸುವ ಹೆಸರಿನಲ್ಲಿ ಲಿಬ್ಯಾದಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿದ್ದಾರೆ. ಸಿರಿಯಾ ಅವರ ಮುಂದಿನ ಗುರಿ, ಅಂತಿಮ ಗುರಿ ಇರಾನ್. ನಾವೀಗ ಕಾಣುತ್ತಿರುವುದು ಸಾಮ್ರಾಜ್ಯಶಾಹಿಯ ಹೆಚ್ಚುತ್ತಿರುವ ಆಕ್ರಮಣಕೋರತೆಯನ್ನು ಮತ್ತು ಪಶ್ಚಿಮ ಏಶ್ಯಾದಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ಸಂಪನ್ಮೂಲಗಳಿಗೆ ಕೈಹಾಕಲು, ಅವುಗಳ ಮೇಲೆ ಹತೋಟಿ ಪಡೆಯಲು ಶಕ್ತರಾಗುವಂತೆ ಮಾಡುವ ಸಾಮ್ರಾಜ್ಯಶಾಹಿ ಶಕ್ತಿಗಳ ಮಸಲತ್ತುಗಳನ್ನು. ಅಮೆರಿಕಾ ಮತ್ತು ಯುರೋಪಿನ ಶಕ್ತಿಗುಂದಿರುವ ಆರ್ಥಿಕಗಳಿಗೆ ಪಶ್ಚಿಮ ಏಶ್ಯಾದ ತೈಲ ಮತ್ತು ನೈಸರ್ಗಿಕ ಅನಿಲ ಸಂಪನ್ಮೂಲಗಳು ಕೈವಶವಾಗುತ್ತಿರುವುದು ಒಂದು ಬಹು ಅಪೇಕ್ಷಿಯ ಪಾರಿತೋಷಕವೇ. ಇದು ತಮ್ಮ ಭವಿಷ್ಯವನ್ನು ತಾವೇ ರೂಪಿಸಬೇಕೆಂಬ ದೃಢ ನಿರ್ಧಾರ ಮಾಡಿರುವ ಅರಬ್ ಜನಸಮೂಹಗಳ ಸಿನಿಕ ಅಣಕವಲ್ಲದೆ ಬೇರೇನೂ ಅಲ್ಲ.

ವ್ಯಾಪಾರೀಕರಣ - ಕೋಮುವಾದೀಕರಣ ಅಡಕತ್ತರಿಯಲ್ಲಿ ಶಿಕ್ಷಣ

ಶಿಕ್ಷಣದ ನಿರ್ದಯ ವ್ಯಾಪಾರಿಕರಣದದಾಳಿ ಒಂದು ಕಡೆ, ಮತ್ತೊಂದು ಕಡೆ ಶಿಕ್ಷಣಕ್ಕೆ ಕೋಮುವಾದದ ವಿಷವನ್ನು ಬೆರೆಸುವ ಕೋಮುವಾದೀಕರಣ. ಬಿಜೆಪಿ ಆಡಳಿತದಲ್ಲಿ ಶಿಕ್ಷಣರಂಗದ ಮೇಲೆ ಮತ್ತೇಷ್ಟೋ ಹಲ್ಲೆಗಳು...........

ಹೆಚ್.ಆರ್.ನವೀನ್‌ಕುಮಾರ್



ರಾಜ್ಯದ ಸಾಕ್ಷರತೆ ಪ್ರಮಾಣ 66% ಆಗಿದೆ. (ಮಹಿಳೆಯರು 56% ರಷ್ಟು, 76% ಪುರುಷರು). ಸಾಕ್ಷರತೆಯಲ್ಲಿ ನಿರೀಕ್ಷಿತ ಸಾಧನೆಯಾಗಿಲ್ಲ. ರಾಜ್ಯದಲ್ಲಿ ಶಾಲಾ ಶಿಕ್ಷಣ ವ್ಯಾಪಕವಾಗಿ ಮಾರಾಟದ ಸರಕಾಗುತ್ತಿದೆ. ಸೂಕ್ತ ಸೌಲಭ್ಯಗಳಿಲ್ಲದೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಾಧ್ಯವಾಗುತ್ತಿಲ್ಲ. ಇನ್ನೊಂದೆಡೆ ನಾಯಿಕೊಡೆಗಳಂತೆ ನಿಯಮ ಬಾಹಿರವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಮಾರಾಟದಲ್ಲಿ ತೊಡಗಿವೆ.

ರಾಜ್ಯದಲ್ಲಿ ಸರ್ಕಾರಿ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿರುವುದು ಆಶಾದಾಯಕವಾದರೂ, ಖಾಸಗಿಯವರ ನುಸುಳುವಿಕೆ ಎಥೇಚ್ಛವಾಗಿದೆ. ಕಿರಿಯ ಹಿರಿಯ ಪ್ರಾಥಮಿಕ–ಪ್ರೌಢಶಾಲೆಗಳಲ್ಲಿ ಒಟ್ಟು 1,00,35,093 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಇದರಲ್ಲಿ 48,40,048 ವಿದ್ಯಾರ್ಥಿನಿಯರು ಇದ್ದಾರೆ. ಸುಮಾರು ಶೇ.76 ರಷ್ಟು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ಅಭ್ಯಸಿಸುತ್ತಿದ್ದಾರೆ. ರಾಜ್ಯದಲ್ಲಿ 1,20,000 ಮಕ್ಕಳು ಶಾಲೆಯಿಂದ ಹೊರ ಉಳಿದಿದ್ದಾರೆ ಎಂದು ಸರ್ಕಾರ ಅಂಕಿ ಸಂಖ್ಯೆಗಳೇ ಹೇಳುತ್ತಿವೆ.. ಬಾಲ ಕಾರ್ಮಿಕರಾಗಿ, ಹೋಟೆಲ್, ಗ್ಯಾರೇಜ್, ತೋಟಗಳಲ್ಲಿ, ಬೀಡಿ, ಮಂಡಕ್ಕಿ ಕಂಪನಿಗಳಲ್ಲಿ ಮತ್ತು ಇನ್ನಿತರ ಅಪಾಯಕಾರಿ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಸರ್ಕಾರದ ಸರ್ವ ಶಿಕ್ಷಣ ಅಭಿಯಾನ ಅಥವಾ ಇನ್ನಾವುದೇ ಕಾರ್ಯಕ್ರಮ ಇವರಿಗೆ ತಲುಪುತ್ತಿಲ್ಲ. ದೊಡ್ಡ ಪ್ರಮಾಣದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವ ಸರ್ಕಾರಿ ಶಾಲೆಗಳನ್ನು ಉನ್ನತೀಕರಿಸಲು ರಾಜ್ಯ ಸರ್ಕಾರ ಮುಂದಾಗುತ್ತಿಲ್ಲ. ಶಾಲೆಗಳು ತೀವ್ರವಾಗಿ ಹಣಕಾಸಿನ ಕೊರತೆಯಿಂದ ನರಳುತ್ತಿವೆ. 1966 ರ ಡಾ॥ ಕೊಠಾರಿ ಆಯೋಗದ ಶಿಫಾರಸ್ಸು ಮತ್ತು ಎಸ್‌ಎಫ್‌ಐ ನ ಬಹು ದಿನದ ಬೇಡಿಕೆಯಾದ ರಾಜ್ಯ ಬಜೆಟ್‌ನ ಶೇ.30ರಷ್ಟು ಶಿಕ್ಷಣಕ್ಕೆ ಮೀಸಲಿಡಬೇಕೆನ್ನುವುದು ರಾಜ್ಯ ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ. ರಾಜ್ಯ ಬಜೆಟ್‌ನಲ್ಲಿ ಅತ್ಯಂತ ಕಡಿಮೆ ಹಣವನ್ನು ಶಿಕ್ಷಣಕ್ಕಾಗಿ ಮೀಸಲಿಡುತ್ತಾ ಬರಲಾಗಿದೆ.

ರಾಜ್ಯ ಸರ್ಕಾರ ಕಳೆದ 5 ವರ್ಷಗಳಲ್ಲಿ ಶಿಕ್ಷಣಕ್ಕೆ ನೀಡಿದ ಬಜೆಟ್‌ನ ವಿವರ

2006–07	13.00%
2007–08	12.00%
2008–09	15.00%
2009–10	17.38%
2010–11	14.00%

2010–11 ನೇ ಸಾಲಿನಲ್ಲಿ ಕೇರಳದಲ್ಲಿ ಇದ್ದ ಎಡರಂಗ ಸರ್ಕಾರ ಶಿಕ್ಷಣಕ್ಕಾಗಿ 27% ಹಣ ಮೀಸಲಿಟ್ಟಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕರ್ನಾಟಕದಲ್ಲಿ ಅತಿ ಕಡಿಮೆ ಹಣವನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡುತ್ತಿರುವುದರಿಂದ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಬದಲಾಗಿ ಶಿಕ್ಷಣದ ವ್ಯಾಪಾರೀಕರಣ ಹೆಚ್ಚುತ್ತಿದೆ. ರಾಜ್ಯದ ಶಾಲೆಗಳಲ್ಲಿ ಸುಮಾರು 38 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಸುಪ್ರೀಂಕೋರ್ಟ್‌ನ ತೀರ್ಪಿನ ವಿರುದ್ಧವಾಗಿ ಈಗಲೂ ರಾಜ್ಯದಲ್ಲಿ ಏಕೋಪಾಧ್ಯಾಯ (Single Teacher School) ಶಾಲೆಗಳು ಸಾಲು ಸಾಲಾಗಿವೆ. ಮೂಲ ಸೌಲಭ್ಯಗಳಾದ ಕೊಠಡಿ, ಕುಡಿಯುವ ನೀರು, ಗ್ರಂಥಾಲಯ, ಆಟದ ಮೈದಾನ, ಇನ್ನಿತರ ಕನಿಷ್ಠ ಸೌಲಭ್ಯಗಳು ಇಲ್ಲದಾಗಿವೆ. ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಪಠ್ಯಪುಸ್ತಕ, ಸಮವಸ್ತ್ರಗಳನ್ನು ಸಮರ್ಪಕವಾಗಿ ಎಲ್ಲರಿಗೂ ನೀಡುತ್ತಿಲ್ಲ. ಅಲ್ಲದೆ ವಿತರಣೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ.

ಸರ್ಕಾರಿ ಶಾಲೆಗಳನ್ನು ಮುಚ್ಚುವ ಮೂಲಕ ಖಾಸಗೀಕರಣ ಯತ್ನ

ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳನ್ನು ಉತ್ತಮಪಡಿಸುವ ಬದಲಾಗಿ ಸರ್ಕಾರವೇ ಅವುಗಳನ್ನು ದತ್ತು ಕೊಡುವ ಹೆಸರಿನಲ್ಲಿ ಖಾಸಗೀಕರಿಸುತ್ತಿದೆ. ಅಜೀಂ ಪ್ರೇಂಜಿ ಪ್ರತಿಷ್ಠಾನ ಸೇರಿದಂತೆ ಅನೇಕ ಕಂಪನಿಗಳು ಈ ಶಾಲೆಗಳನ್ನು ಪಡೆಯಲು ಹವಣಿಸುತ್ತಿವೆ. "ಶಾಲೆಗಾಗಿ ನಾವು–ನೀವು" ಯೋಜನೆಯ ಹೆಸರಿನಲ್ಲಿ ಶಾಲೆಗೆ ಅಗತ್ಯವಿರುವ ಸೌಲಭ್ಯಗಳನ್ನು ಹೊಂದಿಸಿಕೊಳ್ಳಲು ಸ್ಥಳೀಯವಾಗಿ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳಬೇಕೆಂದು ಹೊರಟಿರುವ ಸರ್ಕಾರ ಶಿಕ್ಷಣ ನೀಡುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಈಗಾಗಲೇ ಕೆಲಸದ ಹೊರೆ ಕಡಿಮೆ ಮಾಡಿ ಅಗತ್ಯ ತರಬೇತಿ ನೀಡಿ ಗುಣಮಟ್ಟದ ಬೋಧನೆಗೆ ಕಳುಹಿಸುವುದರ ಬದಲಾಗಿ, ಶಿಕ್ಷಕರನ್ನು ಹಣ ಸಂಗ್ರಹಿಸಲು ಮನೆ ಮನೆಗೆ ಕಳುಹಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಹಾಸ್ಯಾಸ್ಪದ ಮತ್ತು ಬೇಜವಾಬ್ದಾರಿತನದ್ದು.

ಭಾರತದ ಸಂವಿಧಾನದಲ್ಲಿ ನಂಬಿಕೆಯಿರುವ ಪ್ರತಿಯೊಬ್ಬರು ಸರ್ಕಾರದ ದಿವಾಳಿಕೋರ, ಖಾಸಗೀಕರಣದ ಹುನ್ನಾರ ಅಡಗಿರುವ ಈ ನಿರ್ಧಾರವನ್ನು ಬಲವಾಗಿ ವಿರೋಧಿಸಬೇಕಿದೆ. ಶಿಕ್ಷಣದ ಮೂಲಭೂತ ಹಕ್ಕನ್ನು ಎಲ್ಲಾ ಮಕ್ಕಳಿಗೆ ಒದಗಿಸುವ ವಿಚಾರದಲ್ಲಿ ಸಂವಿಧಾನದಿಂದ ದೂರ ಸರಿಯುವ ಸರಕಾರದ ಕ್ರಮ ಜನತೆಗೆ ಅಪಚಾರ ಎಸಗಿದಂತೆ. ಸರಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವ ಸರಕಾರ ಅದೇ ಸ್ಥಳಗಳಲ್ಲಿ ಖಾಸಗಿ ಶಾಲೆಗಳ ಸ್ಥಾಪನೆಗೆ ಅವಕಾಶ ಕಲ್ಪಿಸುತ್ತಿದೆ. ಇರುವ ಸರ್ಕಾರಿ ಶಾಲೆಗಳಿಗೆ ಸೂಕ್ತ ಸೌಲಭ್ಯ ಕಲ್ಪಿಸದ ಕಾರಣ, ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಇಳಿಮುಖವಾಗುತ್ತಿದೆ. ಶಿಕ್ಷಣ ನೀಡುವಾಗ ದಾಖಲಾತಿ, ಮಕ್ಕಳ ಸಂಖ್ಯೆಯನ್ನಷ್ಟೆ ಪರಿಗಣಿಸಬೇಕಿಲ್ಲ. ಮಕ್ಕಳ ಶಿಕ್ಷಣ ಹಕ್ಕು ಮಸೂದೆ 2009 ಪ್ರತಿಯೊಬ್ಬ ಮಗುವಿಗೂ ಶಿಕ್ಷಣ ನೀಡುವ ಉದ್ದೇಶದಿಂದ ರೂಪಿಸಲಾಗಿದೆ. ಇದರ ವಿರುದ್ಧವಾಗಿ ರಾಜ್ಯ ಸರ್ಕಾರ ಶಾಲೆಗಳನ್ನು ಮುಚ್ಚಲು ಹೊರಟಿರುವುದು ಬಡ ಜನ ವಿರೋಧಿ ನೀತಿಯೇ ಆಗಿದೆ.

ಸಾಂಸ್ಕೃತಿಕ ದಾಳಿ :

ಶಿಕ್ಷಕರ ನೇಮಕಾತಿ

38 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ವಿದ್ಯಾರ್ಥಿ ಶಿಕ್ಷಕರ ಮಧ್ಯೆ ಉತ್ತಮ ಬಾಂಧವ್ಯ ಏರ್ಪಡಲು ಸಾಧ್ಯವಾಗುವಂತೆ ಕಡಿಮೆ ವಿದ್ಯಾರ್ಥಿಗಳ ಅನುಪಾತದಲ್ಲಿ (1:20) ಶಿಕ್ಷಕರ ನೇಮಕ ಅಗತ್ಯವಿದೆ. ಅದೂ ಸಾಧ್ಯವಾಗುತ್ತಿಲ್ಲ. ಆದರ್ಶ ವಿದ್ಯಾಲಯಗಳಿಗೆ ಆಸ್ಟ್ರಿಕ್ಸ್ ಎಂಬ ಕಂಪನಿಯಿಂದ ಹೊರಗುತ್ತಿಗೆ ಆಧಾರದಲ್ಲಿ ಪ್ರತಿ ವರ್ಷ 2,300 ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿದೆ. ಇಲ್ಲಿ ನಿವೃತ್ತ ಶಿಕ್ಷಕರಿಗೆ ಆದ್ಯತೆ ನೀಡಲಾಗುತ್ತಿದೆ. ವೇತನ ಸೇರಿದಂತೆ ಅನೇಕ ರೀತಿಯ ತಾರತಮ್ಯ ಈ ನೇಮಕಾತಿಯಲ್ಲಿ ನಡೆಯುತ್ತಿದೆ. 8 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಮುಂದಾಗುತ್ತಿರುವ ಸರ್ಕಾರದ ನಿರ್ಧಾರ ಶಿಕ್ಷಣ ಹಕ್ಕು ಮಸೂದೆಗೆ ವಿರುದ್ಧವಾದದ್ದು. ಒಬ್ಬ ಶಿಕ್ಷಕ 3 ಶಾಲೆಗಳಿಗೆ ಬೋಧನೆ ಮಾಡಬೇಕೆನ್ನುವ ಈ ತೀರ್ಮಾನ ಅವೈಜ್ಞಾನಿಕವಾದುದ್ದಾಗಿದೆ. ಸರ್ಕಾರ ಖಾಯಂ ಶಿಕ್ಷಕರ ನೇಮಕಕ್ಕೆ ಮುಂದಾಗುತ್ತಿಲ್ಲ. ಪ್ರತಿ ಶಾಲೆಗೆ ಗುಮಾಸ್ತರು, ಜವಾನರನ್ನು ನೇಮಿಸಿಕೊಳ್ಳಬೇಕೆನ್ನುವ ಶಿಕ್ಷಣ ತಜ್ಞರ ಸಲಹೆಗೆ ರಾಜ್ಯದಲ್ಲಿ ಬೆಲೆ ಇಲ್ಲದಾಗಿದೆ. ಇರುವ ಶಿಕ್ಷಕರ ಬೋಧನೆಯ ಜೊತೆಗೆ ಅನೇಕ ಕಾರ್ಯಗಳನ್ನು ಮಾಡಬೇಕಿದೆ.

ಶಿಕ್ಷಣ ಮಾರಾಟದ ಸರಕಾಗುತ್ತಿದೆ

ರಾಜ್ಯ ವ್ಯಾಪಿ ಶಿಕ್ಷಣ ಮಾರಾಟದ ಸರಕಾಗುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ನಿಯಮ ಉಲ್ಲಂಘಿಸಿ ವಿಪರೀತ ಹಣ ವಸೂಲಿಯಲ್ಲಿ ತೊಡಗಿದ್ದರೂ ಸರ್ಕಾರ ಮೌನದಿಂದ ಸಮ್ಮತಿಸುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ, ಶುಲ್ಕ ನೀತಿಯನ್ನು ನಿಯಂತ್ರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಶಿಕ್ಷಣ

ಶಿಕ್ಷಣ	ಸ.ಕ.ಇ+	ಸ.ಅನುದಾನಿತ ಇಲಾಖೆ	ಅನುದಾನ ಸ್ಥ.ಸಂಸ್ಥೆ	ಇತರೆ ರಹಿತ	ಒಟ್ಟು	
ಕಿರಿಯ ಪ್ರಾಥಮಿಕ ಶಾಲೆಗಳು	23570	180	258	2437	9	23,370
ಹಿರಿಯ ಪ್ರಾಥಮಿಕ ಶಾಲೆಗಳು	22278	460	2345	6844	114	32,041
ಪ್ರೌಢ ಶಾಲೆಗಳು	4168	336	3275	4579	95	12,453
ಒಟ್ಟು	**49.816**	**976**	**5878**	**13860**	**218**	**70,748**

ನಿಯಂತ್ರಣ ಪ್ರಾಧಿಕಾರ (District Education Regulating Authority) ಕಾರ್ಯನಿರ್ವಹಿಸಬೇಕಿತ್ತು. ಆದರೆ ಕೆಲ ಜಿಲ್ಲೆಗಳನ್ನು ಹೊರತುಪಡಿಸಿ ಬೇರೆಲ್ಲೂ ರಚನೆಯಾಗಿಲ್ಲ. ರಚನೆಯಾದರೆ ನಾಮಕಾವಸ್ತೆ ಅಷ್ಟೆ.

ಕರ್ನಾಟಕ ಶಿಕ್ಷಣ ಕಾಯಿದೆ ಪ್ರಕಾರ ಡೋನೇಷನ್ ವಸೂಲಿ ಅಪರಾಧವಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು 600 ರೂ ಅನುದಾನಿತ ಶಿಕ್ಷಣ ಸಂಸ್ಥೆಗಳು 500 ರೂ ಮಾತ್ರ ಅಭಿವೃದ್ಧಿ ಶುಲ್ಕಗಳನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಬೇಕು. ಅರ್ಜಿ ಶುಲ್ಕ ರೂ.26 ಮಾತ್ರ ಇರಬೇಕು. ಆದರೆ ಖಾಸಗೀ ಶಿಕ್ಷಣ ಸಂಸ್ಥೆಗಳು ಅಕ್ರಮವಾಗಿ ಮಿತಿ ಮೀರಿ ವಂತಿಗೆ ಸಂಗ್ರಹಿಸುತ್ತಿವೆ. ಸಾಮಾಜಿಕ ನ್ಯಾಯವನ್ನು ಕಡೆಗಣಿಸಲಾಗುತ್ತಿದೆ. ಜಿಲ್ಲಾಡಳಿತ ಮತ್ತು ಶಿಕ್ಷಣ ಇಲಾಖೆ ಮಾತ್ರ ಕುರುಡಾಗಿ ಕುಳಿತಿದೆ. District Education Regulation Authority ನಿರಂತರವಾಗಿ ಶಿಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣ ಹೇರಲು ಕ್ರಮ ಕೈಗೊಳ್ಳುತ್ತಿಲ್ಲ.

ಡೊನೇಷನ್ ವಸೂಲಿ ಅವ್ಯಾಹತವಾಗಿ ನಡೆಯುತ್ತಿದೆ. ವಿದ್ಯಾರ್ಥಿ-ಪೋಷಕರು ಬಲಿಪಶುಗಳಾಗುತ್ತಿದ್ದಾರೆ. ಮಗು ಹುಟ್ಟುವ ಮೊದಲೇ ಸೀಟು ಕಾಯ್ದಿರಿಸುವ ಪದ್ಧತಿ, ಬೆಂಗಳೂರು, ಮೈಸೂರು ನಗರದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿದೆ. ಮಗುವನ್ನು ಶಾಲೆಗೆ ಸೇರಿಸಲು ತಂದೆ-ತಾಯಿ ಕನಿಷ್ಠ ಪದವೀಧರರಾಗಿರಬೇಕು ಮತ್ತು ಶಾಲೆಯ ಪ್ರವೇಶ ಪರೀಕ್ಷೆಗಳನ್ನು ಬರೆದು ಉತ್ತೀರ್ಣರಾದರೆ ಮಾತ್ರ ಮಗುವಿಗೆ ಪ್ರವೇಶ ಸಿಗುತ್ತದೆ.

ರಾಜ್ಯದ ಕೆಲ ಧಾರ್ಮಿಕ ಮಠಗಳು ನಡೆಸುತ್ತಿರುವ ಶಾಲೆಗಳಿಗೆ ಪ್ರವೇಶ ಪಡೆಯಲು ಬಂಗಾರವನ್ನು ಉಡುಗೊರೆಯಾಗಿ ಕಡ್ಡಾಯವಾಗಿ ನೀಡಬೇಕಿದೆ. ಶಾಲಾ ಶಿಕ್ಷಣದ ವ್ಯಾಪಾರೀಕರಣ ವ್ಯಾಪಕವಾಗಿ ನಡೆಯುತ್ತಿದ್ದರೂ. ರಾಜ್ಯ ಸರ್ಕಾರ ಮಾತ್ರ ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ಬೆಂಬಲವಾಗಿ ನಿಂತಿದೆ.

ಶಿಕ್ಷಣದ ಕೋಮುವಾದೀಕರಣ

ಸರ್ವ ಜನಾಂಗದ ಶಾಂತಿಯ ತೋಟ ಕರ್ನಾಟಕದಲ್ಲಿ ಕೋಮುವಾದದ ಬೆಳವಣಿಗೆ ಹೆಚ್ಚುತ್ತಿದೆ. ಧರ್ಮ-ದೇವರ ಹೆಸರಿನಲ್ಲಿ ವೈದಿಕ ಶಾಲೆ, ಚಾತುರ್ವರ್ಣ ವ್ಯವಸ್ಥೆ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ) ಜನರ ಮೇಲೆ ಹೇರುವ ಪ್ರಯತ್ನವನ್ನು ಅಧಿಕೃತವಾಗಿ ರಾಜ್ಯದ ಬಿಜೆಪಿ ಸರ್ಕಾರವೇ ಮಾಡುತ್ತಿದೆ. ಮೌಢ್ಯತೆ, ಕಂದಾಚಾರವನ್ನು ಬೆಂಬಲಿಸುವ ಕಾರ್ಯಕ್ರಮವನ್ನು ರೂಪಿಸುತ್ತಿದೆ. ಹಿಂದೆ ಸ್ವಾಮಿ ವಿವೇಕಾನಂದರ ಜಯಂತಿಯ ನೆಪ ಮಾಡಿಕೊಂಡು ಭಯೋತ್ಪಾದನಾ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನದ ಹೆಸರಿನಲ್ಲಿ ವಿದ್ಯಾರ್ಥಿಗಳ ಮಧ್ಯೆ ಕೋಮುದ್ವೇಷ



ಹುಟ್ಟುಹಾಕುವಂತಹ ಕಾರ್ಯ ಮಾಡಿತು. ಅಲ್ಪಸಂಖ್ಯಾತರ ವಿರುದ್ಧ ಇಲ್ಲಸಲ್ಲದ ಆರೋಪಗಳ ಮಾಡಲು ಸಂಘ ಪರಿವಾರ (ಎಬಿವಿಪಿ, ಭಜರಂಗದಳ, ಶ್ರೀರಾಮಸೇನೆ, ವಿಹೆಚ್‌ಪಿ) ಸಂಘಟನೆಗಳಿಗೆ ಮುಕ್ತ ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರವೇ ಹಣಕಾಸು ಒದಗಿಸಿತು. ವೈದಿಕಶಾಹಿ ವಿಚಾರಗಳನ್ನು ಪ್ರಚಾರಪಡಿಸುವ ಸಾಹಿತ್ಯವನ್ನು ಪ್ರಕಟಿಸುವ "ರಾಷ್ಟ್ರೋತ್ಥಾನ" ಸಾಹಿತ್ಯದ 350 ಪುಸ್ತಕಗಳನ್ನು 17 ಕೋಟಿ ರೂ. ಖರ್ಚಿನಲ್ಲಿ ರಾಜ್ಯದ ಪ್ರತಿ ಶಾಲೆಗಳಿಗೆ ಸರಬರಾಜು ಮಾಡಲಾಯಿತು. ವೈಜ್ಞಾನಿಕ-ವೈಚಾರಿಕ ಪುಸ್ತಕಗಳ ಬದಲಾಗಿ ಕೋಮುವಾದಿ ಸಾಹಿತ್ಯದ ಪ್ರಚಾರಕ್ಕಾಗಿ ಸರ್ಕಾರ ಮುಂದಾಯಿತು. ಬಿಸಿಯೂಟದ ಜೊತೆ ಪೌಷ್ಠಿಕ ಆಹಾರಕ್ಕಾಗಿ ಮೊಟ್ಟೆ ಕೊಡಬೇಕೆನ್ನುವ ಹೋರಾಟ-ಚರ್ಚೆಯನ್ನು ಸರ್ಕಾರ ಕಡೆಗಣಿಸಿತು. ಶಾಲೆಗಳಲ್ಲಿ ದೈಹಿಕ ಶಿಕ್ಷಣವನ್ನು ಕಡೆಗಣಿಸುತ್ತಿರುವ ಸರ್ಕಾರ ಧ್ಯಾನ-ಯೋಗದ ತರಗತಿ ನಡೆಸಲು ಮುಂದಾಗಿ ಶಾಲೆಗಳನ್ನು ಅಧ್ಯಾತ್ಮಿಕ ಕೇಂದ್ರಗಳನ್ನಾಗಿಸುತ್ತಿದೆ. ವೈಜ್ಞಾನಿಕ - ವೈಚಾರಿಕ ಪಠ್ಯಕ್ರಮ ರೂಪಿಸಲು ಆಸಕ್ತಿ ತೋರುತ್ತಿಲ್ಲ. ಬದಲಾಗಿ ಪಠ್ಯ ಪುಸ್ತಕಗಳ ಪರಿಷ್ಕರಣೆಯ ಹೆಸರಿನಲ್ಲಿ ಕೋಮುವಾದಿ ನೀತಿಗಳನ್ನು ತುರುಕಲು ಮುಂದಾಗುತ್ತಿದೆ.

ಜಾತಿ ವ್ಯವಸ್ಥೆಯನ್ನು ಪ್ರತಿಪಾದಿಸುವ, ಆಸ್ತಿಗಾಗಿ ಸಹೋದರರನ್ನು ಕೊಲ್ಲು ಎಂದು ಭೋಧಿಸುವ, ಅನೇಕ ಅವೈಜ್ಞಾನಿಕ ಅಂಶಗಳಿಂದ ಕೂಡಿರುವ ಧರ್ಮಗ್ರಂಥ ಭಗವದ್ಗೀತೆಯನ್ನು ಶಾಲೆಗಳಲ್ಲಿ ಕಂಠಪಾಠ ಅಭಿಯಾನ ನಡೆಸಲು ಶಿರಸಿಯ ಸ್ವರ್ಣವಲ್ಲಿ ಮಠಕ್ಕೆ 15 ಕೋಟಿ ರೂ ಹಣವನ್ನು ನೀಡಿ ಅವಕಾಶ ಕಲ್ಪಿಸಲಾಗಿದೆ. ಭಾರತದ ಸಂವಿಧಾನದ ಪ್ರಚಾರಕ್ಕೆ ಮುಂದಾಗದ ಸರ್ಕಾರ ವಿದ್ಯಾರ್ಥಿಗಳ ಮಧ್ಯೆ ದಮನ, ದ್ವೇಷದ ಗೋಡೆಗಳನ್ನು ಕಟ್ಟಿ ಶಿಕ್ಷಣದ ಕೇಸರೀಕರಣಕ್ಕೆ ಮುಂದಾಗುತ್ತಿದೆ. ಶಾಲೆಗಳಿಗೆ ಸೌಲಭ್ಯಗಳನ್ನು ಒದಗಿಸಲು ಮುಂದಾಗದ ಸರ್ಕಾರಕ್ಕೆ ಗೀತೆಯ ಬೋಧನೆಯ ಆಸಕ್ತಿಯೇಕೆ? ಎಂದು ಪ್ರಶ್ನಿಸಿ ಹೋರಾಟಕ್ಕಿಳಿದ ಎಸ್ ಎಫ್ ಐ ಮುಖಂಡರನ್ನು ಬಂಧಿಸಿ ಜೈಲಿಗೆ ತಳ್ಳಲಾಯಿತು. ಸಾಲದೆಂಬಂತೆ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯವರು "ಭಗವದ್ಗೀತೆ ವಿರೋಧಿಸುವವರು ವಿದೇಶಕ್ಕೆ ತೊಲಗಲಿ" ಎಂಬ ಅವಿವೇಕಿ ಹೇಳಿಕೆಯನ್ನು ನೀಡಿದ್ದಾರೆ. ಹೀಗೆ ಶಿಕ್ಷಣದ ಕೋಮುವಾದೀಕರಣ ಕೆಲಸವನ್ನು ರಾಜ್ಯ ಸರ್ಕಾರವೇ ಮಾಡುತ್ತಿದೆ. ಸಂವಿಧಾನದ ಆಶಯಗಳಾದ ವೈಜ್ಞಾನಿಕ ಚಿಂತನೆ ಜಾತ್ಯಾತೀತ. ಧರ್ಮ ನಿರಪೇಕ್ಷ ತತ್ವಗಳ ವಿರುದ್ಧವಾಗಿ ಮತಾಂಧ ವಿಚಾರಗಳ ಪ್ರಚಾರವೇ ಸರ್ಕಾರದ ಉದ್ದೇಶವಾಗುತ್ತಿದೆ.

ಬಿಸಿಯೂಟದ ಖಾಸಗೀಕರಣ :

ರಾಜ್ಯದ ಶಾಲಾ ಮಕ್ಕಳಿಗೆ ನೀಡುತ್ತಿರುವ ಬಿಸಿಯೂಟ ವ್ಯವಸ್ಥೆಯನ್ನು ಖಾಸಗೀಕರಿಸಲು ಮುಂದಾಗುತ್ತಿದೆ. ಒಬ್ಬ ವಿದ್ಯಾರ್ಥಿಗೆ ಪ್ರತಿದಿನ ಮಧ್ಯಾಹ್ನದ ಊಟಕ್ಕಾಗಿ ರೂ.4.33 ಗಳನ್ನು ಸರ್ಕಾರ ಖರ್ಚು ಮಾಡುತ್ತಿದ್ದು, ಈ ಮೊತ್ತದಲ್ಲಿ ಪೌಷ್ಠಿಕ ಆಹಾರವನ್ನು ನೀಡಲು ಸಾಧ್ಯವಿಲ್ಲ. ಊಟದ ಜೊತೆಗೆ ಮೊಟ್ಟೆ, ಬಾಳೆಹಣ್ಣು, ಹಾಲು ನೀಡಬೇಕೆನ್ನುವ ಜನರ ಒತ್ತಾಯವನ್ನು ರಾಜ್ಯ ಸರ್ಕಾರ ಪರಿಗಣಿಸಿಲ್ಲ. ಅಪೌಷ್ಠಿಕತೆಯಿಂದ ನರಳುತ್ತಿರುವ ಮಕ್ಕಳ ಭವಿಷ್ಯದ ಕುರಿತು



ಸರ್ಕಾರಕ್ಕೆ ನಿರ್ದಿಷ್ಟ ಯೋಜನೆಗಳಿಲ್ಲ. ಬಿಸಿಯೂಟ ಅಡುಗೆಯವರ ನೇಮಕ ಮತ್ತು ಸೇವಾ ಭದ್ರತೆಯ ಕುರಿತು ಸರ್ಕಾರ ನಿರ್ಲಕ್ಷಿಸುತ್ತಿದೆ. ಅತಿ ಕಡಿಮೆ ಗೌರವಧನ ನೀಡಿ ದುಡಿಸಿಕೊಳ್ಳುತ್ತಿದೆ. ಬಿಸಿಯೂಟ ತಯಾರಿಸಲು ಅಗತ್ಯ ಕೊಠಡಿ, ಪರಿಕರ ಮತ್ತು ಸೌಲಭ್ಯಗಳು ಇಲ್ಲದ ಕಾರಣ ಅನುಪಯುಕ್ತ ವಸ್ತುಗಳು, ಕೀಟಗಳು, (ಜಿರಳೆ, ಹಲ್ಲಿ, ಕಪ್ಪೆ ಇತ್ಯಾದಿ) ಅಡುಗೆ ಸಮಯದಲ್ಲಿ ಅಡುಗೆಯವರ ಕಣ್ತಪ್ಪಿ ಪಾತ್ರೆಗಳಲ್ಲಿ ಬಿದ್ದಿದ್ದರಿಂದ ವಿವಿಧೆಡೆ ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಒಟ್ಟಾರೆ ಗುಣಮಟ್ಟದ ಪೌಷ್ಠಿಕ ಆಹಾರ ಪ್ರತಿಯೊಬ್ಬ ಮಗುವಿಗೂ ನೀಡಬೇಕೆಂದಿರುವ ಸುಪ್ರಿಂ ಕೋರ್ಟ್ ಆದೇಶ ಯಥಾವತ್ತಾಗಿ ಜಾರಿಯಾಗುತ್ತಿಲ್ಲ.

ಭಾಷಾ ಮಾಧ್ಯಮ :

ಇಂದು ಶಿಕ್ಷಣ ಮಾಧ್ಯಮದ ಕುರಿತು ಚರ್ಚೆ ಪ್ರಾರಂಭವಾಗಿದೆ. ಜಾಗತೀಕರಣ ಪ್ರೇರಿತವಾದ ದಂಧೆಗಳು ಈ ರೀತಿಯ ಅನೇಕ ಚರ್ಚೆಗಳನ್ನು ಹುಟ್ಟುಹಾಕುತ್ತಿವೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಲಾಭ ಪಡೆದುಕೊಳ್ಳಲು ಮುಂದಾಗುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು ಬೌದ್ಧಿಕ ಕ್ಷೇತ್ರವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಮುಂದಾಗುತ್ತಿವೆ. ಹೀಗಾಗಿ ಒಂದನೆ ತರಗತಿಯಿಂದಲೆ ಇಂಗ್ಲೀಷ್ ಕಲಿಕೆಯ ಕುರಿತು ಪ್ರಶ್ನೆಗಳ ಹರಿಬಿಡುತ್ತಿದೆ. ರಾಜ್ಯದಲ್ಲಿ ಭಾಷಾ ಮಾಧ್ಯಮದ ಕುರಿತು ಪ್ರೊ. ಬರಗೂರು ರಾಮಚಂದ್ರಪ್ಪ, ಪ್ರೊ. ಚಂದ್ರಶೇಖರ್ ಪಾಟೀಲ್ (ಚಂಪಾ) ರ ಸಮಿತಿಗಳು ಕೂಡ ಸರ್ಕಾರಕ್ಕೆ ವರದಿಯನ್ನು ನೀಡಿವೆ. ಈ ವರದಿಗಳು ಮಾತೃ ಭಾಷೆಯೇ ಶಿಕ್ಷಣದ ಮಾಧ್ಯಮವೆಂದು ಪ್ರತಿಪಾದಿಸಿವೆ. SFI ಬಹು ದಿನಗಳಿಂದಲೆ ಎಲ್ಲಾ ಹಂತಗಳಲ್ಲಿ ಶಿಕ್ಷಣ ಮಾತೃ ಭಾಷೆಯಲ್ಲೇ, ಬೆಳೆದು ಬಂದ ಪರಿಸರದ ಭಾಷೆಯಲ್ಲಿಯೇ ಸಿಗಬೇಕೆಂದು ಹೇಳಿದೆ. ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಮಾತೃ ಭಾಷೆಯಲ್ಲಿಯೇ ನೀಡಬೇಕು. ಆನಂತರದ ಹಂತದಲ್ಲಿ ಮಾತೃ ಭಾಷೆ, ಪ್ರಾದೇಶಿಕ, ರಾಷ್ಟ್ರ ಅಥವಾ ರಾಷ್ಟ್ರ ಮಟ್ಟದ ವ್ಯವಹಾರಗಳಿಗೆ ಸಂಪರ್ಕ ಭಾಷೆಯಲ್ಲಿ ಶಿಕ್ಷಣ ಮಾಧ್ಯಮವಾಗಲಿ ಎಂದು SFI ನ ಸ್ಪಷ್ಟ ನಿಲುವು ಆಗಿದೆ. ಉದಾ: ಅಮೇರಿಕಾ, ಚೀನಾ, ಜಪಾನ್ ಇತರೆ ದೇಶಗಳು ಮಾತೃಭಾಷೆಯಲ್ಲಿ ನೀಡುತ್ತಿವೆ. ನಮ್ಮ ರಾಜ್ಯದಲ್ಲಿ ಆಡಳಿತ, ನ್ಯಾಯಾಂಗ, ವೈದ್ಯಕೀಯ ವಲಯಗಳು ಅನ್ಯ ಭಾಷೆಯಲ್ಲಿ ಇರುವುದರಿಂದ ಅರ್ಥೈಸಿಸಲು ತೊಡಕಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದ ಪ್ರಜ್ಞಾವಂತರು ವಿದ್ಯಾರ್ಥಿ ಸಮುದಾಯ ಸುಮ್ಮನೆ ಕುಳಿತಿಲ್ಲ. ಸ್ಪಷ್ಟ ಪರ್ಯಾಯ ಧೋರಣೆಯೊಂದಿಗೆ ಶಿಕ್ಷಣ ದ್ರೋಹಿ ನೀತಿಗಳ ವಿರುದ್ಧ ಕಾಲಕಾಲಕ್ಕೆ ಪ್ರತಿರೋಧ ತೋರುತ್ತಲೇ ಬರಲಾಗಿದೆ. ಆದರೆ ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ನಂಬಿಕೆಯಿಲ್ಲದ ಬಿಜೆಪಿ ಸರ್ಕಾರ ಸಂಘಪರಿವಾರ ವಿದ್ಯಾರ್ಥಿ ಸಂಘಟನೆಯನ್ನು ಬಳಸಿಕೊಂಡು ವಿದ್ಯಾರ್ಥಿ ಸಮುದಾಯದನ್ನು ದಾರಿತಪ್ಪಿಸುವ ಕುತಂತ್ರ ನಡೆಸುತ್ತಿದೆ. ಈ ಷಡ್ಯಂತ್ರವನ್ನು ವಿಫಲಗೊಳಿಸಿ ಜಾತ್ಯತೀತ, ವೈಜ್ಞಾನಿಕ ಜನಪರ ಶಿಕ್ಷಣ ನೀತಿಗಾಗಿ ಪ್ರಬಲ ಚಳುವಳಿ ರೂಪಿಸುವುದು ತುರ್ತಿನ ಅಗತ್ಯವಾಗಿದೆ.

ತಲೆಯ ಮೇಲೆ, ಬೆನ್ನ ಮೇಲೆ ಭಾರ ಹೊರುವ ಹಮಾಲರು ದಿನೇ ದಿನೇ ಸಂಘಟಿತರಾಗುತ್ತಿದ್ದಾರೆ. ಜಾಗೃತರಾಗುತ್ತಿದ್ದಾರೆ. ಹಮಾಲಿ ಕಾರ್ಮಿಕರ ಕಷ್ಟದ ಬದುಕಿಗೊಂದು ಬೆಳಕು ಮೂಡಿಸುವ ದಿಸೆಯಲ್ಲಿ ಕೊಪ್ಪಳ ಜಿಲ್ಲೆಯ ಪ್ರಮುಖ ವಾಣಿಜ್ಯ ನಗರವಾದ ಗಂಗಾವತಿಯ ಎಪಿಎಂಸಿ ಸಮುದಾಯ ಭವನದಲ್ಲಿ ಅಕ್ಟೋಬರ್-16ರಂದು ಎಪಿಎಂಸಿ ಹಮಾಲಿ ಕಾರ್ಮಿಕರ ಎರಡನೇ ರಾಜ್ಯ ಸಮಾವೇಶವು ಯಶಸ್ವಿಯಾಗಿ ನಡೆಯಿತು. ಒಂದು ವರದಿ.

ಚಳುವಳಿಗೆ ದಿಕ್ಸೂಚಿಯಾದ ರಾಜ್ಯ ಸಮಾವೇಶ

ಕೃಷಿ ಮಾರಾಟ ಮಂಡಳಿ ನಿರ್ದೇಶಕರಾದ ವಿ.ಬಿ. ಪಾಟೀಲ್‌ರವರು ಈ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ ಹಮಾಲಿ ಕಾರ್ಮಿಕರು ಸಂಘಟನಾತ್ಮಕವಾಗಿ ಜಾಗೃತರಾಗುತ್ತಿರುವುದು ಪ್ರಶಂಸನೀಯ. ವಸತಿ, ಆರೋಗ್ಯ ಮುಂತಾದ ಹಮಾಲಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಗಳು ನಡೆದಿವೆ. ಈ ಸಮಾವೇಶದಲ್ಲಿ ತಾವು ತಮ್ಮ ಸಮಸ್ಯೆಗಳ ಕುರಿತು ಚರ್ಚೆ ಮಾಡಿ ಅಂತಿಮಗೊಳಿಸಿದ ಸಮಗ್ರ ಮನವಿ ಆಧಾರದಲ್ಲಿ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯ ಮಟ್ಟದ ಸಭೆ ನಡೆಸಲಾಗುವದೆಂದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಮಾತನಾಡಿ 'ಮುಪ್ಪಿನ ಕಾಲದಲ್ಲಿ ನರಕಸದೃಷ ಬದುಕು ನಡೆಸುವ ಹಮಾಲರಿಗೆ ಪಿಂಚಣಿ ಅತ್ಯಗತ್ಯ ಆದರೆ ಸರಕಾರಗಳು ಅವರ ಬೆವರಿನ ಹಣವನ್ನು ಜೂಜಾಟಕ್ಕೀಡುವ ಮೋಸದ ಪಿಂಚಣಿ ನೀಡಲು ಮುಂದಾಗಿವೆ. ಕಾರ್ಮಿಕರು ಅದನ್ನು ತಿರಸ್ಕರಿಸಿದ್ದಾರೆ. ಅವರಿಗೆ ಗ್ಯಾರಂಟಿಯಾದ ಸಾಮಾಜಿಕ ಭದ್ರತೆ ಒಳಗೊಂಡ ಪಿಂಚಣಿ ಯೋಜನೆ ಜಾರಿಯಾಗಬೇಕೆಂದು' ಆಗ್ರಹಿಸಿದರು.

ಸಮಾವೇಶದ ಯಶಸ್ವಿಗೆ ಕೋರಿ ಕರ್ನಾಟಕ ಸರ್ಕಾರದ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಇಲಾಖೆ ಸಚಿವರು ಕಳುಹಿಸಿದ 'ಸಂದೇಶ' ವನ್ನು ಸಮಾವೇಶದಲ್ಲಿ ಓದಲಾಯಿತು.

ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ. ಜಿ.ಎನ್ ನಾಗರಾಜ್, ಮಾಜಿ ಶಾಸಕ ಜಿ. ವೀರಪ್ಪ, ರಾಜ್ಯ ಸಂಚಾಲಕ ದುರಗಪ್ಪ ಚಿಕ್ಕತುಂಬಳ ಮುಂತಾದವರು ಮಾತನಾಡಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ ಪ್ರಸ್ತಾವಿಕವಾಗಿ ಮಾತನಾಡಿ 'ಹಮಾಲಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಸರಕಾರ ಹಾಗೂ ಎಪಿಎಂಸಿ ಇಲಾಖೆ ಮುಂದಾಗಬೇಕೆಂದರು.' ರಾಜ್ಯಾಧ್ಯಕ್ಷ ಮಹೇಶ ಪತ್ತಾರ ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿಯ ಪರವಾಗಿ ಜಿ. ನಾಗರಾಜ ಸ್ವಾಗತಿಸಿದರು. ಎ. ಹುಲಿಗೆಪ್ಪ ವಂದಿಸಿದರು. ಮುಖಂಡರಾದ ಆರ್.ಕೆ.ದೇಸಾಯಿ, ಆರ್.ಎಲ್.ತಿಮ್ಮಣ್ಣ, ನಿರುಪಾದಿ, ಎಸ್.ಎಸ್.ಹುಲಿಗೆಪ್ಪ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

"ಬೆಳಕು" ಬಿಡುಗಡೆ

ಸಮಾವೇಶದ ಸಂದರ್ಭದಲ್ಲಿ ಹೊರತರಲಾದ "ಬೆಳಕು" ವಿಶೇಷ ಸಂಚಿಕೆಯನ್ನು ಗಂಗಾವತಿ ಎಪಿಎಂಸಿ ಕಾರ್ಯದರ್ಶಿ ಶಾಂತಾರಾಂ ಬಿಡುಗಡೆ ಮಾಡಿದರು.

ಅಭಿನಂದನೆ


ಸಮಾವೇಶದ ಪೂರ್ವದಲ್ಲಿ ಹಮಾಲಿ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿ ಅವರ ಮನೆ-ಮನಸ್ಸು ತಲುಪಿದ ರಾಜ್ಯದ ಹುಬ್ಬಳ್ಳಿ, ಚಿತ್ರದುರ್ಗ, ಬೆಂಗಳೂರು, ಬಳ್ಳಾರಿ ವಿಭಾಗದ ನಾಲ್ಕು ಜಾಗೃತಿ ಜಾಥಾಗಳ ನೇತೃತ್ವ ವಹಿಸಿದ್ದ ಮುಖಂಡರಿಗೆ ಹಾಗೂ ಕೃಷಿ ಮಾರಾಟ ಮಂಡಳಿ ನಿರ್ದೇಶಕರಾದ ವಿ.ಬಿ. ಪಾಟೀಲ್‌ರಿಗೆ ಶಾಲು ಹೊದಿಸಿ ಹೂಗುಚ್ಚ ನೀಡಿ ಗೌರವಿಸಲಾಯಿತು. ಹಮಾಲಿ ಫೆಡರೇಶನ್‌ನ ಕರೆಗೆ ಓಗೊಟ್ಟು ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ ಎಲ್ಲಾ ಹಮಾಲಿ ಕಾರ್ಮಿಕರಿಗೆ ಹಾಗೂ ಗಂಗಾವತಿಯಲ್ಲಿ ಈ ಸಮಾವೇಶವನ್ನು ನಡೆಸಿಕೊಟ್ಟ ಗಂಗಾವತಿಯ ಎಲ್ಲಾ ಹಮಾಲಿ ಕಾರ್ಮಿಕ ಸಂಘಗಳಿಗೆ ಹಾಗೂ ಸ್ವಾಗತ ಸಮಿತಿಯ ಸರ್ವಸದಸ್ಯರಿಗೂ ಹಮಾಲಿ ಫೆಡರೇಶನ್ ಹಾಗೂ ರಾಜ್ಯದ ಹಮಾಲಿ ಕಾರ್ಮಿಕರ ಪರವಾಗಿ ಅಭಿನಂದನೆಗಳನ್ನು ತಿಳಿಸಲಾಯಿತು.


ಉದ್ಘಾಟನ ಸಮಾರಂಭ

ಆಕರ್ಷಕ ಮೆರವಣಿಗೆ

ರಾಜ್ಯದ ಸುಮಾರು 80ಕ್ಕಿಂತ ಹೆಚ್ಚು ಎಪಿಎಂಸಿಗಳಿಂದ ಮಹಿಳೆಯರೂ ಸೇರಿದಂತೆ 2,500ರಷ್ಟು ಹಮಾಲಿ ಕಾರ್ಮಿಕರು ಸಮಾವೇಶದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಗಂಗಾವತಿ ಬಸ್ ನಿಲ್ದಾಣದಿಂದ ಎಪಿಎಂಸಿ ಸಮುದಾಯ ಭವನದವರೆಗೆ ಆಕರ್ಷಕ ಬೃಹತ್ ಮೆರವಣಿಗೆ ನಡೆಸಲಾಯಿತು. ನಂತರ ಸಿಐಟಿಯು ಧ್ವಜಾರೋಹಣ ನೆರವೇರಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿಗಳು ಮಂಡಿಸಿದ ಲಿಖಿತ ವರದಿ ಆಧಾರದಲ್ಲಿ ವಿವಿಧ ಎಪಿಎಂಸಿ ಹಮಾಲಿ ಕಾರ್ಮಿಕಸಂಘಗಳಪರವಾಗಿ ಹಲವಾರು ಮುಖಂಡರು ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಸಮಸ್ಯೆ ನೋವು ಸಂಕಷ್ಟಗಳನ್ನು ಹಂಚಿಕೊಂಡರು. ನಂತರ ಮುಂದಿನ ಹೋರಾಟದ ರೂಪುರೇಷೆಗಳನ್ನು, ನಿರ್ಣಯಗಳನ್ನು ಘೋಷಿಸಲಾಯಿತು.

ಒಟ್ಟಾರೆ ಸಂಘಟನಾ ಜಾಗೃತಿ, ಮುಂದಿನ ಹೋರಾಟಕ್ಕೆ ಸ್ಫೂರ್ತಿ ನೀಡುವಲ್ಲಿ ಹಾಗೂ ರಾಜ್ಯದ ಹಮಾಲಿ ಕಾರ್ಮಿಕರ ಚಳುವಳಿ ಕಟ್ಟುವ ನಿಟ್ಟಿನಲ್ಲಿ ದಿಕ್ಸೂಚಿ ಸಮಾವೇಶ ಇದಾಗಿತ್ತು.


ಶ್ರಮಜೀವಿಗಳ ಸಮಾವೇಶ

-ಮಹೇಶ ಪತ್ತಾರ

ದುಡಿಯುವ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ಹೆಚ್ಚಿದೆ - ಲೀಲಾವತಿ

ದುಡಿಯುವ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ಹೆಚ್ಚಿದೆ. ಇದು ಕೇವಲ ಅಸಂಘಟಿತ ವಲಯದಲ್ಲಿ ಮಾತ್ರವಲ್ಲ ವೈದ್ಯರು, ವಕೀಲರು, ಐ.ಎ.ಎಸ್ ಅಧಿಕಾರಿಗಳೂ, ಸಿನೆಮಾ ತಾರೆಯರು ಈ ಎಲ್ಲರೂ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ ಇದನ್ನು ಮಾನವ ಹಕ್ಕಿನ ಮೇಲಿನ ಪ್ರಹಾರವೆಂದೇ ಪರಿಗಣಿಸಬೇಕಾಗಿದೆ ಹೆಚ್ಚಿನ ಮಹಿಳೆಯರು ಜೀವನ ನಿರ್ವಹಣೆ ಮತ್ತು ಕೌಟುಂಬಿಕ ಕಾರಣಗಳಿಗಾಗಿ ಇದನ್ನು ಮೌನವಾಗಿ ಸಹಿಸುತ್ತಾರೆ ಶೇಕಡಾ 85% ರಷ್ಟು ಮಹಿಳೆಯರು ತಮ್ಮ ದುಡಿತದ ಅವಧಿಯಲ್ಲಿ ಒಂದಲ್ಲ ಒಂದು ರೀತಿಯ ಲೈಂಗಿಕ ಕಿರುಕುಳ ಅನುಭವಿಸಿರುತ್ತಾರೆ, ಎಂದು ಸಿ.ಐ.ಟಿ.ಯು. ರಾಜ್ಯ ಉಪಾಧ್ಯಕ್ಷೆ ಲೀಲಾವತಿ ಯವರು ಹೇಳಿದರು ಅವರು ದಿನಾಂಕ 1 ಅಕ್ಟೋಬರ್ 2011 ರಂದು ಕಾರ್ಮಿಕ ಭವನ ಕುಂದಾಪುರದಲ್ಲಿ ಉಡುಪಿ ಜಿಲ್ಲಾ ದುಡಿಯುವ ಮಹಿಳೆಯರ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಿದ್ದರು.

ದುಡಿಯುವ ಮಹಿಳೆಯರ ಈ ಸಮಾವೇಶ ಇದು ಒಂದು ಪ್ರತ್ಯೇಕ ಸಂಘಟನೆಯಲ್ಲ. ಕಾರ್ಮಿಕರ ಆಂದೋಲನದ ಒಂದು ಭಾಗ. ಇಡಿಯಾಗಿ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯ ಭಾಗವಹಿಸುವಿಕೆಯಿಂದ ಮಾತ್ರವೇ ದುಡಿಯುವ ಮಹಿಳೆಯರನ್ನು ಉನ್ನತ ಸ್ಥಾನಗಳಿಗೆ ಬಡ್ತಿಗೊಳಿಸಲು ಮತ್ತು ಜವಾಬ್ದಾರಿಗಳನ್ನು ವಹಿಸಿಕೊಳ್ಳುವಂತೆ ಉತ್ತೇಜನ ನೀಡಲು ಸಾಧ್ಯ. ಮಹಿಳೆಯರದ್ದೇ ಆದ ಸಮಸ್ಯೆಗಳ ಪರಿಹಾರಕ್ಕೆ ಹೆಚ್ಚಿ ಆದ್ಯತೆ ನೀಡಬೇಕಿದೆ ಎಂದು ಲೀಲಾವತಿ ಅಭಿಪ್ರಾಯ ಪಟ್ಟರು

ಸಿ.ಐ.ಟಿ.ಯು. ಉಡುಪಿ ಜಿಲ್ಲಾ ಕಾರ್ಯದರ್ಶಿ ಪಿ.ವಿಶ್ವನಾಥ ರೈ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಮಹಿಳೆ ಪುರುಷ ಇಬ್ಬರೂ ಶೋಷಿತರೇ ಮಹಿಳೆ ತಾನೇ ಪ್ರತ್ಯೇಕಗೊಂಡು ಗುಂಪು ಆಗುವುದರಿಂದ ಅವರ ಸಮಸ್ಯೆ ಪರಿಹಾರವಾಗುವುದಿಲ್ಲ. ಇದರ ಅಂತಿಮ ಪರಿಣಾಮ ಯಥಾಸ್ಥಿತಿವಾದ ಮುಂದುವರಿಕೆ. ಐಕ್ಯ ಚಳುವಳಿ ಅಗತ್ಯ ಎಂದು ಹೇಳಿದರು.

ಸಿ.ಐ.ಟಿ.ಯು. ಉಡುಪಿ ಜಿಲ್ಲಾಧ್ಯಕ್ಷ ಕೆ. ಶಂಕರ, ಉಪಾಧ್ಯಕ್ಷ ಮಹಾಬಲ ವಡೇರಹೋಬಳಿ, ಎಚ್. ವಿಠಲ ಪೂಜಾರಿ ಉಪಸ್ಥಿತರಿದ್ದರು. ಬಲ್ಕೀಸ್‌ರವರು ಸಮಾವೇಶದ ಅಧ್ಯಕ್ಷತೆ ವಹಿಸಿದರು. ಸುಮಿತ್ರಾ ಸ್ವಾಗತಿಸಿದರು. ಉಡುಪಿ ಜಿಲ್ಲಾ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗೆ 19 ಮಹಿಳಾ ಸದಸ್ಯರನ್ನೊಳಗೊಂಡಂತೆ ಬಲ್ಕೀಸ್‌ರು ಜಿಲ್ಲಾ ಸಂಚಾಲಕರಾಗಿ, ಗಿರಿಜಾ ಕುಂಜಿಬೆಟ್ಟು ಜಿಲ್ಲಾ ಸಹ ಸಂಚಾಲಕರಾಗಿ ಆಯ್ಕೆಗೊಂಡರು.

ವಿದ್ಯುತ್ ಕೊರತೆ – ವಿದ್ಯುತ್ ಖರೀದಿಯ ಸುತ್ತ ಹಲವು ಅನುಮಾನಗಳ ಹುತ್ತ

ಕರ್ನಾಟಕ ರಾಜ್ಯದಲ್ಲಿ ವಿದ್ಯುತ್‌ನ ಗಂಭೀರ ಸಮಸ್ಯೆಯಿಂದಾಗಿ ಜನತೆ ಗಾಢಾಂಧಕಾರ ವಲ್ಲಿರುವಾಗಲೂ ಅವರನ್ನು ವಿದ್ಯುತ್ ಬೆಲೆ ಏರಿಕೆಯ ಅಘಾತ ತಟ್ಟದೇ ಬಿಟ್ಟಿಲ್ಲ.

ರಾಜ್ಯದಲ್ಲಿ ಗೃಹ ಬಳಕೆ ಮತ್ತು ಕೈಗಾರಿಕಾ ಳಕೆಗಳಿಗೆ ಸೇರುವಂತೆ ಯೂನಿಟ್‌ಗೆ ಸು. 40 ಸೆಂಟುವರೆಗೆ ವಿದ್ಯುತ್ ದರವನ್ನು ಏಸಲಾಗಿದೆ. ಕೇಂದ್ರ ಸರ್ಕಾರ ನಿರಂತರವಾಗಿ ಟ್ರೋಲ್ ಬೆಲೆಯನ್ನು ಏರಿಸುವುದನ್ನು ರೋಧಿಸುವುದಾಗಿ ನಾಟಕವಾಡುವ ಬಿಜೆಪಿ ನು ದರ್ಬಾರ್ ನಡೆಸುತ್ತಿರುವ ಕರ್ನಾಟಕದಲ್ಲಿ ರಂತರವಾಗಿ ವಿದ್ಯುತ್ ದರಗಳನ್ನು ರಿಸುತ್ತಲೇ ಬರುತ್ತಿದೆ.

ಆದರೆ ಬಜೆಪಿ ಸರ್ಕಾರದ ಈ ಒಟ್ಟು ದ್ಯುತ್ ಸಂಬಂಧಿ ವ್ಯವಹಾರಗಳೇ ಬಹಳ ಂಶಯಾಸ್ಪದವಾಗಿವೆ.

ಇತ್ತೀಚಿನ ವಿದ್ಯುತ್ ಕೊರತೆಗೆ ಾಯಚೂರು ಶಾಖೋತ್ಪನ್ನ ಘಟಕಕ್ಕೆ ಕಲ್ಲಿದ್ದಲು ೊರತೆಯ ಕಾರಣ ಹೇಳಲಾಯಿತು. ಹಿಂದೆಲ್ಲಾ ಾಯಚೂರು ಘಟಕದಲ್ಲಿ ಯಾವುದೇ ನ್ನಿವೇಶವನ್ನೂ ಎದುರಿಸಲು ಬೇಕಾಗುತ್ತದೆ ಂಬ ಕಾರಣಕ್ಕೆ ಸಾಮಾನ್ಯ ಸಂದರ್ಭದಲ್ಲಿ ಹ 6 ರಿಂದ 7 ಲಕ್ಷ ಮೆಟ್ರಿಕ್ ಟನ್‌ವರೆಗೆ ಲ್ಲಿದ್ದಲನ್ನು ಸಂಗ್ರಹಿಸಲಾಗುತ್ತಿತ್ತು. (2008 ರ ಸೆಂಬರ್ ನಲ್ಲಿ 5.12 ಟನ್, 2009– ನವರಿಯಲ್ಲಿ 5.29 ಲಕ್ಷ ಟನ್ ಸಂಗ್ರಹವಿತ್ತು.) ದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ೕಲೆ 'ಯಾಕೋ–ಏನೋ' ಇಂತಹ ಎಚ್ಚರಿಕೆ ಹಿಸುವ ಕ್ರಮವನ್ನೇ ಹಾದಿ ತಪ್ಪಿಸಲಾಗಿದೆ. ೂನ್,2011 ರಲ್ಲಿ ಅಲ್ಲಿ ಇದ್ದ ಸಂಗ್ರಹ ಕೇವಲ 61 ಲಕ್ಷ ಮೆಟ್ರಿಕ್ ಟನ್. ಹಾಗೂ ಈ ಹಂತದಲ್ಲಿ ಲಂಗಾಣ ಹೋರಾಟ ಇನ್ನೂ ಆಗ ರಂಭವಾಗೇ ಇರಲಿಲ್ಲ.

ಆ ನಂತರ ತೆಲಂಗಾಣ ಹೋರಾಟದ ೂೀಷಣೆಯಾಗಿ ಕ್ಶಾವು ಏರತೊಡಗಿದರೂ ಪ್ರಾಂತದಲ್ಲಿ ಸಿಂಗರೇಣಿ ಗಣಿಯಲ್ಲಿ ಸಿಗುವ ತ್ತಮ ಕಲ್ಲಿದ್ದಲನ್ನು ತರಿಸಿ ಂಗ್ರಹಿಸಿಟ್ಟುಕೊಳ್ಳುವ ಕಡೆ ಸರ್ಕಾರ ುನಸವನ್ನೇ ಕೊಡಲಿಲ್ಲ. ಮತ್ತು ಇತರ ಡೆಗಳಿಂದ ತರಿಸಿಕೊಳ್ಳುವ ಅಷ್ಟೇನು ತ್ತಮವಲ್ಲದ ಕಲ್ಲಿದ್ದಲನ್ನು ತೊಳೆದು ಬಳಸುವ ುವನ್ನು ಇತ್ತೀಚಿನ ದಿನಗಳಲ್ಲಿ ಕೈ ಬಿಟ್ಟು ಾಯಚೂರು ಘಟಕಗಳಲ್ಲಿ ಪದೇ ಪದೇ ಾಂತ್ರಿಕ ಸಮಸ್ಯೆಗಳು ಕಂಡು ಬರುತ್ತಿವೆ. ದೆಲ್ಲವೂ ಕೇವಲ ಆಕಸ್ಮಿಕವಾಗಿ ಆಗಿರುವುದಲ್ಲ. ದ್ಯುತ್ ಅಭಾವವನ್ನು ಸೃಷ್ಟಿಸಿ ಅದರ ನೆಪದಲ್ಲಿ ುಬಾರಿಯಾದ ಖಾಸಗಿ ವಿದ್ಯುತ್ ಅನ್ನು ರೀದಿಸುವುದು ಮತ್ತು ಅದರಲ್ಲಿ ಕಮೀಷನ್ ೂಡೆಯುವುದು ಮತ್ತು ಖಾಸಗಿ ವಿದ್ಯುತ್ ತ್ಪಾದಕ ಬಿಜೆಪಿ ಸಚಿವರ ಸಂಚು ಇದೆ ಂಬ ಪ್ರಬಲವಾದ ಕಟುವಾದ ಟೀಕೆಗಳು ಕೇಳಿ ಂದಿವೆ. ವಿಷಯದ ಬಗೆಗೆ ಏನೂ ತ್ತಿಲ್ಲದವರು ಇಂತಹ ಮಾತನ್ನು ಆಡಿದರೆ ನಿರ್ಲಕ್ಷ್ಯ ಮಾಡಬಹುದು. ಆದರೆ ಹೀಗೆ ಟೀಕೆ ಮಾಡಿರುವವರಲ್ಲಿ ಇದೇ ಘಟಕವನ್ನು ಹಲವಾರು ವರ್ಷ ನಿರ್ವಹಿಸಿದ ನಿವೃತ್ತ ತಂತ್ರಜ್ಞರಿದ್ದಾರೆ. ಹಾಲಿ ಅಧಿಕಾರಿಗಳೂ ಇದ್ದಾರೆ ಎಂಬ ಅಂಶವನ್ನು ಗಮನಿಸಬೇಕು.

ಇದರ ಜೊತೆಗೆ ಬಿಜೆಪಿ ಸರ್ಕಾರದ ಸಚಿವ ಸಂಪುಟದಲ್ಲೇ ತಮ್ಮ ಖಾಸಗಿ ಸಕ್ಕರೆ ಕಾರ್ಖಾನೆಯಲ್ಲಿ ಉತ್ಪಾದಿಸಿದ ವಿದ್ಯುತ್‌ನ್ನು ಸರ್ಕಾರಕ್ಕೆ ಮಾರಿ ಕರ್ನಾಟಕದ ಜನತೆಗೆ ವಿದ್ಯುತ್ ಭಾಗ್ಯವನ್ನು ಕರುಣಿಸಲು ತಯಾರಾಗಿ ನಿಂತ ಸಚಿವ ರತ್ನರೇ ಹಲವರಿದ್ದಾರೆಂಬುದುನ್ನು ಗಮನಕ್ಕೆ ತೆಗೆದುಕೊಂಡರೆ ವಿಷಯದ ಗಹನತೆ



ಅದರ ಆಳ ಅಗಲ ಗೊತ್ತಾಗುತ್ತದೆ.

(ಪ್ರತಿ ಯೂನಿಟ್ ವಿದ್ಯುತ್ ಗೆ 'ಕೇವಲ' 6.5 ರೂ ಬೆಲೆ– ಮಾಲೀಕರ ಬೇಡಿಕೆ)

ಈ ಮಧ್ಯೆ ಮುಖ್ಯಮಂತ್ರಿ ಸದಾನಂದ ಗೌಡ ಹಾಗೂ ಇಂಧನ ಸಚಿವೆ ಶೋಭಕ್ಕನವರ ನಡುವಿನ ತಿಕ್ಕಾಟ, ಒಣ ಪ್ರತಿಷ್ಠೆಗಳ ಪರಿಣಾಮದಿಂದಲೂ ಇಂಧನ ಇಲಾಖೆ ನಲುಗುತ್ತಿದೆ ಎಂದೂ ಹೇಳಲಾಗುತ್ತಿದೆ. ಈ ಬಿಜೆಪಿ ಸರ್ಕಾರ ನಡೆಯುತ್ತಿರುವ ರೀತಿಯನ್ನು ನೋಡಿ, ನೋಡಿ ನಾವು ಅದು ಹಾಗಲ್ಲ ಅನ್ನಲು ಸಾಧ್ಯವೇ ? ಇಲ್ಲವೇ ಇಲ್ಲ.

★

ಲೋಕಾಯುಕ್ತ ವರದಿ ಒಪ್ಪಿಕೊಳ್ಳದ ಸರ್ಕಾರದ ಕುಂಟು ನೆಪಗಳು .

ರಾಜ್ಯದ ಅಕ್ರಮ ಗಣಿ ಲೂಟಿಯ ಕುರಿತು ನ್ಯಾ. ಸಂತೋಷ ಹೆಗಡೆಯವರು ಅಂತಿಮ ವರದಿ ಸಲ್ಲಿಸಿ ಯಾವ ಕಾಲವಾಯಿತು. ಇದರ ಆಧಾರದಲ್ಲಿ ಸರ್ಕಾರ ಇನ್ನೂ ಕ್ರಮ ಕೈಗೊಳ್ಳುವುದರಲ್ಲೇ ಇದೆ. ವರದಿಯನ್ನು ಒಪ್ಪಿಕೊಳ್ಳಿ ಇಲ್ಲ ತಾಕತ್ತಿದ್ದರೆ ತಿರಸ್ಕರಿಸಿ ಅಂತ ಮಾಜಿ ಲೋಕಾಯುಕ್ತರೇ ಸವಾಲು ಹಾಕಿದರು. ಇವರೆಡನ್ನೂ ಮಾಡದ ರಾಜ್ಯ ಬಿಜೆಪಿ ಸರ್ಕಾರ ಎಷ್ಟು ಸಾಧ್ಯವೋ ಅಷ್ಟೂ ಕಾಲ ತಳ್ಳುವ ತಂತ್ರದ ಭಾಗವಾಗಿ ವರದಿಯ ಕುರಿತು ಕೆಲವು ತಾಂತ್ರಿಕ ಪ್ರಶ್ನೆಗಳನ್ನೆತ್ತಿ ಸ್ಪಷ್ಟನೆ ಕೋರಿದೆ.

'ಸಚಿವರನ್ನು ವರದಿಯಲ್ಲಿ ಸಾರ್ವಜನಿಕ ನೌಕರರು ಎಂದಿದೆ ಅದು ಸೂಕ್ತವೇ?' ಎಂಬುದು ಇಂತಹ ಘನಾಂಧಾರಿ ಪ್ರಶ್ನೆಗಳಲ್ಲಿ ಒಂದು. 'ಲೋಕಾಯುಕ್ತರು ತಮ್ಮ ವರದಿಯಲ್ಲಿ ಸಚಿವರ ಪದಚ್ಯುತಿಗೆ ಶಿಫಾರಸ್ಸು ಮಾಡಿದ್ದಾರೆ. ಅವರು ಶಾಸಕರಾಗಿ ಉಳಿಯಬಹುದೇ ? ಇಲ್ಲವೇ ?'... ಇದು ಮತ್ತೊಂದು.


ಆ ನಂತರ ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಧೀಶರು, ಶಾಸನಬದ್ಧ ಲೋಕಾಯುಕ್ತ ಸ್ಥಾನದಲ್ಲಿದ್ದವರು ಕೊಟ್ಟ ವರದಿಯನ್ನು ಏನು ಮಾಡಬೇಕು ಅಂತ ಪರಿಶೀಲಿಸಿ ವರದಿ ಕೊಡುವುದಕ್ಕೆ ರಾಜ್ಯದ ಮುಖ್ಯಕಾರ್ಯದರ್ಶಿಯ ನೇಮಕ...ಇದು ಬಿಜೆಪಿ ಸರ್ಕಾರ ಭ್ರಷ್ಟಾಚಾರದ ವಿರುದ್ಧ ವಹಿಸುವ ಕ್ರಮ. ನಡೆಸುವ ಹೋರಾಟ.

★

ಜೈಲಿನಿಂದ ರಾಜಕೀಯ

'ಭ್ರಷ್ಟಾಚಾರದ ವಿರುದ್ಧ'ದ ಲಾಲ್ ಕೃಷ್ಣ ಅಡ್ವಾಣಿರವರ ರಥಯಾತ್ರೆ ಬೆಂಗಳೂರಿಗೆ ಬಂದು ಕರಾವಳಿ ಮೂಲಕ ಗೋವಾಗೆ ಹೋಗಿ ಆಯ್ತು. ಬಿಜೆಪಿಗರ ಭ್ರಷ್ಟಾಚಾರನ್ನೂ ನಾನು ಸಹಿಸುವುದಿಲ್ಲ ಅಂತ ಅಡ್ವಾಣಿ ಘೋಷಿಸಿದ್ದು ಆಯ್ತು. ಯಾರು ಎಷ್ಟೇ ಕೇಳಿದರೂ ಅಡ್ವಾಣಿಯವರು ಬಿಜೆಪಿಯ ಭ್ರಷ್ಟರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ ಅಂತ ಖಚಿತವಾಗಿ ಹೇಳಲೇ ಇಲ್ಲ. ಇಲ್ಲ ಮುಂದೆ ಏನು ಕ್ರಮ ಕೈಗೊಳ್ಳುತ್ತೇನೆ ಅಂತಲೂ ಹೇಳಲಿಲ್ಲ. ಆದರೂ ಅವರು ಗಂಟಲು ಹರಿದುಕೊಳ್ಳುವುದು ನಿಲ್ಲಿಸಿಲ್ಲ. ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ರಾಜಿನಾಮೆ ತೆಗೆದುಕೊಂಡು ಬಿಟ್ಟರೆ ಅಷ್ಟು ಸಾಕಾ? ಯಡಿಯೂರಪ್ಪ ಜೈಲಿಗೆ ಹೋಗಿರುವುದು ಜಮೀನು ಡೀನೋಫಿಕೇಶನ್ ಅಕ್ರಮದ ಸಂಬಂಧ. ಗಣಿ ಲೂಟಿಯ ಬೃಹತ್ ಭ್ರಷ್ಟಕಾಂಡವಾಗಿರುವ ಬಳ್ಳಾರಿ ಗಣಿ ಅದಿರು ಲೂಟಿಯ ಪ್ರಕರಣದಲ್ಲಿ ಲೋಕಾಯುಕ್ತ ವರದಿಯನ್ನು ಒಪ್ಪಿಕೊಂಡು ರಾಜ್ಯ ಬಿಜೆಪಿ ಸರ್ಕಾರ ಕ್ರಮ ವಹಿಸಲಿ ಅಂತ ಯಾಕೆ ಅಡ್ವಾಣಿಯವರು ಆಗ್ರಹಿಸಲಿಲ್ಲ.

ಅಡ್ವಾಣಿಯವರ ಬೆಂಗಳೂರು ರ್‍ಯಾಲಿಗೆ ಶೋಭಾ, ಸೋಮಣ್ಣ, ಉದಾಸಿ, ಕತ್ತಿ ಮುಂತಾಗಿ ಯಡಿಯೂರಪ್ಪ ಬಣದ ಯಾರೂ ಬಂದು ಭಾಗವಹಿಸಿಲ್ಲ. ಇದರ ಅರ್ಥವೇನು ? ಯಡಿಯೂರಪ್ಪ ಜೈಲಿನೊಳಗಿಂದಲೇ ರಾಜಕಾರಣ ಮಾಡುತ್ತೇನೆ ಅಂತ ಘೋಷಿಸಿ



ಆರ್.ರಾಮಕೃಷ್ಣ

ಬಿಜೆಪಿ ದರ್ಬಾ...

ಹಾಗೇ ಮಾಡುತ್ತಿದ್ದಾರಲ್ಲವೇ ?

★

ಹಾಲಿ ಬಿಜೆಪಿ ಸರ್ಕಾರದ ಹಲವು ವಿಶೇಷಗಳು ಸ್ವಾರಸ್ಯಗಳು

- ಅಕ್ಟೋಬರ್ ಎರಡನೇ ವಾರದಲ್ಲಿ ಗದಗ್‌ನಲ್ಲಿ ಒಂದು ಸಾಮೂಹಿಕ ವಿವಾಹ ಸಮಾರಂಭ ನಡೆಯಿತು. ಮದುವೆಯಾದ 750 ಜೋಡಿಗಳಲ್ಲಿ 98 ಜೋಡಿಗಳ ವಿವಾಹ ಬಾಲ್ಯ ವಿವಾಹ. ಬಿಜೆಪಿ ಸಚಿವ ಸಂಪುಟದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಸಮ್ಮುಖದಲ್ಲಿ ಈ ಮದುವೆಗಳು ನಡೆದಿವೆ.
- ಭೂಮಿಯ ಅಕ್ರಮ ಡೀ ನೋಟಿಫಿಕೇಷನ್ ಪ್ರಕರಣದ ಸಂಬಂಧ ರಾಜ್ಯದ ಲೋಕಾಯುಕ್ತ ಪೋಲಿಸರು ಸಚಿವ ಆರ್. ಅಶೋಕ್‌ರವರು ಮೇಲ ಮೊಕದ್ದಮೆ ದಾಖಲು ಮಾಡಬೇಕಿದೆ. ಇಲ್ಲಿ ಪರಿಸ್ಥಿತಿಯ ವ್ಯಂಗ್ಯ ನೋಡಿ. ಲೋಕಾಯುಕ್ತ ಪೋಲಿಸರು ತಮ್ಮ ಇಲಾಖೆಯ ಮುಖ್ಯಸ್ಥರಾದ–ತಮ್ಮದೇ ಇಲಾಖೆಯ ಸಚಿವರಾಗಿರುವವರ ವಿರುದ್ಧ ಮೊಕದ್ದಮೆ ಹೂಡಬೇಕಾಗಿದೆ. ತನಿಖೆ ಮಾಡಬೇಕಿದೆ.
- ಹಿಂದೆ ಬಿಜೆಪಿ ಸರ್ಕಾರದಲ್ಲಿ ಒಬ್ಬ ಅಲ್ಪ ಸಂಖ್ಯಾತ ಮುಸ್ಲಿಂ ಸಚಿವರಿದ್ದರು. ಮಮ್ತಾಜ್ ಆಲಿಖಾನ್ ಅಂತ ಹೆಸರು. ಸಾಮಾನ್ಯರಲ್ಲಿ 'ವಾಚಕರ ವಾಣಿ'ಗೆ ಆರೆಸ್ಸೆಸ್, ಭಜರಂಗದಳ ಪರವಾದ ಪತ್ರ ಬರೆದೂ ಬರೆದೂ ಬಿಜೆಪಿ ಸರ್ಕಾರದಲ್ಲಿ ಹೇಗೋ ಒಂದು ಸಚಿವ ಸ್ಥಾನ ಲಪಟಾಯಿಸಿದ್ದ ಆಸಾಮಿ ಇವರು. ಅವರೀಗ ಮಂತ್ರಿ ಪದವಿ ಕಳೆದು ಕೊಂಡಿದ್ದಾರೆ. ಬಿಡುವಾಗಿಯೂ ಇದ್ದಾರೆ. ಮತ್ತೆ ತಮ್ಮ ಹಳೇ ಚಾಳಿ ಶುರು ಮಾಡಿದ್ದಾರೆ.

ಈ ಸಾರಿ ಅವರು ಪತ್ರ ಬರೆದಿರುವುದು "ಸಂಕಟ ನೋಡಿ ಸಂತಸ ಪಡೆಯುವುದು ಅಧರ್ಮ" ಅಂತ. ಅಂದರೆ ಯಡಿಯೂರಪ್ಪ, ಕೃಷ್ಣಯ್ಯ ಶೆಟ್ಟಿ, ಕಟ್ಟಾ ಮುಂತಾದವರೆಲ್ಲಾ ಜೈಲಿನಲ್ಲಿರುವುದನ್ನು ನೋಡಿ ಯಾರೂ ಸಂತೋಷ ಪಡಬೇಡಿ ಅಂತ ಅನ್ನುತ್ತಿದ್ದಾರೆ. "ದೇವರು ಸಂಕಟದಲ್ಲಿರುವವರನ್ನು ಅನುಗ್ರಹಿಸಿ ನಿಮ್ಮನ್ನು ಸಂಕಟದಲ್ಲಿ ಸಿಕ್ಕಿಸಬಹುದು..." ಅಂತ ತಮ್ಮ ಭಯಂಕರ ಪತ್ರದಲ್ಲಿ [illegible] ಬೆದರಿಸಿದ್ದಾರೆ. ಪತ್ರದಲ್ಲಿ ದೇವರು. [illegible] ಎಲ್ಲರ ಹೆಸರನ್ನು [illegible]

ಮುಂದೆ ಮತ್ತಷ್ಟು [illegible] ಜೈಲು [illegible] [illegible]

ವಿನಾಶಕಾರಿ ಗುಜರಾತ್ ಮಾದರಿ!

ಪುಟ 5 ರಿಂದ

ಪ್ರಕಾಶವನ್ನೇ ಆಡಿಸುತ್ತಿವೆ. ಇಂತಹ ಸಮಯದಲ್ಲಿ ಕೇಂದ್ರ ಸರ್ಕಾರ ಆಹಾರ ಪಡಿತರ ವ್ಯವಸ್ಥೆಯನ್ನೇ ಕಿತ್ತುಹಾಕಲು ಪ್ರಯತ್ನಿಸುತ್ತಿದೆ. ಬಡವರ ಸಂಖ್ಯೆಯನ್ನು ಕೃತಕವಾಗಿ ಇಳಿಸಲು, ಬಡವರಿಗೆ ಬಿಪಿಎಲ್ ಕಾರ್ಡ್ ವಂಚನೆ ಮಾಡಲು ಪ್ರಯತ್ನಿಸುತ್ತಿದೆ. ಆಹಾರ ಧಾನ್ಯಗಳಿಗೆ ಬದಲಾಗಿ ಹಣ ನೀಡುವ ಯೋಜನೆಯ ಮೂಲಕ ಇಡೀ ಆಹಾರದ ಮಾರುಕಟ್ಟೆಯನ್ನು ಖಾಸಗಿಯವರ ಕೈಗೆ ಮಾತ್ರವಲ್ಲ ಬೃಹತ್ ತಿಮಿಂಗಿಲಗಳ ಬಾಯಿಗೆ ಹಾಕುತ್ತಿದೆ.

ಕರ್ನಾಟಕದಲ್ಲಿ ಸುತ್ತೆಲ್ಲ ರಾಜ್ಯಗಳಿಗಿಂತ ಅತಿ ಕಡಿಮೆ ಆಹಾರ ಧಾನ್ಯಗಳನ್ನು ಹೆಚ್ಚಿನ ಬೆಲೆಯಲ್ಲಿ ಪಡೆಯುತ್ತಿದ್ದಾರೆ. ಬಿಜೆಪಿ ಸರ್ಕಾರ ಚುನಾವಣೆ ಸಂದರ್ಭದಲ್ಲಿ ಕೊಟ್ಟ ಎಲ್ಲ ಆಶ್ವಾಸನೆಗಳನ್ನು ಗಾಳಿಗೆ ತೂರಿದೆ ಮತ್ತು ಪಡಿತರ ವ್ಯವಸ್ಥೆಯನ್ನು ಪೂರ್ಣವಾಗಿ ತಾತ್ಕಾಲಿಕ ಚೀಟಿಗಳ ಗೊಂದಲದಲ್ಲಿ ಸಿಲುಕಿಸಿದೆ. ಹೀಗೆ ಕೂಲಿಕಾರರಿಗೆ ಕೆಲಸದಲ್ಲಿ ಕಡಿತ, ಕೂಲಿಯಲ್ಲಿ ಇಳಿತ, ಆಹಾರದ ಬೆಲೆಯೇರಿಕೆ, ಪಡಿತರ ಕಡಿತ ಜೊತೆಗೆ ಉದ್ಯೋಗ ಖಾತರಿ ಯೋಜನೆಯಲ್ಲಿ ಉದ್ಯೋಗದಲ್ಲಿ ವಂಚನೆ ಇದೇ ಮುಂದಿನ ಭವಿಷ್ಯ ಎಂಬಂತಾಗಿದೆ. ಈ ಸಂಕಟದ ಬದುಕು ಕೃಷಿ ಕೂಲಿಕಾರರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಇರುವ ದಲಿತರು, ಉಳಿದವರಲ್ಲಿ ಕೂಡ ಹೆಚ್ಚಾಗಿರುವ ತೀರಾ ಹಿಂದುಳಿದ ಜಾತಿಗಳ ಜನತೆಯ ಮೇಲೆ ಬೀಳುತ್ತಿದೆ. ಇದರ ಜೊತೆಗೆ ಶೇ. 60 ಕ್ಕಿಂತ ಹೆಚ್ಚು ಕೃಷಿ ಕೂಲಿಕಾರರು ಮಹಿಳೆಯರು ಎಂಬುದನ್ನು ಗಮನಿಸಬೇಕು.

ಇಂತಹ ಸಂದರ್ಭದಲ್ಲಿ ಹೆಚ್ಚಿದ ಸ್ಪರ್ಧೆ ಹಾಗೂ ಬಡತನದ ಬಿಕ್ಕಟ್ಟುಗಳು ಕೂಲಿಗಾಗಿ, ಕೆಲಸಕ್ಕಾಗಿ ಘರ್ಷಣೆಯನ್ನು ತರುತ್ತವೆ. ಈ ಘರ್ಷಣೆಯನ್ನು ದಲಿತರ ಮೇಲಿನ ದೌರ್ಜನ್ಯಗಳಾಗಿ, ದಲಿತರ-ಹಿಂದುಳಿದವರ, ಅಲ್ಪಸಂಖ್ಯಾತರ ನಡುವಿನ ಘರ್ಷಣೆಗಳನ್ನಾಗಿ ಪರಿವರ್ತಿಸಲು ಪಟ್ಟಭದ್ರ ಹಿತಗಳು ಪ್ರಯತ್ನಿಸುತ್ತಿವೆ. ಆದ್ದರಿಂದ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ.

ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಗಳು

ಇಂದಿನ ಕೃಷಿಯ ಬಿಕ್ಕಟ್ಟಿಗೆ, ರೈತ, ಕೂಲಿಕಾರರ ಬದುಕಿನ ಸಮಸ್ಯೆಗಳಿಗೆ 1975ರಿಂದ 2010ರವರೆಗೆ ಕರ್ನಾಟಕದ 35,053 ರೈತರ ಆತ್ಮಹತ್ಯೆಗಳಿಗೆ ಸ್ವಾತಂತ್ರ್ಯ ನಂತರದ ಭೂಸುಧಾರಣೆಯನ್ನು ವಿಳಂಬ ಮಾಡಿ ಕೊನೆಗೆ ಅತ್ಯಂತ ಅಸಮರ್ಪಕ ರೀತಿಯಲ್ಲಿ ಜಾರಿಗೆ ತಂದದ್ದು, ರೈತರ, ಕೂಲಿಕಾರರ ಬದುಕು ಲಾಭಕೋರ ದೊಡ್ಡ ಬಂಡವಾಳಶಾಹಿಗಳ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಸಿಗುವಂತೆ "ಹಸಿರು ಕ್ರಾಂತಿ"ಯ ಜಾರಿ ಒಂದು ಪ್ರಮುಖ ಕಾರಣ.

ಆದರೆ 1991ರಿಂದ ಜಾರಿಗೆ ತಂದ ಜಾಗತೀಕರಣ, ಖಾಸಗೀಕರಣ ನೀತಿಗಳು ಪ್ರಧಾನ ಕಾರಣ. ಕೇಂದ್ರದಲ್ಲಿ 1991ರಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಜಾಗತೀಕರಣ ನೀತಿಗಳನ್ನು ಜಾರಿಗೆ ತಂದರೆ, ಬಿಜೆಪಿ ತನ್ನ ನೀತಿಗಳನ್ನು ಕಾಂಗ್ರೆಸ್ ಕಾಪಿ ಮಾಡಿದೆ ಅವು ನನ್ನ ನೀತಿಗಳು ಎಂದು ಸಂಸತ್ತಿನಲ್ಲಿ, ಅಮೇರಿಕಾದಲ್ಲಿ ಬೊಬ್ಬೆ ಹೊಡೆಯಿತು. ನಂತರ 1998ರಲ್ಲಿ ಅಧಿಕಾರಕ್ಕೆ ಬಂದಾಗ ಕಾಂಗ್ರೆಸ್ ಮೇಲೆ ಸ್ಪರ್ಧೆಗೆ ಬಿದ್ದಂತೆ ಜಾಗತೀಕರಣವನ್ನು ಮತ್ತಷ್ಟು ರಭಸಗೊಳಿಸಿತು. ಒಟ್ಟಿನಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕೃಷಿಯ ಉತ್ಪನ್ನಗಳನ್ನು ವಿಶ್ವದ ಎಲ್ಲೆಡೆಯಿಂದಲೂ ಭಾರತಕ್ಕೆ ಬರಲು ಇದ್ದ ರಕ್ಷಣೆಗಳನ್ನೆಲ್ಲಾ ತೊಡೆದುಹಾಕಿದವು. ಹಾಗೆಯೇ ದೊಡ್ಡ ಬಂಡವಾಳ ಆಧಾರಿತ ರಫ್ತು ಗುರಿಯಾಗುಳ್ಳ ಕೃಷಿಗೆ ಒತ್ತು ನೀಡಲಾರಂಭಿಸಿದವು.

2004ರಲ್ಲಿ ಅಧಿಕಾರಕ್ಕೆ ಬಂದ ಯುಪಿಎ ಸರ್ಕಾರ ಅಮೇರಿಕಾದ ಜೊತೆ ರಣನೀತಿಯ ಒಪ್ಪಂದ ಮಾಡಿಕೊಂಡ ಹಿನ್ನೆಲೆಯಲ್ಲಿ ಕೃಷಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶಕ್ಕೆ ಅಮೇರಿಕ ನಿರಂತರ ಒತ್ತಡ ಹಾಕುತ್ತಿದೆ. ಕೃಷಿ ಜ್ಞಾನ ಒಪ್ಪಂದವೊಂದನ್ನು ಮಾಡಿಕೊಂಡು ಹಸಿರು ಕ್ರಾಂತಿಯ ಎರಡನೇ ಆವೃತ್ತಿಯನ್ನು ಉದ್ಘಾಟಿಸಬೇಕೆನ್ನುವ ಮಾತನ್ನಾಡುತ್ತಿದ್ದಾರೆ. ಜೈವಿಕ ತಂತ್ರಜ್ಞಾನವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಬೃಹತ್ ಕೃಷಿ ಕೈಗಾರಿಕಾ ಉದ್ಯಮಗಳನ್ನು ಸಾವಿರಾರು ಎಕರೆಗಳ ಬೃಹತ್ ಕೃಷಿ ಫಾರಂಗಳನ್ನು ಸ್ಥಾಪಿಸುವ ಭಾರತದ 120 ಕೋಟಿ ಜನರ ಬೃಹತ್ ಮಾರುಕಟ್ಟೆಯಿಂದ ಬೃಹತ್ ಲಾಭ ಪಡೆಯುವ ಕನಸು ಕಾಣುತ್ತಿದ್ದಾರೆ. ಇದರ ಭಾಗವಾಗಿ ಭಾರತದಲ್ಲಿ ಈ 50 ವರ್ಷಗಳಲ್ಲಿ ಸ್ಥಾಪಿಸಲಾಗಿರುವ ವಿಸ್ತಾರವಾದ ಕೃಷಿ ಸಂಶೋಧನಾ ವ್ಯವಸ್ಥೆಯ ಮೇಲೆ ಹಿಡಿತ ಸ್ಥಾಪಿಸಲು, ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದೆ. ಕಂಟ್ರಾಕ್ಟ್ ಕೃಷಿ, ಕೃಷಿ ಸಂಸ್ಕರಣ ಜಾಲ, ಜೈವಿಕ ತಂತ್ರಜ್ಞಾನದ ಹೊಸ ತಳಿಗಳ ಉಪಯೋಗಕ್ಕೆ ಹಾತೊರೆಯುತ್ತಿದ್ದಾರೆ. ಮಾನ್ಸಾಂಟೊ, ಕಾರ್ಗಿಲ್ ಮೊದಲಾದ ಬೃಹತ್ ಕಂಪನಿಗಳು ಇದಕ್ಕೆ ಸಂಬಂಧಿಸಿದ ಜಂಟಿ ಮಂಡಳಿ ಸಭೆಗಳಲ್ಲಿ ಸ್ಥಾನದ ಪಡೆದಿದ್ದಾರೆ.

ಇವುಗಳ ಜೊತೆಗೆ ಚಿಲ್ಲರೆ ವ್ಯಾಪಾರದಲ್ಲಿ ಕೂಡ ಲಕ್ಷಾಂತರ ಕೋಟಿ ರೂಪಾಯಿಗಳ ವ್ಯಾಪಾರ ಮಾಡುವ ಬೃಹತ್ ಕಂಪನಿಗಳಿಗೆ ಭಾರತದಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ಪ್ರವೇಶ ನೀಡಬೇಕೆಂದು ಅಮೇರಿಕಾ ಒತ್ತಡ ಹಾಕುತ್ತಿದೆ. ಇದರಿಂದ ಲಕ್ಷಾಂತರ ಚಿಲ್ಲರೆ ವ್ಯಾಪಾರಗಾರರು ನಿರುದ್ಯೋಗಿಗಳಾಗುವುದರ ಜೊತೆಗೆ, ಇಡೀ ಕೃಷಿ ಫಸಲಿನ ಕೊಳ್ಳುವಿಕೆ ಈ ಬೃಹತ್ ಕಂಪನಿಗಳ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತದೆ. ಅವರು ಕೊಟ್ಟ ಬೆಲೆಯನ್ನು ರೈತರು ತೆಗೆದುಕೊಳ್ಳಲೇಬೇಕಾದ ಸ್ಥಿತಿಗೆ ತಲುಪುತ್ತಾರೆ. ಕಂಟ್ರಾಕ್ಟ್ ಕೃಷಿ, ಕೃಷಿ ಸಂಸ್ಕರಣ ಜಾಲ ಮತ್ತು ಚಿಲ್ಲರೆ ವ್ಯಾಪಾರದ ಬೃಹತ್ ಕಂಪನಿಗಳು ಸೇರಿದರೆ ರೈತರ ಜುಟ್ಟುಪೂರ್ಣವಾಗಿ ಈ ಬೃಹತ್ ಕಂಪನಿಗಳ ಕೈಯಲ್ಲಿ ಎಂಬಂತಾಗುತ್ತದೆ. ಇಂತಹ ಪರಿಸ್ಥಿತಿಯನ್ನು ದಕ್ಷಿಣ ಅಮೇರಿಕಾದ ಅನೇಕ ದೇಶಗಳ ರೈತರು ಅನುಭವಿಸಿ ಅದರ ವಿರುದ್ಧ ಬಂಡೆದ್ದಿದ್ದಾರೆ ಹಾಗೂ ಆಫ್ರಿಕಾದ ರೈತರು ಅತೀವ ಸಂಕಷ್ಟ ಮತ್ತು ಹಸಿವಿನ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಗಮನಿಸಬೇಕು ಮತ್ತು ಈ ದೇಶಗಳ ಅನುಭವದಿಂದ ಪಾಠ ಕಲಿಯಬೇಕು.

ಮುಕ್ತ ವ್ಯಾಪಾರ ಒಪ್ಪಂದ:

ಇಂದು ಯುಪಿಎ ಸರ್ಕಾರ 30 ದೇಶ... ಹೆಚ್ಚು ದೇಶಗಳ ಜೊತೆ ಮುಕ್ತ ವ್ಯಾಪಾ... ಒಪ್ಪಂದಗಳನ್ನು ಮಾಡಿಕೊಳ್ಳಲು ಮಾತು... ನಡೆಸುತ್ತಿದೆ. ಈಗಾಗಲೇ 'ಏಸಿಯಾನ್'ನ ... ದೇಶಗಳು ಶ್ರೀಲಂಕಾ ಮೊದಲಾ... ದೇಶಗಳೊಡನೆ ಜಪಾನ್‌ನೊಡನೆ, ಒಪ್ಪಂ... ಮಾಡಿಕೊಂಡಿದೆ. ಯೂರೋಪಿನ ಜೊ... ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನ ಜೊತೆ ಮಾತುಕ... ನಡೆಯುತ್ತಿದೆ. ಇದರಿಂದ ಈ ಎಲ್ಲ ದೇಶಗ... ಕೃಷಿ ಉತ್ಪನ್ನಗಳು ಭಾರತಕ್ಕೆ ಅಡೆತಡೆಯಿಲ್ಲ... ತೆರಿಗೆಗಳಿಲ್ಲದೆ ಪ್ರವೇಶ ಮಾಡುತ್ತವೆ. ಇದು... ಭಾರತದ ಸಾಂಬಾರ ಪದಾರ್ಥ, ಅಡಿಕೆ, ರಬ್ಬರ... ಎಣ್ಣೆಬೀಜ, ಬೇಳೆಕಾಳುಗಳ ಬೆಳೆಗಾರರ ಮೇ... ಪ್ರಭಾವ ಬಿದ್ದಿದೆ. ಇದು ಹಾಲು ಉತ್ಪಾದಕ... ಹಣ್ಣು, ತರಕಾರಿ ಉತ್ಪಾದಕರ ಮೇಲೆ, ಅ... ಗೋಧಿ ಮೊದಲಾದ ಅನೇಕ ಬೆಳೆಗಾರರ ಮೇ... ಪ್ರಭಾವ ಬೀರಲಿದೆ. ಅಂತರಾಷ್ಟ್ರೀ... ಮಾರುಕಟ್ಟೆಯ ಏರುಪೇರಿನ ಜೊತೆಗೆ ಭಾರತ... ರೈತರ ಬದುಕು ಸಿಲುಕಿಕೊಳ್ಳಲಿದೆ.

ಕೃಷಿಗೆ ಬೆಂಬಲ:

ಇಂತಹ ಸಂದರ್ಭದಲ್ಲಿ ರೈತನ ಭೂ... ಪರರ ಕೈ ಸೇರದಿರಲು ಭೂಸುಧಾರಣಾ ಕಾನೂನಿನ 79ಎ, ಬಿ, 109ರ ಕಲಮುಗಳಿ... ತರಲಿರುವ ತಿದ್ದುಪಡಿಯನ್ನು ವಿರೋಧಿಸಿ ಇದು... ಲಭ್ಯವಿರುವ ರಕ್ಷಣೆಯನ್ನು ಉಳಿಸಿಕೊಳ್ಳಬೇಕ... ಮಾತ್ರವಲ್ಲ, ಕೃಷಿಯನ್ನು ಕೃಷಿಕನನ್ನು ಬೆಂಬಲಿಸುವ ನೀತಿಗಳ, ಕ್ರಮಗಳ ಮೂಲ... ಆಹಾರಧಾನ್ಯಗಳ ಉತ್ಪಾದನೆಯನ್ನು, ಕೃಷಿಯನ್ನು ಹಾಗೂ ಕೃಷಿ ಸಮುದಾಯವನ್ನು, ಹಾಗ... ಹಳ್ಳಿಗಳನ್ನೂ ರಕ್ಷಿಸಿಕೊಳ್ಳಬೇಕಾಗಿದೆ. ಅದಕ್ಕಾ... ಪರ್ಯಾಯ ಕೃಷಿ ನೀತಿಯು ಒಂದ... ಸಮುಚ್ಚಯವನ್ನೇ. ಪರ್ಯಾಯ ಆರ್ಥಿ... ನೀತಿಯನ್ನೇ ಜಾರಿಗೆ ತರಲು ತೀವ್ರ ಹೋರಾ... ನಡೆಸಬೇಕಾಗಿದೆ.


ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮ್ಮೇಳನವನ್ನು ಧಿಕ್ಕರಿಸಿ

ಡಿಸೆಂಬರ್ 1, 2011, ರೈತ ಕೂಲಿಕಾರರ ಬೃಹತ್ ಪ್ರತಿಭಟನೆ

ಅನ್ನದಾತ ರೈತರ ಕೈಯಲ್ಲಿ ಉಳಿಯ ಬೇಕಾದ ಭೂಮಿಯನ್ನು ಬಡ ಬಗರ್ ಹುಕುಂ ಸಾಗುವಳಿದಾರರು, ಕೃಷಿ ಕೂಲಿಕಾರರಿಗೆ ದಕ್ಕಬೇಕಾದ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗಳು, ದೊಡ್ಡ ಬಂಡವಾಳಗಾರ ಕಂಪನಿಗಳಿಳ ಬಾಯಿಗೆ ಹಾಕಲು ಬಿಡುವುದಿಲ್ಲ. ರಾಜ್ಯದ ದೇಶದ ಸಮಗ್ರ ಕೃಷಿ ಕ್ಷೇತ್ರದ ಮೇಲೆ ತನ್ನ ಕರಾಳ ಹಿಡಿತವನ್ನು ಚಾಚಲು ಅವಕಾಶ ನೀಡುವುದಿಲ್ಲವೆಂದು ತೀರ್ಮಾನಿಸಿರುವ ರೈತ- ಕೂಲಿಕಾರರು ಡಿಸೆಂಬರ್ 1, 2011 ರಂದು ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ಉದ್ದೇಶಿಸಲಾಗಿರುವ ಬೆಂಗಳೂರು ಹೊರವಲಯದ ಮಾದಾವರ ಗ್ರಾಮದ ಬಳಿಯ ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದ ಮುಂದೆಸಹಸ್ರರು ರೈತ ಕೂಲಿಕಾರರ ಬೃಹತ್ ಪ್ರತಿಭಟನೆ ನಡೆಯಲಿದೆ.

ಸಿ.ಐ.ಟಿ.ಯು. ನೇತೃತ್ವದಲ್ಲಿ ಬೆಂಗಳೂರಿನ ಕಾರ್ಮಿಕವರ್ಗ ರೈತ ಕೂಲಿಕಾರರ ಈ ಹೋರಾಟವನ್ನು ಬೆಂಬಲಿಸಿ ತಾನು ಕಾರ್ಯಾಚರಣೆಗೆ ಇಳಿಯಲಿದೆ. ಇದಲ್ಲದೆ ಇದೇ ಡಿಸೆಂಬರ್ 1 ರಂದು ವಿದ್ಯಾರ್ಥಿ- ಯುವಜನ ಮಹಿಳೆಯರೂ ರೈತ- ಕೂಲಿಕಾರರ ಬೆಂಬಲಿಸಿ ಪ್ರತಿಭಟನೆ ನಡೆಸಲಿದ್ದಾರೆ.

ಬೆಂಗಳೂರಿನಲ್ಲಿ ಅಕ್ಟೋಬರ್ 29 ಮತ್ತು 30 ರಂದು ನಡೆದ ಕೃಷಿ ಕ್ಷೇತ್ರದಲ್ಲಿ ಹೂಡಿಕೆ ವಿರೋಧಿ ಕಾರ್ಯಾಗಾರವು ಡಿಸೆಂಬರ್ 1 ರಂದು ಹೋರಾಟದ ತೀರ್ಮಾನ ಕೈಗೊಂಡಿತು



ಜನಶಕ್ತಿ
ಕನ್ನಡ ವಾರಪತ್ರಿಕೆ

ಮತ್ತೆ ಪೆಟ್ರೋಲ್ ದರ ಏರಿಕೆ–ಮತ್ತೆ ಆಹಾರ ಹಣದುಬ್ಬರದಲ್ಲಿ ಏರಿಕೆ

ವಂಬರ್ 3ರ ಬೆಳಿಗ್ಗೆ ಆಹಾರ ಹಣದುಬ್ಬರ ತ್ತೆ ಏರಿಕೆ ತೋರಿಸಿದೆ. ಕಳೆದ ವಾರ 11% ಟಿದ್ದ ಅದು ಈ ವಾರ 12%ವನ್ನೂ ದಾಟಿದೆ. .21% ಆಗಿದೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತ ಪಿಎ-2 ಹಣಕಾಸು ಮಂತ್ರಿಗಳು 'ಆತಂಕ' ಕ್ತಪಡಿಸಿದರೂ ಹಬ್ಬಗಳ ಹಿನ್ನೆಲೆಯಲ್ಲಿ ಈ ಏರಿಕೆ ಗಿದೆ ಎಂದು ಸಮಜಾಯಿಷಿ ಕೊಟ್ಟರು. ಆದರೆ ದಿನ ಕತ್ತಲು ಕವಿಯುತ್ತಲೇ. ಪೆಟ್ರೋಲ್ ರಗಳಲ್ಲಿ 2ರೂ.ಗಳಷ್ಟು ಏರಿಕೆಯನ್ನು ಕಟಿಸಲಾಯಿತು. ಬಹುಶಃ ಹಬ್ಬಗಳಿಂದಾಗಿ ಏರಿದ ಹಾರ ಬೆಲೆಯುಬ್ಬರ ಕಡಿಮೆಯಾಗದಿರಲಿ ಂದಿರಬಹುದು. ಹಣಕಾಸು ಮಂತ್ರಿಗಳ ಆತಂಕ ಲಿ ನಾಟಕ ಎಂದು ಬೇರೆ ಹೇಳಬೇಕೇ?

ಇದು ಈ ವರ್ಷದ ನಾಲ್ಕನೇ ದರ ಏರಿಕೆ, ಬಹುಶಃ ಮಧ್ಯೆ ವಿಧಾನಸಭಾ ಚುನಾವಣೆಗಳು ಇರದಿದ್ದರೆ ಈ ಸಂಖ್ಯೆ ಇನ್ನೂ ಹೆಚ್ಚಿರುತ್ತಿತ್ತು.

ಬೆಲೆಯೇರಿಕೆಯ ಬಗ್ಗೆ ತೈಲ ವ್ಯಾಪಾರ ಕಂಪನಿಗಳು ಯೋಚಿಸುತ್ತಿವೆ ಎಂದು ಕಳೆದ ವಾರವಿಡೀ ಹೇಳಲಾಗುತ್ತಿತ್ತು. ಮತ್ತೆ ಅದೇ 'ಅಂಡರ್ ರಿಕವರಿ'ಯ, ಅಂದರೆ ಈ ಕಂಪನಿಗಳಿಗೆ 'ಗಿಟ್ಟುತ್ತಿಲ್ಲ' ಎಂಬ ನೆಪವೊಡ್ಡಿದರೂ, ಅದಕ್ಕೆ ಕಾರಣ ಎಂದಿನಂತೆ ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯೇರಿಕೆ ಎಂಬ ಸಬೂಬು ಕೊಟ್ಟಿರಲಿಲ್ಲ, ಬದಲಾಗಿ ರೂಪಾಯಿ ಮೌಲ್ಯ ಇಳಿಯುತ್ತಿರುವುದರಿಂದ ತೈಲ ಆಮದು ಖರ್ಚು ಏರುತ್ತಿದೆ ಎಂದು ಹೇಳುತ್ತಿದ್ದರು. ಪೆಟ್ರೋಲ್ ಬೆಲೆಗಳ ಮೇಲಿನ ಹತೋಟಿಯನ್ನು ತೆಗೆದು ಹಾಕಿರುವುದರಿಂದ ಈ ಬೆಲೆಯೇರಿಕೆ ಆ ಕಂಪನಿಗಳ ನಿರ್ಧಾರ, ಯುಪಿಎ-2 ಸರಕಾರ ಇದಕ್ಕೆ ಹೊಣೆಯಲ್ಲ ಎಂಬ ಎಂದಿನಂತೆ ತಪ್ಪಿಸಿಕೊಳ್ಳುವ ಮಾತುಗಳೂ ಕೇಳಬರುತ್ತಿದ್ದವು. ಆದರೆ ಪೆಟ್ರೋಲ್ ಬೆಲೆಯೇರಿಕೆಯನ್ನು ಪ್ರಕಟಿಸಿದ ಮೇಲೆ ಅಂತಹ ಮಾತುಗಳು ಕೇಳಬರಲಿಲ್ಲ. ಅವನ್ನು ಯಾರೂ ನಂಬುವುದಿಲ್ಲ ಎಂದು ಯುಪಿಎ ಪ್ರಭೃತಿಗಳಿಗೂ ಸ್ಪಷ್ಟವಾಗಿರಬೇಕು. ಬದಲಾಗಿ ಈ ಬಾರಿ ಕಾಂಗ್ರೆಸ್ ವಕ್ತಾರರು 'ದಯವಿಟ್ಟು ಕ್ಷಮಿಸಿ. ಈ ಹೊರೆಯನ್ನು ನೀವು ಹೊರಲೇ ಬೇಕಾಗಿದೆ' ಎಂದು 'ಕೇಳಿಕೊಂಡಿದ್ದಾರೆ'. ಈ ನೆಪದಲ್ಲಿ ಸರಕಾರದ ತೆರಿಗೆ ಆದಾಯ ಏರಿದರೆ ದೇಶಕ್ಕೇ ಒಳ್ಳೆಯದಲ್ಲವೇ ಎಂದೇನೂ ಸಮಜಾಯಿಷಿ ಕೊಟ್ಟಿಲ್ಲ! ಮುಂದೆ ಯುಪಿಎ-2 ರ ಜನ-ವಿರೋಧಿ ಕ್ರೌರ್ಯ ಆ ಮಟ್ಟವನ್ನೂ ತಲುಪಬಹುದು.

ಪೆಟ್ರೋಲ್ ಬೆಲೆಯೇರಿಕೆಯ ಬೆನ್ನ ಹಿಂದೆಯೇ. ಈಗಲೂ 'ಬೆಲೆ ನಿಯಂತ್ರಣ'ವಿರುವ ಡೀಸೆಲ್, ಅಡುಗೆ ಅನಿಲ ಮತ್ತು ಸೀಮೆಎಣ್ಣೆ ಬೆಲೆಗಳನ್ನೂ ಏರಿಸಲು ಪೆಟ್ರೋಲಿಯಂ ಮಂತ್ರಿಗಳು 'ಅಧಿಕಾರಿಕ ಮಂತ್ರಿಸಮೂಹ' (ಇಜಿಓಎಂ) ಸಭೆ ಕರೆಯಬೇಕಾಗಿ ಕೇಳಿದ್ದಾರಂತೆ. ಪೆಟ್ರೋಲ್ ದರ ಏರಿಕೆ ತೈಲ ಕಂಪನಿಗಳ ನಿರ್ಧಾರ, ಸರಕಾರ ಅದಕ್ಕೆ ಹೊಣೆಯಲ್ಲ ಎಂಬ ಮಾತು ದರ ಏರಿಕೆಯ ನಂತರ ಕೇಳಬರದಿರಲು ಇದೂ ಒಂದು ಕಾರಣವಿರಬೇಕು.



ವೇದರಾಜ ಎನ್.ಕೆ.

ಯುಪಿಎ ಬೆಂಬಿಡದ 2ಜಿ ಬೇತಾಳ

ಜಿ ತರಂಗಾಂತರ ಹಂಚಿಕೆಯ ಹಗರಣದಲ್ಲಿ ಂದಿನ ಹಣಕಾಸು ಮಂತ್ರಿಗಳ ಪಾತ್ರದ ಬಗ್ಗೆ ಗಿನ ಹಣಕಾಸು ಮಂತ್ರಿಗಳು ಅನುಮೋದಿಸಿದ ಪ್ಪಣಿ ಬಯಲಿಗೆ ಬಂದ ನಂತರ, ಯುಪಿಎ ಧ್ಯಕ್ಷರ ಮಧ್ಯಸ್ಥಿಕೆಯಿಂದ ಹಚ್ಚಿದ ತೇಪೆ ಮತ್ತೆ ರಿದಿರುವಂತೆ ಕಾಣುತ್ತಿದೆ. ಆ ಟಿಪ್ಪಣಿಯಲ್ಲಿ ಂದಿನ ಹಣಕಾಸು ಮಂತ್ರಿಗಳ ಬಗೆ ಪ್ರಸ್ತಾಪ ಧಾನಮಂತ್ರಿಗಳ ಕಚೇರಿಯ ಒತ್ತಾಯದ ೕರೆಗೆ ಸೇರಿಸಲಾಗಿತ್ತು ಎಂದು ಹಾಲಿ ಹಣಕಾಸು ಂತ್ರಿಗಳು ಪ್ರಧಾನಿಗಳಿಗೆ ನಂತರ ಬರೆದ ತ್ರವೊಂದರಿಂದ ಬಯಲಿಗೆ ಬಂದಿದೆ ಎಂದು ಮುಖ ಪತ್ರಿಕೆಯೊಂದು ವರದಿ ಮಾಡಿದೆ. ಮೂಲಕ ಪ್ರಧಾನ ಮಂತ್ರಿಗಳ ಗಮನಕ್ಕೆ ರದೆ ಈ ಹಗರಣ ನಡೆದಿದೆ ಎಂಬ ಮಜಾಯಿಷಿ ಇನ್ನಷ್ಟು ಸಂದೇಹಕ್ಕೆ ಒಳಗಾಗಿದೆ.

ಈ ನಡುವೆ, ಈ ಹಿಂದೆ ಈ ಅಂಕಣದಲ್ಲಿ ನಿಸಿದಂತೆ, ಯುಪಿಎ-1 ತನ್ನ 'ಮಹಾನ್ ಧನೆ' ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದ ಮಾಹಿತಿ ಕ್ಕು ಕಾಯಿದೆಯನ್ನು ಯುಪಿಎ-2 ಸರಕಾರವೇ ರೋಕ್ಷವಾಗಿಯಾದರೂ ಮೊಟಕುಮಾಡಲು ೂರಟಿರುವಂತೆ ಕಾಣುತ್ತಿದೆ. ವಿವೇಕ್ ಗರ್ಗ್ ಬವರು ಈ ಕಾನೂನಿನ ಅಡಿಯಲ್ಲಿ ಕೇಳಿದ ಾಹಿತಿಯಿಂದಾಗಿ ಈ ಹಿಂದಿನ ಟಿಪ್ಪಣಿ ಯಲಿಗೆ ಬಂದಿತ್ತು. ಈಗ ಅವರು ಈ ಬಗ್ಗೆ ಳಿರುವ ಇನ್ನಷ್ಟು ಮಾಹಿತಿಯನ್ನು ಕೊಡಲು ಧ್ಯವಿಲ್ಲ ಎಂಬ ಉತ್ತರ ಪಡೆದಿದ್ದಾರೆ. ಅದಕ್ಕೆ ಡಿರುವ ಕಾರಣ, ಅಥವ ನೆಪ, ಸಂಸತ್ತಿನ ಂಟಿ ಸಮಿತಿಯೊಂದು ಈ ಬಗ್ಗೆ ವಿಚಾರಣೆ ಡೆಸುತ್ತಿದ್ದು, ಈ ದಸ್ತಾವೇಜುಗಳನ್ನು ಅದರ ುಂದೆ ಸಲ್ಲಿಸಲಾಗಿದೆ, ಅದನ್ನು ಬಹಿರಂಗ ಡಿಸುವುದು ಸಂಸತ್ತಿನ ವಿಶೇಷಾಧಿಕಾರದ ಲ್ಲಂಘನೆಯಾಗುತ್ತದೆ ಎಂಬುದು.

ಅತ್ತ ಈ ಹಗರಣ ಕುರಿತಂತೆ ವಿಚಾರಣಾ ೋರ್ಟಿನಲ್ಲಿ ಜಾಮೀನಿನ ವಿಷಯದಲ್ಲಿ ಡಿಎಂಕೆ ಜ್ಯಸಭಾ ಸದಸ್ಯೆ ಕನ್ನಿಮೋಳಿ ಮತ್ತಿತರರು ಹಾಗು ಳಿದ ನಾಲ್ಕು ಮಂದಿಗೆ ಸಂಬಂಧಪಟ್ಟಂತೆ ಬಿಐ ಭಿನ್ನ ನಿಲುವು ತಳೆದಿದೆಯೇ, ಹಾಗಿದ್ದರೆ ದಕ್ಕೆ ಆಧಾರ ಏನು ಎಂದು ಸುಪ್ರಿಂ ಕೋರ್ಟ್ ಿಬಿಐಯನ್ನು ಕೇಳಿದೆ. ಕನ್ನಿಮೋಳಿ ಮತ್ತು ಇತರ ಳು ಮಂದಿಯ ಜಾಮೀನನ್ನು ಸಿಬಿಐ ರೋಧಿಸಿರಲಿಲ್ಲ, ಆದರೆ ಉಳಿದ ಐದು ಆಪಾದಿತರ ಜಾಮೀನನನು ವಿರೋಧಿಸಿದೆ, ಅವರ ಮೇಲಿನ ಆರೋಪಗಳ ಆಧಾರದಲ್ಲಿ ಹೀಗೆ ಮಾಡಲಾಗಿದೆ ಎಂದು ಸಿಬಿಐ ಪರವಾಗಿ ಹೇಳಿದಾಗ ನ್ಯಾಯಾಧೀಶರು ಇನ್ನಷ್ಟು ಪ್ರಶ್ನೆಗಳನ್ನು ಕೇಳಿ ಎಲ್ಲರ ಮೇಲೂ ದೇಶದ ಖಜಾನೆಯನ್ನು ಲೂಟಿ ಮಾಡುವ ಆರೋಪ ಹಾಕಿರುವಾಗ ಇಂತಹ ಭಿನ್ನ ನಿಲುವು ತಳೆಯಲು ಹೇಗೆ ಸಾಧ್ಯ, ಆಗ ಇಡೀ ಕೇಸಿನ ನಿಮ್ಮ ಆರ್ಥಿಕ ಆಯಾಮವೇ ಎಲ್ಲಿರುತ್ತದೆ ಎಂದು ಪ್ರಶ್ನಿಸಿದರಂತೆ.

ಸಿಬಿಐಯ ವಿರೋಧವಿಲ್ಲದಿದ್ದರೂ ದಿಲ್ಲಿಯ ನ್ಯಾಯಾಲಯ ಕನ್ನಿಮೋಳಿಯವರು ಮತ್ತು ಇತರ ಏಳು ಮಂದಿ ಈ ಹಗರಣದ ಆರೋಪಿಗಳಿಗೆ ಜಾಮೀನು ನಿರಾಕರಿಸಿದೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ವರದಿಯಾಗಿದೆ. ಈ ಕೇಸಿನ ಸಂಗತಿಗಳು ಮತ್ತು ಅವರ ಮೇಲೆ ಹೊರಿಸಿರುವ ಆರೋಪಗಳು ಬಹಳ ಗಂಭೀರ ಸ್ವರೂಪದ್ದಾಗಿದ್ದು ದೇಶದ ಆರ್ಥಿಕದ ಮೇಲೆ ಗಂಭೀರ ಪರಿಣಾಮಗಳನ್ನು ಬೀರುವಂತವುಗಳು ಎಂದು ಜಾಮೀನು ನಿರಾಕರಿಸುತ್ತ ನ್ಯಾಯಾಲಯ ಹೇಳಿದೆ. ಅಲ್ಲದೆ ಜಾಮೀನು ಕೊಡುವ ವಿಷಯದಲ್ಲಿ ಸಿಬಿಐನ ಭಿನ್ನ ನಿಲುವಿಗೆ ಆಧಾರವೇನೂ ಇಲ್ಲ ಎಂದೂ ಅದು ಅಭಿಪ್ರಾಯ ಪಟ್ಟಿದೆ. ಕನ್ನಿಮೋಳಿಯವರು ಮೇ 20ರಿಂದ ನ್ಯಾಯಾಂಗ ಬಂಧನದಲ್ಲಿದ್ದರೆ, ಮಾಜಿ ಯುಪಿಎ ದೂರಸಂಪರ್ಕ ಮಂತ್ರಿ ರಾಜ ಅವರು ಜೈಲಿನಲ್ಲಿ ಒಂಭತ್ತು ತಿಂಗಳು ಪೂರೈಸಿದ್ದಾರಂತೆ. ವಿಶೇಷವೆಂದರೆ ಅವರು ಜಾಮೀನು ಕೇಳಿಲ್ಲ.

ಈ ಎಲ್ಲ ಮುಜುಗರಗಳ ನಡುವೆ ಜಂಟಿ ಸಂಸದೀಯ ಸಮಿತಿಯ ಮುಂದೆ ವಿಚಾರಣೆಯಲ್ಲಿ ಯುಪಿಎ ಪಕ್ಷಗಳು, ಮುಖ್ಯವಾಗಿ ಕಾಂಗ್ರೆಸ್ ಪಕ್ಷ 2ಜಿ ಹಂಚಿಕೆಯಲ್ಲಿ ನಷ್ಟವೇನೂ ಆಗಿಲ್ಲ, ಅದು ಸರಕಾರದ ಧೋರಣೆಯ ಪ್ರಶ್ನೆ ಎಂದು ಬಿಂಬಿಸುವ ಪ್ರಯತ್ನವನ್ನು ಮುಂದುವರೆಸುತ್ತಿದ್ದಾರೆ. 1.76 ಲಕ್ಷ ಕೋಟಿ ರೂ. ನಷ್ಟದ ಅಂದಾಜನ್ನು ಹೇಗೆ ಮಾಡಲಾಗಿದೆ ಎಂದು ಸಿಎಜಿ ವರದಿಯೇ ವಿವರಿಸಿದ್ದರೂ, ಸಮಿತಿಯ ಮುಂದೆ ಹಾಜರಾದ ಸಿಎಜಿಯ ಮುಖ್ಯಸ್ಥ ವಿನೋದ್ ರಾಯ್ ಅವರಿಗೆ ಮತ್ತೆ ಅದೇ ಪ್ರಶ್ನೆ ಕೇಳಲಾಯಿತು. ಹೀಗೆ ಲೆಕ್ಕ ಹಾಕುವಾಗ ಸಿಎಜಿ ಸರಕಾರದ ಧೋರಣೆಯನ್ನು ಗಮನಕ್ಕೆ ತಗೊಂಡಿದೆಯೇ, ಇಲ್ಲವಾದರೆ ಅದು ತನ್ನ ಮಿತಿಯನ್ನು ಮೀರಿದಂತಲ್ಲವೇ ಎಂಬಿತ್ಯಾದಿ ಪ್ರಶ್ನೆಗಳನ್ನು ಕಾಂಗ್ರೆಸ್ ಸದಸ್ಯರು ಮತ್ತೆ ಕೇಳಿದರು. ದೇಶದ ಅಮೂಲ್ಯ ನೈಸರ್ಗಿಕ ಸಂಪತ್ತುಗಳ ಲೂಟಿಯೇ ಸರಕಾರ ಧೋರಣೆಯಾಗಿರುವಾಗ ಹಗರಣದ ಪ್ರಶ್ನೆಯೇ ಇಲ್ಲವಲ್ಲ ಎಂದು ಇದರ ಅರ್ಥವೇ? ಸಿಎಜಿ ತನ್ನ ಸೀಮಾರೇಖೆಯನ್ನು ದಾಟಿಲ್ಲ ಎಂದು ವಿನೋದ್ ರಾಯ್ ಸ್ಪಷ್ಟಪಡಿಸಿರುವುದಾಗಿ ವರದಿಯಾಗಿದೆ. ★

16 ವರ್ಷಗಳಲ್ಲಿ ಎರಡೂವರೆ ಲಕ್ಷ ದಾಟಿದ ರೈತರ ಆತ್ಮಹತ್ಯೆಗಳು

1995ರಿಂದ 2010ರ ನಡುವೆ 2,56,913 ರೈತರು ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ. 'ಇದೀಗ ಅಧಿಕೃತ ಮಾಹಿತಿ' ಎನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಪಿ.ಸಾಯಿನಾಥ್.


ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ(ಎನ್‌ಸಿಆರ್‌ಬಿ) ಪ್ರತಿವರ್ಷ ಅಪರಾಧಗಳ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಿ ಪ್ರಕಟಿಸುವ ಸಂಸ್ಥೆ. 1995ರಿಂದ ಅದು ರೈತರ ಆತ್ಮಹತ್ಯೆಗಳ ಮಾಹಿತಿಗಳನ್ನು ಪ್ರತ್ಯೇಕವಾಗಿ ದಾಖಲು ಮಾಡಲಾರಂಭಿಸಿತ್ತು. 2010ರ ಮಾಹಿತಿ ಈಗಷ್ಟೇ ಪ್ರಕಟವಾಗಿದ್ದು, 2010ರಲ್ಲಿಯೂ ಈ ಬಾಬ್ತಿನಲ್ಲಿ ದಾಖಲಾಗಿರುವ ಸಂಖ್ಯೆ 15,964. ಕಳೆದ ವರ್ಷ ಎರಡೂವರೆ ಲಕ್ಷವನ್ನು ಸಮೀಪಿಸಿದ್ದ ಒಟ್ಟು ಸಂಖ್ಯೆ ಈಗ ಅದನ್ನು ದಾಟಿ ನಿಂತಿದೆ. ಇದರಲ್ಲಿ ಐದನೇ ಒಂದು ಭಾಗಕ್ಕಿಂತಲೂ, ಅಂದರೆ ಅರ್ಧ ಲಕ್ಷಕ್ಕಿಂತಲೂ ಹೆಚ್ಚು ಶ್ರೀಮಂತ ರಾಜ್ಯ ಮಹಾರಾಷ್ಟ್ರದಲ್ಲಿ ದಾಖಲಾಗಿದೆ. ಒಟ್ಟು ರೈತರ ಆತ್ಮಹತ್ಯೆಗಳಲ್ಲಿ ಸುಮಾರು ಮೂರನೇ ಎರಡರಷ್ಟು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ಛತ್ತೀಸಗಡ ಈ ಐದು ರಾಜ್ಯಗಳಲ್ಲೇ ಸಂಭವಿಸಿದೆ.

ಈ ಹದಿನಾರು ವರ್ಷಗಳಲ್ಲಿ ಮೊದಲ ಎಂಟು ವರ್ಷಗಳಲ್ಲಿ (1995–2002) 1,21,157 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ, ನಂತರದ ಎಂಟು ವರ್ಷಗಳಲ್ಲಿ (2003–2010) ಈ ಸಂಖ್ಯೆ ಇನ್ನೂ ಹೆಚ್ಚಿ 1,35,756 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಸಾಗುವಳಿದಾರರು' ಎಂದು ದಾಖಲಾಗಿರುವವರ ಸಂಖ್ಯೆ ಕಳೆದ ಎರಡು ದಶಕಗಳಲ್ಲಿ ಇಳಿಮುಖವಾಗುತ್ತಿರುವುದರ ಹಿನ್ನೆಲೆಯಲ್ಲಿ ಈ ಹೆಚ್ಚಳ ಆತಂಕಕಾರಿ ಎನ್ನುತ್ತಾರೆ ಸಾಯಿನಾಥ್.

ನಮ್ಮ ಪ್ರಧಾನಮಂತ್ರಿಗಳು ಶ್ರೀಮಂತ ದೇಶಗಳ ಹಣಕಾಸು ಬಿಕ್ಕಟ್ಟಿನ ಪರಿಹಾರದಲ್ಲಿ ನೆರವಾಗಲು ಆಹ್ವಾನ ಪಡೆಯುತ್ತಿರುವ 'ಮಟ್ಟಕ್ಕೆ ಏರಿ'ದ್ದರೂ ನಮ್ಮ ದೇಶದ ಕೃಷಿ ಬಿಕ್ಕಟ್ಟು ಹಿಂದಿನಂತೆಯೆ ಈಗಲೂ ಗಂಭೀರವಾಗಿಯೇ ಉಳಿದಿದೆ ಎಂಬುದು ಗಮನಾರ್ಹ. ❑

'ಮೇಲೇರುತ್ತಿರುವ' ಭಾರತದ ದುರಂತಮಯ ಫಸಲು

ರೈತರ ಆತ್ಮಹತ್ಯೆಗಳು
ಅಖಿಲ ಭಾರತ ಸಂಖ್ಯೆಗಳು



ಒಟ್ಟು 1995–2010 **2,56,913**

(ಕೃಪೆ: ದಿ ಹಿಂದೂ)

ಜಗದಗಲ

ಶರತ್‌ಚಂದ್ರ

ವಿಶ್ವಸಂಸ್ಥೆ ಸದಸ್ಯತ್ವಕ್ಕೆ ಪ್ಯಾಲೆಸ್ಟೈನ್ ಚಾರಿತ್ರಿಕ ಕ್ರಮ

ಪ್ಯಾಲೆಸ್ಟೈನ್ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಬ್ಬಾಸ್ ವಿಶ್ವಸಂಸ್ಥೆಯ ಪೂರ್ಣ ಸದಸ್ಯತ್ವಕ್ಕೆ ಅರ್ಜಿ ಹಾಕಿ ಅದನ್ನು ಸಾಮಾನ್ಯ ಸಭೆ(ಜನರಲ್ ಅಸೆಂಬ್ಲಿ)ಯಲ್ಲಿ ಮಂಡಿಸುವ ನಿಟ್ಟಿನಲ್ಲಿ ಚಾರಿತ್ರಿಕ ಹೆಜ್ಜೆ ಹಾಕಿದ್ದಾರೆ. ಇಸ್ರೇಲ್ ಜತೆ ಶಾಂತಿ ಒಪ್ಪಂದಕ್ಕೆ ಬರುವುದರ ಮೊದಲು ಈ ಕ್ರಮ ಸಲ್ಲದು ಎಂಬ ಅಮೆರಿಕನ್ ಅಧ್ಯಕ್ಷ ಒಬಾಮ ಎಚ್ಚರಿಕೆಯನ್ನು ಅವರು ನಿರ್ಲಕ್ಷಿಸಿದ್ದಾರೆ. ಒಬಾಮ ಈ ಕ್ರಮದ ಮೊದಲು ತೀವ್ರ ರಾಜತಾಂತ್ರಿಕ ಒತ್ತಡ ಹೇರಿ, ಆರ್ಥಿಕ ನೆರವು ನಿಲ್ಲಿಸುವ ಬೆದರಿಕೆ ಹಾಕಿದರೂ ಅದಕ್ಕೆ ಸೊಪ್ಪು ಹಾಕಿಲ್ಲ. ಪ್ಯಾಲೆಸ್ಟೈನ್ ಪ್ರದೇಶಗಳಿಂದ ಬರುವ ತೆರಿಗೆ ಪಾವತಿ ನಿಲ್ಲಿಸುವ ಮತ್ತು ಮಿಲಿಟರಿ ಕ್ರಮದ ಇಸ್ರೇಲಿ ಬೆದರಿಕೆಗೂ ಕೇರ್ ಮಾಡಿಲ್ಲ. ಅಮೆರಿಕನ್ ಮಧ್ಯಸ್ತಿಕೆಯ ಇಸ್ರೇಲ್-ಪ್ಯಾಲೆಸ್ಟೈನ್ 'ಒಸ್ಲೊ ಶಾಂತಿ ಒಪ್ಪಂದ'ದ ಜಾರಿ, ಇಸ್ರೇಲಿ ಹಟಮಾರಿತನ ಮತ್ತು ಅಮೆರಿಕದ ಗೋಸುಂಬೆತನದಿಂದಾಗಿ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಇದರಿಂದ ರೋಸಿ ಹೋಗಿರುವ ಪ್ಯಾಲೆಸ್ಟೈನ್ನರಲ್ಲಿ ಇದು ವಿದ್ಯುತ್ ಸಂಚಾರ ಮಾಡಿದೆ. ಚುನಾವಣಾ ಮೂಡಿನಲ್ಲಿರುವ ಒಬಾಮರನ್ನು ಇಕ್ಕಟ್ಟಿಗೆ ಸಿಕ್ಕಿಸಿದೆ. ಪ್ಯಾಲೆಸ್ಟೈನ್ನರ ದುರ್ದೆಶೆ, ಇಸ್ರೇಲಿನ ಕ್ರಿಮಿನಲ್ ಧೋರಣೆ ಮತ್ತು ವಿಶ್ವಸಂಸ್ಥೆಯ ತಾರತಮ್ಯದ ನೀತಿಯತ್ತ ಅಂತರ್ರಾಷ್ಟ್ರೀಯ ಸಮುದಾಯದ ಗಮನ ಸೆಳೆದಿದೆ.



'ಆತ್ಮಸಾಕ್ಷಿಯಿರುವ ಯಾರೂ ಇದನ್ನು ತಿರಸ್ಕರಿಸಲಾರ'

ಅಬ್ಬಾಸ್ ಸೆಪ್ಟೆಂಬರ್ ಮೂರನೇ ವಾರದಲ್ಲಿ ವಿಶ್ವಸಂಸ್ಥೆಯ ಪೂರ್ಣ ಸದಸ್ಯತ್ವದ ಅರ್ಜಿಯನ್ನು ಮಹಾ ಕಾರ್ಯದರ್ಶಿಗೆ ಸಲ್ಲಿಸಿದ್ದರು. ಸೆಪ್ಟೆಂಬರ್ 23 ರಂದು ಅವರು ಮಾಡಿದ ಚಾರಿತ್ರಿಕ ಭಾಷಣ ಈ ವರ್ಷದ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಸಭೆ ಪ್ಯಾಲೆಸ್ಟೈನ್-ಕೇಂದ್ರಿತವಾಗುವಂತೆ ಮಾಡಿತು. ಅವರ ಭಾಷಣದಲ್ಲಿ ಕಳೆದ 63 ವರ್ಷಗಳ ಪ್ಯಾಲೆಸ್ಟೈನ್ನರ ನೋವು ಮತ್ತು ಸಂಕಷ್ಟಗಳ ವಿವರವಾದ ಚಿತ್ರಣವನ್ನು ಮನ ಮುಟ್ಟುವಂತೆ ಸಶಕ್ತವಾಗಿ ಮುಂದಿಟ್ಟರು. 'ಆತ್ಮಸಾಕ್ಷಿಯಿರುವ ಯಾರೂ ಪೂರ್ಣ ಸದಸ್ಯತ್ವಕ್ಕೆ ಪ್ಯಾಲೆಸ್ಟೈನ್ ಅರ್ಜಿಯನ್ನು ಮತ್ತು ಸ್ವತಂತ್ರ ದೇಶವಾಗಿ ಸೇರಿಸಿಕೊಳ್ಳುವುದನ್ನು ತಿರಸ್ಕರಿಸಲಾರ' ಎಂದು ಅವರು ಮಾರ್ಮಿಕವಾಗಿ ಹೇಳಿದರು. ಅವರ ಭಾಷಣ 1974 ರಲ್ಲಿ ಜನರಲ್ ಅಸೆಂಬ್ಲಿಯಲ್ಲಿ ಪ್ರಸಿದ್ಧ ಪ್ಯಾಲೆಸ್ಟೈನ್ ನಾಯಕ ಯಾಸೆರ್ ಅರಾಫತ್ ಅವರ ಚಾರಿತ್ರಿಕ ಭಾಷಣವನ್ನು ಹೋಲುವಂತಿತ್ತು. "ಒಂದು ಕೈಯಲ್ಲಿ ಸ್ವಾತಂತ್ರ್ಯ ಹೋರಾಟಗಾರರುಗಳನ್ನು, ಇನ್ನೊಂದು ಕೈಯಲ್ಲಿ (ಶಾಂತಿಯ ಸಂಕೇತವಾದ) ಒಲಿವ್ ಟೊಂಗೆ ಹಿಡಿದು ಇಲ್ಲಿಗೆ ಬಂದಿದ್ದೇನೆ. ನನ್ನ ಕೈಯಿಂದ ಒಲಿವ್ ಟೊಂಗೆ ಬಿದ್ದು ಹೋಗುವಂತೆ ಮಾಡಬೇಡಿ' ಎಂದು ಅರಾಫತ್ ಮಾರ್ಮಿಕವಾಗಿ ಹೇಳಿದ್ದರು.

ಅಮೆರಿಕನ್ ಮತ್ತು ಇಸ್ರೇಲಿ ಸಂಧಾನಕಾರರ ಒತ್ತಡಕ್ಕೆ ಮಣಿದ ಆಪಾದನೆಯನ್ನು ಹೊತ್ತ ಮತ್ತು ಫಲ ಕೊಡದ ಸಂಧಾನದಿಂದ ಪ್ಯಾಲೆಸ್ಟೈನ್ನರ ಆಕ್ರೋಶಕ್ಕೆ ತುತ್ತಾಗಿದ್ದ ಅಬ್ಬಾಸ್ ಸರ್ಕಾರ ಈ ಕ್ರಮದಿಂದ ತಲೆ ಎತ್ತಿ ಓಡಾಡುವಂತೆ ಆಗಿದೆ. ಗಾಜಾ ಪಟ್ಟಿ, ಪಶ್ಚಿಮ ದಂಡೆ ಮತ್ತು ಜೇರುಸಲೆಂ ನಲ್ಲಿರುವ ಶೇ. 80 ಪ್ಯಾಲೆಸ್ಟೈನ್ನರ ಬೆಂಬಲ ಈ ಕ್ರಮಕ್ಕೆ ಇತ್ತು ಎನ್ನಲಾಗಿದೆ. ಪ್ಯಾಲೆಸ್ಟೈನ್ ಪ್ರಾಧಿಕಾರದ ಈ ಅರ್ಜಿ ಆ ನಂತರ ಭದ್ರತಾ ಸಮಿತಿಗೆ ಹೋಗಲಿದೆ. ಅಲ್ಲಿಯೂ ಪ್ಯಾಲೆಸ್ಟೈನ್ನರ ಪ್ರಸ್ತಾವಕ್ಕೆ ಅಗತ್ಯ 9 (15ರಲ್ಲಿ) ಬಹುಮತ ಸಿಗುವ ಸಾಧ್ಯತೆ ಇದೆ. ಆದರೆ 5 ಶಾಶ್ವತ ಸದಸ್ಯ ದೇಶಗಳಲ್ಲಿ ಒಂದು ವಿಟೋ ಬಳಸಿದರೆ ಪ್ರಸ್ತಾವಕ್ಕೆ ಹಿನ್ನಡೆ ಆಗಲಿದೆ. ಸದ್ಯಕ್ಕೆ ವಿವಿಧ ನಿಯಮ ಬಳಸಿ ಭದ್ರತಾ ಸಮಿತಿಯಲ್ಲಿ ಮತದಾನ ವಿಳಂಬ ಮಾಡುವುದು ಅಮೆರಿಕದ ತಂತ್ರವಾಗಿದೆ.

ಪ್ಯಾಲೆಸ್ಟೈನಿಗೆ ಯುನೆಸ್ಕೊ ಸದಸ್ಯತ್ವ

ಈ ಪ್ರಸ್ತಾವ ಭದ್ರತಾ ಸಮಿತಿಗೆ ಬಂದರೆ ಅಮೆರಿಕ ತನ್ನ ವಿಟೋ ಬಳಸುವುದು ಎಂದು ಒಬಾಮ ತಮ್ಮ ಜನರಲ್ ಅಸೆಂಬ್ಲಿ ಭಾಷಣದಲ್ಲಿ ಘೋಷಿಸಿದ್ದಾರೆ. ಕಳೆದ ವರ್ಷದ ಜನರಲ್ ಅಸೆಂಬ್ಲಿ ಭಾಷಣದಲ್ಲಿ ಪ್ಯಾಲೆಸ್ಟೈನ್ ವಿಶ್ವಸಂಸ್ಥೆಯ 194 ನೇ ಸದಸ್ಯ ದೇಶವಾಗುವುದು ಎಂದು ಘೋಷಿಸಿದ್ದು, 2009 ರ ಕೈರೋ ಭಾಷಣದಲ್ಲಿ ಪ್ಯಾಲೆಸ್ಟೈನ್ ಪ್ರದೇಶಗಳಲ್ಲಿ ಇಸ್ರೇಲಿ ಕಾಲೋನಿಗಳನ್ನು ನಿಲ್ಲಿಸಬೇಕು ಅಂತ ಹೇಳಿದ್ದು ಪೂರ್ತಿ ಮರೆತು ಹೋದಂತಿತ್ತು. ಅವರ ಭಾಷಣ ಕೇಳಿದವರು 'ಪ್ಯಾಲೆಸ್ಟೈನ್ ಇಸ್ರೇಲಿ ಪ್ರದೇಶಗಳನ್ನು ಆಕ್ರಮಿಸಿಕೊಂಡಿದೆ' ಎಂದನಿಸುವಂತಿತ್ತು. ಪ್ಯಾಲೆಸ್ಟೈನ್ ಸದಸ್ಯತ್ವಕ್ಕೆ ಸಮೀಕ್ಷೆಯೊಂದರ ಪ್ರಕಾರ ಅಮೆರಿಕದ ಬಹುಸಂಖ್ಯಾತ ಜನ ಬೆಂಬಲಿಸುತ್ತಾರೆ ಎಂದು ಅವರಿಗೆ ತಿಳಿದಂತಿರಲಿಲ್ಲ. ಈಗಾಗಲೇ ಅಮೆರಿಕನ ಸರ್ಕಾರ ಮತ್ತು ಒಬಾಮರ ವಿರುದ್ಧ ಭಾವನೆಗಳು ಅರಬ್ ದೇಶಗಳಲ್ಲಿ ಬಲವಾಗಿರುವಾಗ ವಿಟೋ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿ ಅಮೆರಿಕನ್ ಹಿತಾಸಕ್ತಿಗೆ ಹಾನಿ ಮಾಡುತ್ತದೆ ಎಂಬುದು ಅವರಿಗೆ ಅರಿವಾದಂತಿಲ್ಲ. ಅಮೆರಿಕದ ಬಾಲಬಡುಕ ಸರ್ಕಾರ ಇರುವ ಸೌದಿ ಅರೇಬಿಯಾದ ಮಾಜಿ ರಾಯಭಾರಿ, ಅಮೆರಿಕನ್ ವಿಟೋ ಸೌದಿ-ಅಮೆರಿಕನ್ ಸಂಬಂಧಗಳಿಗೆ ಹಾನಿಕಾರಕ ಎಂದು ಟೀಕಿಸಿದ್ದಾರೆ. ಆದರೆ ಒಬಾಮ ಪೂರ್ಣವಾಗಿ ಅಮೆರಿಕದ ಜ್ಯೂ ಲಾಬಿಗೆ ಶರಣಾದಂತಿದೆ. ಅಮೆರಿಕ ಇಸ್ರೇಲ್ ಅಪರಾಧಗಳ ಪರವಾಗಿ ಪ್ಯಾಲೆಸ್ಟೈನ್ ಹಕ್ಕುಗಳ ವಿರೋಧವಾಗಿ 40 ಬಾರಿ ವಿಟೋ ಬಳಸಿದೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.



ಅಮೆರಿಕ ವಿಟೋ ಬಳಸಿದಲ್ಲಿ ಪ್ಯಾಲೆಸ್ಟೈನ್ ಪುನಃ ಜನರಲ್ ಅಸೆಂಬ್ಲಿಗೆ ಬಂದು 'ವೀಕ್ಷಕ' ಸ್ಥಾನ ಕೋರಬೇಕಾಗುತ್ತದೆ. ಪೂರ್ಣ ಸದಸ್ಯತ್ವ ಸಿಗದಿದ್ದರೂ ಇದರಿಂದ ಯುನೆಸ್ಕೊ, ಅಂತರ್ರಾಷ್ಟ್ರೀಯ ಕ್ರಿಮಿನಲ್ ಕೋರ್ಟ್, ವಿ... ಆರೋಗ್ಯ ಸಂಸ್ಥೆ ಮುಂತಾದ ವಿಶ್ವಸಂಸ್ಥೆಯ... ಅಂಗ ಸಂಸ್ಥೆಗಳಿಗೆ ಸದಸ್ಯವಾಗಬಹುದು... ಅಂತರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ ಸದಸ್ಯ... ಗಳಿಸಿ ಇಸ್ರೇಲನ್ನು ಗಾಜಾ ಪಟ್ಟಿ ಮುಂತಾದ ಪ್ರದೇಶಗಳಲ್ಲಿ ಅದರ ಯುದ್ಧ ಅಪರಾಧಗಳಿ... ಕೋರ್ಟಿಗೆ ಎಳೆಯಬಹುದು. ಗಾಜಾ ಪಟ್ಟಿ... ಕಾನೂನು ಬಾಹಿರ ಇಸ್ರೇಲಿ ದಿಗ್ಬಂಧನ ವಿರುದ್ಧ... ಕಾನೂನು ಕ್ರಮ ಕೈಗೊಳ್ಳಬಹುದು. ಇಸ್ರೇಲಿ... ಮೇಲೆ ದಿಗ್ಬಂಧ ಕ್ರಮ ಕೈಗೊಳ್ಳಲು... ಸಹಾಯಕವಾಗಬಹುದು ಎಂದು ಪ್ಯಾಲೆಸ್ಟೈನ್... ಪ್ರಾಧಿಕಾರದ ಲೆಕ್ಕಾಚಾರ. ಈಗಾಗಲೇ 201... ರಲ್ಲಿ 26 ಯುರೋಪಿಯನ್ ನಾಯ... ಇಸ್ರೇಲಿನ ಮೇಲೆ ದಿಗ್ಬಂಧ ಹಾಕಬೇಕೆಂದು ಕ... ನೀಡಿದ್ದನ್ನು ಗಮನಿಸಬಹುದು. ಯುನೆಸ್ಕೊ... ಸದಸ್ಯತ್ವದ ಮತದಾನ ಈಗಾಗಲೇ ನಡೆದಿ... 180 ಕ್ಕೂ ಹೆಚ್ಚು ಸದಸ್ಯರಲ್ಲಿ ಅಮೆರಿಕ ಇಸ್ರೇಲಿ... ಸೇರಿದಂತೆ ಕೇವಲ 13 ದೇಶಗಳನ್ನು ಬಿಟ್ಟು... ಇತರ ಸದಸ್ಯ ದೇಶಗಳ ಪ್ರಚಂಡ ಬಹುಮತ... ಬೆಂಬಲ ಸಿಕ್ಕಿದೆ. ಒಬಾಮ ಇದರಿಂದ ಕೆರ... ಯುನೆಸ್ಕೊಗೆ ಅಮೆರಿಕದ ವಾರ್ಷಿಕ ವಂತಿ... 6 ಕೋಟಿ ಡಾಲರು (ಯುನೆಸ್ಕೊ ಬಜೆಟ್... ಶೇ. 22 ಪಾಲು) ತಡೆ ಹಿಡಿಯಲು ಆ... ಮಾಡಿದ್ದಾರೆ.

ಅಬ್ಬಾಸ್ ಕ್ರಮಕ್ಕೆ ವಿರೋಧ

ಪ್ಯಾಲೆಸ್ಟೈನ್ ಅಧ್ಯಕ್ಷ ಅಬ್ಬಾಸ್... ವಿಶ್ವಸಂಸ್ಥೆಯಲ್ಲಿ ಈ ಕ್ರಮದ ಜತೆಗೆ ಶಾಂ... ಮಾತುಕತೆಗೆ ಬಾಗಿಲು ತೆರೆದಿಟ್ಟಿದ್ದಾರೆ. 196... ರ ಗಡಿಗೆ ಮರಳುವುದು ಮತ್ತು ಇಸ್ರೇ... ಕಾಲೋನಿಗಳ ಸ್ಥಾಪನೆ ನಿಲ್ಲಿಸುವ ಶರತ್ತ... ಹಾಕಿದ್ದಾರೆ. 1993 ರ ಒಸ್ಲೊ... ಒಪ್ಪಂದದ ನಂತರ 6 ಲಕ್ಷ ಇಸ್ರೇ... ಜ್ಯೂಗಳು ಪ್ಯಾಲೆಸ್ಟೈನ್ ಪ್ರದೇಶಗಳ... ಬಲವಂತವಾಗಿ ಕಾಲೋ... ಕಟ್ಟಿಕೊಂಡು ನೆಲೆಸಿದ್ದಾರೆ... ವಿಶ್ವಸಂಸ್ಥೆಯಲ್ಲಿ ಈ ಕ್ರಮದ ಫಲವಾ... ಅಮೆರಿಕ, ರಶ್ಯ ಮತ್ತು... ಯುರೋಪಿಯನ್ ಕೂ... ಜಂಟಿಯಾಗಿ ಪ್ಯಾಲೆಸ್ಟೈನ್-ಇಸ್ರೇ... ಶಾಂತಿ ಮಾತುಕತೆ ತ್ವರಿತಗೊಳಿಸಲು... ಮಧ್ಯಸ್ತಿಕೆ ವಹಿಸುವುದಾ... ಘೋಷಿಸಿದ್ದಾರೆ.

ಆದರೆ ಅಧ್ಯಕ್ಷ ಅಬ್ಬಾಸ್ ಅವ... ಈ ಕ್ರಮಕ್ಕೆ ಪ್ಯಾಲೆಸ್ಟೈನ್ ಒಳಗೆ ವಿರೋಧ... ಇಲ್ಲದಿಲ್ಲ. ಪ್ಯಾಲೆಸ್ಟೈನ್ ಪ್ರದೇಶಗಳ ವಿಮೋಚ... ಮತ್ತು ಏಕೀಕರಣ ಇಂದಿನ ಆದ್ಯತೆ. ಸಾರ್ವಭೌ... ದೇಶವಾಗಿ ಮಾನ್ಯತೆಯಿಂದ ಏನ... ಸಾಧಿಸಿದಂತಾಗುವುದಿಲ್ಲ. 1988 ರಲ್ಲಿ ಅರಾಫತ...

ಪುಟ 16 ರಿಂದ

ದುರ್ಬಲಗೊಳಿಸಿ ತನ್ನ ಅಜೆಂಡಾವನ್ನು ನನಸಾಗಿಸಿಕೊಳ್ಳಲು ಬಿ.ಜೆ.ಪಿ ಹೊರಟಿದೆ. ಈ ದೇಶವನ್ನು ಭ್ರಷ್ಟರು, ಕಳ್ಳರು, ಶಿಕ್ಷಣ ವಿರೋಧಿಗಳು ಆಳುತ್ತಿದ್ದಾರೆ. ಅಂತವರನ್ನು ಜೈಲಿಗೆ ಕಳಿಸುವಂತಹ ಬಲಿಷ್ಠಚಳುವಳಿ ನಡೆಯುವಂತಾಗಲಿ. ಈ ರಾಜ್ಯದ ಶೈಕ್ಷಣಿಕ ಪ್ರಗತಿಗಾಗಿ ಶ್ರಮಿಸಲು, ವೈಜ್ಞಾನಿಕವಾಗಿ ಜನರನ್ನು ಪರಿವರ್ತಿಸಲು ಎಸ್.ಎಫ್.ಐ ನ 12 ನೇ ರಾಜ್ಯ ಸಮ್ಮೇಳನ ವಿದ್ಯಾರ್ಥಿ ಚಳುವಳಿಗೆ ಹೊಸ ಸ್ಪೂರ್ತಿ ನೀಡಲಿ ಎಂದು. ದೇಶದ ಐಕ್ಯತೆಗಾಗಿ ಎಸ್.ಎಫ್.ಐ ಮುಂಚುಣಿಯಲ್ಲಿ ನಿಲ್ಲಲಿ ಎಂದು ಚಂಪಾ ಉದ್ಘಾಟನಾ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಬದ್ಧತೆ ನನ್ನನ್ನು ಆಕರ್ಷಿಸಿತು: ಎಸ್.ಎಫ್.ಐ ನ ಬದ್ಧತೆ, ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಟ ನಡೆಸುವ ರೀತಿ ಬಂಡಾಯ ಸಾಹಿತಿಯಾಗಿರುವ ನನ್ನನ್ನು ಆಕರ್ಷಿಸಿತು ಎಂದು ಕ್ರಾತಿಕಾರಿಗೀತೆಗಳ ರಚನೆಕಾರ ಸತೀಶ ಕುಲಕರ್ಣಿಯವರು ಮನ ಬಿಚ್ಚಿ ಮಾತನಾಡಿದರು. ಸರಕಾರ ಶಿಕ್ಷಣವನ್ನು ವ್ಯಾಪಾರ ಮಾಡಲು ಹೊರಟಿದೆ ಇದನ್ನು ತಡೆಗಟ್ಟಲು ಎಸ್.ಎಫ್.ಐ ನಿಂದ ಮಾತ್ರ ಸಾಧ್ಯ. ಎಸ್.ಎಫ್.ಐ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ಅದು ಇನ್ನಷ್ಟು ಬಲಿಷ್ಠಗೊಳ್ಳಲಿ ಎಂದು ಸ್ವಚರಿತ ಕ್ರಾಂತಿಗೀತೆ ಹಾಡಿ ವಿದ್ಯಾರ್ಥಿಗಳಿಗೆ ಸ್ಪೂರ್ತಿ ನೀಡಿದರು.

ಶಿಕ್ಷಣ ಹಾಳು ಮಾಡುತ್ತಿರುವ ಸರಕಾರಗಳು: ಕೇಂದ್ರ ಮತ್ತು ರಾಜ್ಯ ಸರಕಾರ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡದೆ ಲೂಟಿ ಮಾಡುವುದರಲ್ಲಿ ನಿರತರಾಗಿದ್ದಾರೆ. ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯಪುಸ್ತಕ ಶಿಷ್ಯವೇತನವನ್ನು ಸಕಾಲದಲ್ಲಿ ನೀಡದೆ,



ಸುಳ್ಳು ಭರವಸೆಗಳ ಮೂಲಕ ವಿದ್ಯಾರ್ಥಿಗಳನ್ನು ನಿರಾಶಾದಾಯಕ ಸ್ಥಿತಿಗೆ ತಳ್ಳಿದ್ದಾರೆ. ಶತಮಾನೋತ್ಸವ ಆಚರಿಸುತ್ತಿರುವ ಶಾಲೆಗಳು ರಾಜ್ಯದಲ್ಲಿ ಸಾಕಷ್ಟು ಇವೆ. ಅವುಗಳನ್ನು ಬಲಪಡಿಸುವುದನ್ನು ಬಿಟ್ಟು ಶಾಲೆ ಮುಚ್ಚಲು ಹೊರಟಿರುವುದು ಖೇದಕರ ಸಂಗತಿ ಎಂದು ಜಿ.ಪಂ ಸದಸ್ಯರಾದ ವಿರೂಪಾಕ್ಷಪ್ಪ ಬಳ್ಳಾರಿಯವರು ಮಾತನಾಡಿದರು. ಎಸ್.ಎಫ್.ಐ ನ ಕೇಂದ್ರ ಸಮಿತಿ ಜಂಟಿ ಕಾರ್ಯದರ್ಶಿ ಶಿವದಾಸನ್ ಮಾತನಾಡಿ ಕರ್ನಾಟಕದಲ್ಲಿ ಶಿಕ್ಷಣ ಹಿನ್ನಡೆಗೆ ಬಿಜೆಪಿಯ ಕೋಮುವಾದಿನೀತಿಗಳೇ ಕಾರಣ ಇದರವಿರುದ್ಧ ಸಂಘರ್ಷಾತ್ಮಕ ಹೋರಾಟ ನಡೆಸುವುದು ಅಗತ್ಯವಿದೆ ಎಂದರು. ಪ್ರಾಸ್ತಾವಿಕವಾಗಿ ಎಸ್.ಎಫ್.ಐ ರಾಜ್ಯಕಾರ್ಯದರ್ಶಿ ಅನಂತ್ ನಾಯ್ಕ್ ಮಾತನಾಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಎಸ್.ಎಫ್.ಐ ರಾಜ್ಯಾಧ್ಯಕ್ಷರಾದ ಹೆಚ್.ಆರ್.ನವೀನ್ ಕುಮಾರ್ ಮಾತನಾಡಿ ದೇಶ ಮತ್ತು ರಾಜ್ಯದ ಸರಕಾರಗಳು ಪ್ರಮುಖ ನಾಯಕರು ಜೈಲು ಯಾತ್ರ ಆರಂಭಿಸಿದ್ದಾರೆ. ಇವರು ಮಾಡಿದ ಭ್ರಷ್ಟಾಚಾರದಿಂದಗಿ ಶಿಕ್ಷಣಕ್ಕೆ ಮೀಸಲಿರಿಸಬೇಕಿದ್ದ ಹಣ ದುರ್ಬಳಕೆಯಾಗಿ ಶಿಕ್ಷಣ ಕೇತ್ರ ನರಳುವಂತಾಯಿತು. ಶಾಂತಿ ತಾಣವಾಗಿದ್ದ ಕರ್ನಾಟಕದಲ್ಲಿ ಕೋಮುಗಲಭೆ ಎಬ್ಬಿಸಿ ಅಶಾಂತಿಗೆ ಕಾರಣರಾಗಿ ರಾಜ್ಯದ ಅಭಿವೃದ್ಧಿ ಹಿನ್ನಡೆಯಾಗುವಂತೆ ಮಾಡಿದರು ಎಂದರು. ವೇದಿಕೆಯ ಮೇಲೆ ಎಸ್.ಎಫ್.ಐ ನ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಜರಿದ್ದರು. ಕಾರ್ಯಕ್ರಮವನ್ನು ಬಸವರಾಜ್ ಪೂಜಾರ್ ನಿರೂಪಿಸಿದರು. ರೇಣುಕಾ ಸ್ವಾಗತಿಸಿದರೆ ಜ್ಯೋತಿ ವಂದಿಸಿದರು. ಇದಕ್ಕೆ ಮುಂಚೆ ಹಾವೇರಿಯ ಬೀದಿ ಬೀದಿಗಳಲ್ಲಿ ಆಕರ್ಷಣೆಯಿಂದ ಕೂಡಿದ್ದ ಬೃಹತ್ ರ್ಯಾಲಿ ಜನಮನ ಸೆಳೆಯಿತು. ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಘೋಷಣೆಗಳು ಮೊಳಗಿದವು. ಎಸ್.ಎಫ್.ಐ ನ ಶ್ವೇತ ಪತಾಕೆಯನ್ನು ಹಿಡಿದು ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಎಸ್.ಎಫ್.ಐ ನಾಯಕರು ರ್ಯಾಲಿಯಲ್ಲಿ ಪಾಲ್ಗೊಂಡಿದ್ದರು.

ಪೆಟ್ರೋಲ್ ದರ ಏರಿಕೆ ವಿರುದ್ಧ ಐಕ್ಯ ಹೋರಾಟ ಸಿಪಿಐ(ಎಂ) ಕರೆ

ಆಹಾರ ಧಾನ್ಯ ಹಣದುಬ್ಬರ 12:21 ರ ಪ್ರಮಾಣ ತಲುಪಿದ ದಿನದಂದೇ ಕೇಂದ್ರದ ಯುಪಿಎ ಸರ್ಕಾರ ಪೆಟ್ರೋಲ್ ದರವನ್ನು ಪ್ರತಿ ಲೀಟರ್ – 1.80 ರೂಪಾಯಿಯಷ್ಟು ಏರಿಕೆ ಜನತೆಯ ಮೇಲೆ ಭಾರೀ ಪ್ರಹಾರ ನಡೆಸಿದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಪೆಟ್ರೋಲ್‌ಲಿಯಂ ಉತ್ಪನ್ನಗಳ ಮೇಲೆ ಕೇಂದ್ರ ಸರ್ಕಾರ ನಿಯಂತ್ರಣವನ್ನು ತೆಗೆದು ಹಾಕಿರುವ ಕ್ರಮದಿಂದಾಗಿ – ಈ ರೀತಿ ತೈಲ ಬೆಲೆಗಳು ಏರಿಕೆಯಾಗುತ್ತವೆ. ಇದರಿಂದಾಗಿ ಜನ ನಿತ್ಯವಾರು ಬಳಸುವ ಎಲ್ಲಾ ಅಗತ್ಯ ವಸ್ತುಗಳು ಗಗನ ತಲುಪಿವೆ. ವಸ್ತುಗಳ ಬೆಲೆಗಳು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಏರಿಕೆಯಾಗದಿದ್ದರೂ ಕೇಂದ್ರ ಸರ್ಕಾರ ಮಾತ್ರ ಈ ಬೆಲೆ ಏರಿಕೆ ಮಾಡಿರುವುದು ಜನತೆಗೆ ಮಾಡಿದ ದ್ರೋಹವಾಗಿದೆ. ಹೀಗಾಗಿ ಎಲ್ಲಾ ಘಟಕಗಳು ಸಹಿಸಲಸಾಧ್ಯವಾದ ಈ ಬೆಲೆ ಏರಿಕೆ ವಿರುದ್ಧ ಸಾಮೂಹಿಕ ಪ್ರತಿಭಟನೆ, ಪಿಕೆಟಿಂಗ್‌ನಂತಹ ಚಳುವಳಿಗಳು ಹಮ್ಮಿಕೊಳ್ಳಬೇಕೆಂದು ಕರೆ ನೀಡಿದೆ.

ಪ್ಯಾಲೆಸ್ಟೈನ್ ಚಾರಿತ್ರಿಕ ಕ್ರಮ

–ಪುಟ 14 ರಿಂದ

ಪ್ರಯತ್ನಗಳ ಫಲವಾಗಿ 120 ದೇಶಗಳು ಪ್ಯಾಲೆಸ್ಟೈನಿಗೆ ಮಾನ್ಯತೆ ನೀಡಿವೆ. ಆದರೆ ಅದರಿಂದ ಏನೂ ಪ್ರಯೋಜನವಾಗಿಲ್ಲ. ಅಂತರಾಷ್ಟ್ರೀಯ ಕೋರ್ಟ್ 2004 ರಲ್ಲಿ ಇಸ್ರೇಲ್ ಕಟ್ಟಿದ ಗೋಡೆ ಮೇಲೆ ನೀಡಿದ ತೀರ್ಪು, ಗಾಜಾ ಯುದ್ಧ ಅಪರಾಧಗಳ ಬಗ್ಗೆ ಗೋಲ್ಡ್ ಸ್ಟನ್ ವರದಿಗಳ – ಆಧಾರದ ಮೇಲೆ ಇಸ್ರೇಲ್ ವಿರುದ್ಧ ಕ್ರಮ ಕೈಗೊಳ್ಳುವ ಪ್ರಯತ್ನವನ್ನು ಅಮೇರಿಕದ ಒತ್ತಡದಿಂದಾಗಿ ಬಿಟ್ಟುಕೊಟ್ಟಿದೆ.

1967 ರ ಗಡಿಯನ್ನು ಒಪ್ಪಿಕೊಳ್ಳುವುದು 1967 ರ ಯುದ್ಧದ ನಂತರ ಇತರ ಅರಬ್ ದೇಶಗಳಿಗೆ ಓಡಿ ಹೋಗಿ ನಿರಾಶ್ರಿತರಂತೆ ವಾಸಿಸುತ್ತಿರುವ ಪ್ಯಾಲೆಸ್ಟೈನ್ ಜನರ 'ಸ್ವದೇಶಕ್ಕೆ ಮರಳುವ ಹಕ್ಕ'ನ್ನು ಬಲಿ ಕೊಟ್ಟಂತೆ. 1967 ರ ಗಡಿಯನ್ನು ಒಪ್ಪಿಕೊಂಡರೆ ರಚಿತವಾಗುವ ಪ್ಯಾಲೆಸ್ಟೈನ್ ಮೂಲ ನಾಡಿನ ಶೇ. 22 ಪ್ರದೇಶವನ್ನೂ ಹೊಂದಿರುವುದಿಲ್ಲ. ಅದರಲ್ಲೂ ಬರುವ ಪ್ರದೇಶಗಳಲ್ಲಿ ಇಸ್ರೇಲಿ ಕಾಲೋನಿಗಳು ಅತ್ಯಂತ ಫಲವತ್ತಾದ ಪ್ರಮುಖ ಪ್ರದೇಶಗಳನ್ನು ಆಕ್ರಮಿಸಿಕೊಂಡಿವೆ ಎಂದು ವಿರೋಧಿಗಳ ಇನ್ನೊಂದು ಪ್ರಮುಖ ಅಂಶ.

ಹಾಮಾಸ್ ಮತ್ತು ಇಸ್ಲಾಮಿಕ್ ಜಿಹಾದ್ ಗಳು ಅಧ್ಯಕ್ಷ ಅಬ್ಬಾಸ್ ಅವರ ಕ್ರಮವನ್ನು ವಿರೋಧಿಸಿವೆ. ಎಡಪಂಥೀಯ ಪಿ.ಎಫ್.ಎಲ್.ಪಿ. ಅಬ್ಬಾಸ್ ಅವರ ಕ್ರಮವನ್ನು ಇಸ್ರೇಲ್ ಅತಿಕ್ರಮಣದ ವಿರುದ್ಧ ಹೋರಾಟದ ಒಂದು ಅಂಶವಾಗಿ ಮಾತ್ರ ಒಪ್ಪಿಕೊಂಡಿವೆ. ಇದು ಅಮೆರಿಕನ್ ಯಜಮಾನಿಕೆ ಒಪ್ಪಿಕೊಳ್ಳುವುದರಲ್ಲಿ ಕೊನೆಯಾಗಬಾರದು ಎಂದು ಎಚ್ಚರಿಕೆ ನೀಡಿದೆ.

ಬಿಜೆಪಿ ದರ್ಬಾರ್

ಪುಟ 11 ರಿಂದ

ಯಾವುದಾದರೂ ಒಂದು ಸಚಿವ ಖಾತೆ ಗ್ಯಾರಂಟಿ. ಆಹಾ ಬಿಜೆಪಿ ಸಚಿವ ಸಂಪುಟದ ಸೊಗಸೇ ಸೊಗಸು.

● ದೇಶಕ್ಕೆ ಅನ್ನ ಬೆಳೆಯುವ ರೈತ ತನ್ನ ನೀರಾವರಿ ಪಂಪ್ ಸೆಟ್‌ಗಳಿಗೆ ತಾನೇ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡು ಬಿಟ್ಟಿದ್ದರೆ, ಅದನ್ನು ಅಕ್ರಮ ಸಂಪರ್ಕ, ಅಪರಾಧ ಅಂತ ಬೆದರಿಸಿ, ದಂಡ ವಸೂಲಿ ಮಾಡಲು ಯತ್ನಿಸುವುದು. ಇವೆಲ್ಲಾ ಜಾಗತೀಕರಣ ನೀತಿಗಳ ಭಾಗ. ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ಇವೆಲ್ಲಾ ಜೋರಾಗಿ ನಡೆದವು. ಕೃಷ್ಣರ ಕಾಂಗ್ರೆಸ್ ಚುನಾವಣೆಯಲ್ಲಿ ಮಣ್ಣು ಮುಕ್ಕಿದ ಮೇಲೆ ಅದು ಸ್ವಲ್ಪ ಕಮ್ಮಿಯಾಗಿತ್ತು. ಈಗ ನಮ್ಮ ಸದಾನಂದ ಗೌಡರ ಸರ್ಕಾರ ಅದೇ ದಾಟಿಯಲಿ ಮತ್ತೆ ಹೆಜ್ಜೆ ಇಡುವಂತೆ ಕಾಣುತ್ತಿದೆ 10,000ರೂಪಾಯಿ ದಂಡ ಕಟ್ಟಿ ಸಕ್ರಮ ಮಾಡಿಕೊಳ್ಳಿ ಅಂತ ಬಿಜೆಪಿ ಸರ್ಕಾರ ವರಾತ ಶುರುವಿಟ್ಟುಕೊಂಡಿದೆ.

● ಇಂಧನ ಇಲಾಖೆಯಲ್ಲಿ ಆದಾಯದ ಅನುಪಾತವನ್ನು ಮೀರಿ ವಿಪರೀತ ಆಸ್ತಿ ಮಾಡಿಕೊಂಡಿದ್ದ ಆರೋಪದ ಅಡಿಯಲ್ಲಿ ಸಿಕ್ಕಿಬಿದ್ದು ಲೋಕಾಯುಕ್ತ ವಿಚಾರಣೆ ಎದುರಿಸುತ್ತಿರುವ ಆ ವ್ಯಕ್ತಿಯ ಹೆಸರು ವೆಂಕಟಶಿವಾರೆಡ್ಡಿ. ಅವರ ಸಿಕ್ಕಿ ಬಿದ್ದ 12.20 ಕೋಟಿ ಆಸ್ತಿಯಲ್ಲಿ 8.31 ಕೋಟಿ ಅವರ ಆದಾಯ ಮೀರಿದ ಆಸ್ತಿ ಅಂತ ಲೋಕಾಯುಕ್ತ ವಿಚಾರಣೆ ನಡೆಯುತ್ತಿದೆ. ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ಈಗ ಅವರಿಗೆ ಭಡ್ತಿ ಯೋಗ. ಅವರೀಗ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್)ನ ನಿರ್ದೇಶಕರಲ್ಲಿ ಒಬ್ಬರು. ಅಮ್ಮ ಈ ಬಿಜೆಪಿ ದರ್ಬಾರ್‌ನಲ್ಲಿ ಯಾರು ಏನು ಬೇಕಾದರೂ ಆಗಬಹುದು.

JANASHAKTHI KANNADA VARA PATRIKE NOV 13, 2011 Price : Rs. 5/- RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO



‘ಸರಕಾರದ ಖಾಸಗಿ ಶಿಕ್ಷಣ ಪ್ರೀತಿ ; ಬಡಜನರ ಶಿಕ್ಷಣ ಹಕ್ಕು ಕಸಿಯುವ ಹುನ್ನಾರ’

ಪ್ರೊ. ಚಂಪಾ

ವರದಿ : ಗುರುರಾಜ ದೇಸಾಯಿ

ರಾಜ್ಯ ಸರಕಾರ ಸರಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವುದು ಸರಕಾರದ ಖಾಸಗಿ ಶಿಕ್ಷಣದ ಪ್ರೀತಿಯನ್ನು ಎತ್ತಿ ತೋರಿಸುತ್ತದೆ. ಇದರಿಂದಾಗಿ ಬಡಜನರ ಶಿಕ್ಷಣದ ಹಕ್ಕನ್ನು ಕಸಿಯುವ ಹುನ್ನಾರವಾಗಿದೆ. ಇದರಿಂದ ಅವರ ಕಲಿಕೆಗೆ ಪೆಟ್ಟು ಬೀಳುತ್ತದೆ ಎಂದು ಪಂಪ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಪಾಟೀಲ್ ಹೇಳಿದರು. ಅವರು ಹಾವೇರಿಯ ಗುರುಭವನದಲ್ಲಿ ನಡೆದ ಎಸ್.ಎಫ್.ಐ ನ 12ನೇ ರಾಜ್ಯ ಸಮ್ಮೇಳನವನ್ನು, ಉತ್ತರ ಕರ್ನಾಟಕದ ಪ್ರಮುಖ ಜನಪದ ಕಲೆಗಳಲ್ಲಿ ಒಂದಾದ ಡೊಳ್ಳು ಬಡಿತವನ್ನು ಬಾರಿಸುವ ಮೂಲಕ ಚಾಲನೆ ನೀಡಿದರು.



ಹಾವೇರಿ ಗೋಗಾಕ್ ಚಳುವಳಿ, ಕರ್ನಾಟಕ ಏಕೀಕರಣಕ್ಕಾಗಿ, ಪ್ರಗತಿಪರ ವಿಚಾರಗಳಿಗಾಗಿ ಚಳುವಳಿ ನಡೆಸಿರುವ ಪ್ರಮುಖ ಜಿಲ್ಲೆ ಇಂತಹ ಜಿಲ್ಲೆಯಲ್ಲಿ ಎಸ್.ಎಫ್.ಐ ನ 12 ನೇ ರಾಜ್ಯ ಸಮ್ಮೇಳನ ನಡೆಯುತ್ತಿರುವುದು. ಹೆಮ್ಮೆಯ ಸಂಗತಿ ಮತ್ತು ನನ್ನ ತವರೂರಲ್ಲಿ ಸಮ್ಮೇಳನವನ್ನು ಉದ್ಘಾಟಿಸುತ್ತಿರುವುದು ನನಗೆ ಸಂತಸ ತಂದಿದೆ. ಪ್ರಸ್ತುತ ಸಮಸ್ಯೆಗಳನ್ನು ಕೈಗೆತ್ತಿಕೊಂಡು, ಸೂಕ್ಷ್ಮ ವಿಚಾರಗಳನ್ನು ಅವಲೋಕಿಸಿ, ವೈಜ್ಞಾನಿಕ ವಿಚಾರಗಳನ್ನು ಬಿತ್ತರಿಸುತ್ತಿರುವ ಎಸ್.ಎಫ್.ಐ ರಾಜ್ಯ ಸಮ್ಮೇಳನ ವಿದ್ಯಾರ್ಥಿ ಚಳುವಳಿಯನ್ನು ಗಟ್ಟಿಗೊಳಿಸಲು ಸಹಕಾರಿಯಾಗುತ್ತದೆ. ಈ ಸಮಾಜದಲ್ಲಿ ಏನಾದರು ಪರಿವರ್ತನೆಯಾಗಬೇಕಾದರೆ ಇಂದಿನ ವಿದ್ಯಾರ್ಥಿ-ಯುವ ಪೀಳಿಗೆಯಿಂದ ಮಾತ್ರ ಸಾಧ್ಯ ಎಂದರು.

ಶಿಕ್ಷಣ ಎಂದರೆ ಅರಿವು ಮೂಡಿಸುವುದು. ಆದರೆ ಮನೆ, ಆಹಾರ, ಶಿಕ್ಷಣ ಇಲ್ಲದೆ ಜನರು ಸೊರಗುತ್ತಿದ್ದಾರೆ. ಚುನಾಯಿತ ಪ್ರತಿನಿದಿಗಳು ಮತ್ತು ಸರಕಾರ ತಮ್ಮ ಜವಬ್ದಾರಿಯನ್ನು ಮರೆತಿವೆ. ದೇಶಕ್ಕೆ ಅನುಕೂಲಕರವಾದ ಆರ್ಥಿಕ ಯೋಜನೆಯನ್ನು ರೂಪಿಸಲಾಗುತ್ತಿಲ್ಲ, ಜನ ಆರ್ಥಿಕವಾಗಿ ಶೋಷಣೆ ಅನುಭವಿಸುತ್ತಿದ್ದಾರೆ. ಸರಕಾಗಳು ಕಣ್ಮುಚ್ಚಿ ಕುಳಿತಿವೆ. ಜಾಗತೀಕರಣ, ಉದಾರೀಕರಣ, ವ್ಯಾಪಾರೀಕರಣಗಳ ಜೊತೆ ಕೋಮುವಾದಿಕರಣ ಸೇರಿಕೊಂಡು ನಾಲ್ಕು ಕರಣಗಳು ದೇಶಕ್ಕೆ ಅಪಾಯಕಾರಿಯಾಗಿವೆ. ರಾಜ್ಯದಲ್ಲಿ ಸರಕಾರಿ ಶಾಲೆಗಳನ್ನು ಮುಚ್ಚಲು ಸರಕಾರ ಚಿಂತನೆ ನಡೆಸಿದೆ. ಅದನ್ನು ಖಂಡಿಸಿ ಎಸ್.ಎಫ್.ಐ ನಡೆಸುತ್ತಿರುವ ಹೋರಾಟಕ್ಕೆ ನಾನು ಬೆಂಬಲವನ್ನು ನೀಡುತ್ತಿದ್ದೇನೆ. ವಿಲೀನದ ಹೆಸರಲ್ಲಿ ಶಾಲೆಗಳನ್ನು ಮುಚ್ಚುವ ಮೂಲಕ ಮತ್ತು ವಿಲೀನದ ಹೆಸರಲ್ಲಿ ಜನರನ್ನು ದಿಕ್ಕು ತಪ್ಪಿಸುವ ಕೆಲಸಕ್ಕೆ ಮುಂದಾಗಿದೆ. ಮೂಲ ಕಾರಣಗಳಿಗೆ ಪರಿಹಾರ ಕಂಡುಕೊಳ್ಳದೆ ಶಾಲೆಗಳನ್ನು ಮುಚ್ಚಿಹಾಕಿ ಬಡವರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲು ಹೊರಟಿದೆ. ಬಡಜನರ ಶಿಕ್ಷಣದ ಬಗ್ಗೆ ಕಾಳಜಿ ಇಲ್ಲದ ಸರಕಾರಗಳಿಂದ ಶಿಕ್ಷಣದ ಸ್ಥಿತಿ ದಯನೀಯ ಸ್ಥಿತಿ ತಲುಪಿದೆ. ಕನ್ನಡ ಶಾಲೆಗಳನ್ನು ಮುಚ್ಚುವ ಬದಲು, ಭಾಷಾನೀತಿ ಉಲ್ಲಂಘಿಸಿ, ಅನಧಿಕೃತವಾಗಿ ಶಾಲೆ ನಡೆಸುತ್ತಿರು ಖಾಸಗಿ ಇಂಗ್ಲೀಶ್ ಶಾಲೆಗಳನ್ನು ಮುಚ್ಚಲು ಸರಕಾರ ಧೈರ್ಯ ಮಾಡಲಿ. ಸರಕಾರಿ ಶಾಲೆಗಳಿಗೆ ಮೂಲ ಸೌಲಭ್ಯ ಮತ್ತು ಅಗತ್ಯ ಶಿಕ್ಷಕರನ್ನು ನೇಮಿಸಿ, ಶಾಲೆಗಳನ್ನು ಬಲಪಡಿಸಲು ಮುಂದಾಗಲಿ. ಶಾಲೆಗಳನ್ನು ಸಂಘಪರಿವಾರದವರಿಗೆ ದತ್ತು ನೀಡಿ, ಭಗವದ್ಗಿತೆ, ಮನುಸ್ಮೃತಿ, ಧಾರ್ಮಿಕ ವಿಚಾರಗಳನ್ನು ಹೇಳಿ ಅವರ ಮನಸನ್ನು

ಪುಟ 15ಕ್ಕೆ



ಕವನ

ಬರ

ಸಿಡಿಲು ಬಡಿದು ಸತ್ತಂತೆ
ಅಂಗಾತ ಬಿದ್ದಿರುವ ನೆಲ;
ಮೋಡಗಳಿಲ್ಲದ ಬಾನಿನಲ್ಲಿ
ಕರಾಳ ಮೌನ.
ಬೆಂಕಿರೋಗ ಬಿದ್ದಂತೆ
ಸುಟ್ಟು ಕರಕಲಾದ ಪೈರು
ಹನಿ ಹನಿ ನೀರಿಗಾಗಿ
ಬಾಯಿ ಬಿಡುವ ಗುಬ್ಬಿ
ಕುದಿ ಕಾರ್ತಿಗಳ
ಬರೀ ಒಣಧಗೆಯಲ್ಲಿ
ಬೆಂದು ಹೋದ ಬದುಕು.
ನಿಲ್ಲಲು ಕಾಲಿಲ್ಲ ಕಸುವಿಲ್ಲದ
ಮಣ್ಣಿನ ಮಗನ
ಕರುಣಾಜನಕ ಸ್ಥಿತಿ.
ಬರಿದಾದ ತುಂಗೆಯ ಒಡಲು
ನನ್ನವ್ವನ ಖಾಲಿ ಹೊಟ್ಟೆಯಂತೆ.
ಒಣಗಿದ ಕೆರೆ ಅಂಗಳದಲ್ಲಿ
ಕೊಕ್ಕರೆಯ ಸಾವು.
ಒಣಗಿ ಹೋದ ಮರದಂತೆ
ಬಡಕಲಾಗಿ ನಿಂತಿರುವ ಅಪ್ಪನ
ಕಣ್ಗಳಲ್ಲಿ
ಕಮರಿ ಹೋದ ಕನಸುಗಳು
ಬದುಕ ಬೆನ್ನಿನ ಮೇಲೆ
ಬರೆ ಎಳೆದ 'ಬರ'ದ ಕ್ರೌರ್ಯ.
ಕೆಲವರಿಗೆ ಬರದಲ್ಲೂ ಹಬ್ಬ,
ಕಾಳ ಸಂತೆಕೋರರಿಗೆ
ಭರಪೂರ ಸುಗ್ಗಿ
ಸತ್ತವರ ಹೆಣಕ್ಕಾಗ್ಗಿ ಮುಗಿ ಬಿದ್ದ
ಹದ್ದುಗಳು
ಬರ ಎಂದರೆ ನಮಗೊಂದು ವರ
ಎನ್ನುವವರದ್ದೇ ಅಧಿಕಾರ.
ಮನುಷ್ಯತ್ವಕ್ಕೂ ಬಂದಿದೆ ಬರ
ಇನ್ನು ಸಿಗುವುದಾದರೂ ಹೇಗೆ?
ನೊಂದವರಿಗೆ ಪರಿಹಾರ

-ಹುಲಿಕಟ್ಟಿ ಚನ್ನಬಸಪ್ಪ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH